ಕಸದ ಡಬ್ಬಿಗಳು

(ಇಪ್ಪತ್ತನಾಲ್ಕು ಹರಟೆಗಳು)

ಕುಡ್ವಿ ವಾಸುದೇವ ಶೆಣೈ

ಪ್ರಕಾಶಕರು: ಪ್ರಭಾತ, ಮಂಗಳೂರು.

1949

ಳಲ್ಲಿ
ದರೊಂದು
ಲ್ಲ;
ಅಕ್ರಮಗಳು.
ುದೇವ ಶೆಣೈ.

PRINTED AT

THE PRABHAT PRINTERS, LTD., MANGALORE.

ಮುದ್ರಕರು:

ತ ಪ್ರಿಂಟರ್ಸ್, ಲಿಮಿಟೆಡ್, ಮಂಗಳೂರು.

ಕಸ

ಇದು ಉಪೋದ್ಘಾತವಲ್ಲ. 'ಕಸದ ಡಬ್ಬಿ'ಗೊಂದು ಕಸ. ಕಸವನ್ನು ಕಸವೆಂದೇ ಕರೆದಿದ್ದೇನೆ.

"**ಕಸದ ಡಬ್ಬಿಗಳು** ಮತ್ತು ಇತರ ನನ್ನ ಹರಟೆಗಳ"ನ್ನು ನಾನಃ ನನ್ನ 'ಯತ್ನ'ಗಳೆಂದಾಗಲಿ 'ಕೃತಿ'ಗಳೆಂದಾಗಲಿ ಹೇಳುವುದಿಲ್ಲ. ಅವು, ಕೇವಲ, ಆಗಾಗ್ಗೆ, ಆಲಸ್ಯದ ಕ್ಷಣಗಳಲ್ಲಿ ಅಸ್ಪಷ್ಟವಾಗಿ ಮಿದುಳಿನಲ್ಲಿ (ಅಂತಹ ಒಂದು ವಸ್ತು ಇದ್ದರೆ) ರೂಪವೆತ್ತಲು ಕಾದಾಡಿಕೊಳ್ಳುತಿದ್ದ—ಕದಡಿದ—ಕರಡು ಭಾವನೆಗಳು. ಅವುಗಳನ್ನು ನಾನು ಏಕೆ ಬರೆದೆ ಎಂಬ ಬಗ್ಗೆ ನನ್ನೊಡನೆ ವಿವರಣೆ ಇಲ್ಲ.

ಕಡಲ ಕರೆಯಲ್ಲಿ ಬಿದ್ದಿರುವ ಮಳಲಿನಲ್ಲಿ ಓಡ್ಯಾಡುವ ಮಕ್ಕಳು ಆಗಾಗ್ಗೆ ನಿಂತು ಕೈಗಳಿಂದಲೂ ಕಾಲಿನಿಂದಲೂ ನಾನಾ ಗೊಂಬೆಗಳನ್ನೂ 'ಮನೆ'ಗಳನ್ನೂ ರಚಿಸುವುದುಂಟು; ಅವುಗಳು ತೆರೆಯ ಹೊಡೆತದಿಂದ ಮಾಸುವುದೂ ಉಂಟು. ಆ ಗೊಂಬೆಗಳನ್ನೂ ಮನೆಗಳನ್ನೂ ಮಕ್ಕಳು ಏಕೆ ಕಟ್ಟುವುವು ಎಂದು ಕೇಳಲಾಗದು. ಈ ಹರಟೆಗಳು, ಆ ಮಕ್ಕಳ ಅಂತಹ ಚಿತ್ರಗಳಂತೆ.

ಪುನಃ, ಆ ತೆರೆಗಳು ಆ ಚಿತ್ರಗಳನ್ನು ಏಕೆ ಕೊಚ್ಚಿ ಅಳಿಸಿ ಒಯ್ಯುವುವು—ಎಂದರೆ, ಆ ಸೃಷ್ಟಿಗೆ ಈ ಲಯ ಎಂದಿಷ್ಟೆ ಉತ್ತರ. ತೆರೆಯಿಂದ ದೂರವಾದುವು ಅಲ್ಪಕಾಲ ಉಳಿವುವು.

ನಾವೆಲ್ಲ ಬೆಳೆದ ಮಕ್ಕಳು, ಸಾಹಿತ್ಯದ ಕಡಲ ದಂಡೆಯಲ್ಲಿ ಆಡುವೆವು. ಆಡಬೇಡವೆನ್ನುವವರಾರು? ಆ ಮಳಲ ಗೊಂಬೆಗಳನ್ನು ಮಾಡಬೇಡವೆನ್ನುವವರಾರು?—

ಅಜಾಂತದ ಚಿತ್ರಗಳನ್ನು ಮೆಚ್ಚುವ ಕಲಾಜ್ಞಾನಿಯು, ನಾಜೂಕಾದ ಶಿಲ್ಪವನ್ನು ಮೆಚ್ಚುವ ಕಲಾವಿದನು—ಕೆಲವೊಮ್ಮೆ, ಕೆಲವು ಮಳಲ ಗೊಂಬೆಗಳನ್ನೂ ನೋಡಿ :ಸಂತೋಷಪಡುವನು. ಅವನು ಮೆಚ್ಚಿದ ಚಿತ್ರಗಳು, ಮನಸ್ಸಿನಲ್ಲಿ ಕೆಲಕಾಲವಾದರೂ ಉಳಿಯಬಹುದು.

ಈ ಸಂಕಲನದಲ್ಲಿ ಪ್ರಕಟವಾದ ಎಲ್ಲ ಹರಟೆಗಳು ಅನೇಕ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಇವುಗಳನ್ನು ಅಚ್ಚುಹಾಕುವುದರಲ್ಲಿ ಯಾವುದಾದರೊಂದು ಕ್ರಮವನ್ನು ಅನುಸರಿಸಿಲ್ಲ, ಅಂತಹ ಕ್ರಮವು ಅವಶ್ಯವೆಂದೂ ತೋರಿಲ್ಲ;

—ಏಕೆಂದರೆ, ನನ್ನ ಅಭಿಪ್ರಾಯದಲ್ಲಿ ಹರಟೆಗಳು ಕ್ರಮವಾದ ಅಕ್ರಮಗಳು.

ಕುಡ್ಪಿ ವಾಸುದೇವ ಶೆಣೈ.

ಅನುಕ್ರಮಣಿಕೆ

೧. ಕಸದ ಡಬ್ಬಿಗಳು

'ಕಸ'ವೆಂಬ ಶಬ್ದದ ವ್ಯುತ್ಪತ್ತಿ ಹೇಗಾಯಿತೆಂದು ಮಹಾ ಪಂಡಿತರೊಳಗೆ ಹಿಂದೆ ವಾಗ್ವಾದ ನಡೆದಿದೆ. ಪಂಡಿತರು ಹಲವು ದಿನಗಳ ವರೆಗೆ ಹೋರಾಡಿ, ಎದ್ದು ಹೊರಟು ಹೋದಾಗ, ಅಲ್ಲಿ ಬಿಟ್ಟುಹೋದುದೇ 'ಕಸ'ವೆಂದು ಕೊನೆಗೆ ತೀರ್ಮಾನವಾಯಿತೆಂದು ಒಂದು ಆಖ್ಯಾಯಿಕೆಯಿದೆ. ಆದರೆ, ಆ ತೀರ್ಮಾನವು ಕೊನೆಯ ತೀರ್ಮಾನವೆನಿಸಲಿಲ್ಲ. ಅವರ ಮುಂದಿನ ಮರಿಪಂಡಿತರು 'ಕಸ'ದ ಮೇಲೆ ತುಂಬ ಹೋರಾಡಿರುವರು. "ಕಂದಾಯ ಸಂದಾಯ ಮಾಡಿ ಉಳಿದ ಕನಿಷ್ಟ ಸತ್ವ" ಎಂದಿದ್ದ ಶಬ್ದಗಳ ಪ್ರಥಮಾಕ್ಷರಗಳನ್ನು ಹೆಕ್ಕಿ ಈ ಶಬ್ದರಚನೆಯಾಯಿತೆಂದು ಕೆಲವರ ಮತ. ಅದನ್ನು "ಕಂದಾಯ ಸಂದಾಯ ಮಾಡಿದವರಿಗೆ ಸಿಗುವ ಕನಿಷ್ಟ ಸತ್ಫಲ" ಎಂದು ತಿದ್ದಬೇಕಾಗಿ ಸೂಚನೆಯಾಗಿತ್ತೆಂದೂ, ಅದು ಅಸ್ವೀಕೃತವಾಯಿತೆಂದೂ ಹೇಳಲಾಗಿದೆ. "ಕಲಹಾರಾನಂತರದ ಸಮಾಹಾರ"ವೆಂದು ಇನ್ನೊಂದು ತಂಡದ ಮತವೂ ಇದೆ. ಆದರೆ, "ಕಲಹಾರ"ವೆಂದರೇನು "ಸಮಾಹಾರ"ವೆಂದರೇನು ಎಂದು ಪಂಡಿತರು ಮಾತ್ರ ಬಲ್ಲರು: ಸಾಮಾನ್ಯರಿಗೆ ಅರ್ಥವಾಗದೆಂದು ಇದಕ್ಕೆ ಬಹುಮತ ದೊರೆತಿಲ್ಲ. "ಕವೀಶ್ವರರ ಸಂಗ್ರಹ"ವೆಂದರೇನಾಗುತ್ತದೆಂದೂ ಒಬ್ಬರು ಕೇಳಿದರಂತೆ. 'ಕ' ಎಂಬುದಕ್ಕೆ 'ಕಮ್ಯೂನಿಸ್ಟ್' ಎಂದು ಅರ್ಥಮಾಡಲು ಹೋದವರೂ ಉಂಟು. 'ಸ' ಎಂಬುದಕ್ಕೆ 'ಸರಕಾರ'ವೆಂದು ಸೇರಿಸಬೇಕೆಂದೂ ಅವರ ಹಟವಿತ್ತು. ಆದರೆ, 'ಕ'ದಿಂದ 'ಕವಿಶಾಸನರ' ಎಂದೂ ಶಬ್ದ ರಚಿಸಬಹುದು; 'ಕಮಲೋದರ'ವೆನ್ನಲೂ ಬಹುದು; 'ಕರ್ತಾರೆ'ನೆಂದರೂ ಸಲುತ್ತದೆ; 'ಕಂಗಾಲ' ಎನ್ನಲೂ ಬರುತ್ತಿದೆ. ಹಾಗೆಯೇ 'ಸ' ಎಂಬುದರಿಂದ 'ಸಮುದ್ರ'—'ಸಮ್ಮೇಳನ'—'ಸಮ್ರಾಟ'—'ಸಮುಚ್ಚಯ' ಹೀಗೆ ನಾನಾ ಶಬ್ದಗಳನ್ನು ರಚಿಸಬಹುದು. ಒಟ್ಟಿನಲ್ಲಿ ನಮಗೆ ಕಾಣುವುದಿಷ್ಟು: ಶಬ್ದವ್ಯುತ್ಪತ್ತಿ ನಮಗೇಕೆ? ಕಸವೆಂದರೆ ಕಸ, ಡಬ್ಬಿಯೆಂದರೆ ಡಬ್ಬಿ—ಎಂದರಾಯಿತು.

ಉಪನ್ಯಾಸವಲ್ಲ; ಕಸದ ಡಬ್ಬಿಗಳ ಮೇಲೆ ಮಿಾಮಾಂಸೆಯೂ ಅಲ್ಲ. ಕಂಡದ್ದನ್ನು ಇಲ್ಲಿ ಕಾಣಿಸೋದು.

ಕಸದ ಡಬ್ಬಿಯೆಂದರೆ ನಿಮಗೆ ಗೊತ್ತು. ಉರುಟಾದ, ನಾಲ್ಕಡಿ ಎತ್ತರದ ತಗಡಿನ ಗೂಡುಗಳು. ನಗರದ ರಸ್ತೆಗಳಲ್ಲಿ, ಅಲ್ಲಲ್ಲಿ ನಮ್ಮನ್ನಾಳುವ ಸ್ಥಳೀಯ ಸಂಸ್ಥೆಯ ನೆನಪನ್ನು ಸದಾ ದಾರಿಗರಿಗೆ ಕೊಡುತ್ತ, ಮಳೆ—ಗಾಳಿ—ಚಳಿ— ಬಿಸಿಲುಗಳನ್ನು ಲೆಕ್ಕಿಸದೆ ಗಂಭೀರವಾಗಿ ನಿಂತುಕೊಂಡಿವೆ. ನೋಡುವಾಗ 'ಏನಪ್ಪ, ಭಾರೀ ಗರ್ವ' ಎಂದು ನಿಮಗೆ ಕಾಣುತ್ತದೆ. ಆದರೆ, ಹಾಗೇನೂ ಇಲ್ಲ. ಶಿಸ್ತಿನ ಪ್ರತಿಮೂರ್ತಿಗಳು; ಶಾಂತತೆಯ ಕುರುಹುಗಳು. ಪರಮತ ಸಹಿಷ್ಣುತೆ, ತಾಳ್ಮೆ, ಅಹಿಂಸೆ, ಭೂತದಯೆ, ಪ್ರಾಣಿದಯೆ, ದಾನಧರ್ಮ ಇವೆಲ್ಲ ಆದರ್ಶಗುಣಗಳೂ ಇವುಗಳಲ್ಲಿ ಮೂರ್ತಿಮಂತಾಗಿವೆ.

ಹಿಂದೂ—ಮುಸ್ಲಿಂ—ಕ್ರಿಸ್ತ—ಪಾರಸಿಕವೆಂಬ ಭೇದವಿಲ್ಲದೆ, ಎಲ್ಲರೂ ತಂದೊಗೆದ ವಿಷವನ್ನು ಇವು ಧರಿಸಿಕೊಳ್ಳುತ್ತವೆ. ಇದು ಹಿಂದೂಗಳ ಕಸ, ಅದು ಮುಸಲ್ಮಾನರದು ಎಂಬ ಭೇದ ಬುದ್ಧಿ ಅವುಗಳಿಗಿಲ್ಲ. ಒಂದನ್ನೊಂದು ಸಹಿಸಿರುವಂತೆ ಮಾಡುತ್ತವೆ. ಏನನ್ನೂ ಒಗೆದರೂ ಹಿಡಿದಿರಿಸಿಕೊಳ್ಳುವ ತಾಳ್ಮೆ ಯಥೇಚ್ಛ ಇದೆ. ಡುಬ್ಬೆಂದು ಕಲ್ಲೊಗೆದರೂ ಪ್ರತಿಯಾಗಿ ಏನೂ ಹಿಂಸೆಮಾಡೋದಿಲ್ಲ; ತಾಳ್ಮೆಯಿಂದ ಸಹಿಸಿ, ನಿಂತಲ್ಲೆ ನಿಂತಿರುತ್ತವೆ. ಭೀರುಗಳಲ್ಲ; ನಿಮಗೆ ಅಡ್ಡ ಬರಲಾರವು. ಹೆಗ್ಗಣ, ಇಲಿಗಳು ಬಂದರೆ 'ಬಾರಪ್ಪ—ಅಮ್ಮ' ಎಂದು ಸ್ಥಳಕೊಡುತ್ತವೆ. ತಿಂಡಿಕೊಡುತ್ತವೆ, ಆಡಲು ಬಿಡುತ್ತವೆ. ಕಾಮಧೇನು ಬಂದು ನಿಂತರೆ, 'ತಿಂಡಿ ತಗೋ' ಎನ್ನುತ್ತವೆ. ಗೋಮಾತೆಯು ಕೊರಳು ಎಟಕದಿದ್ದರೆ, ತಾವೇ ಆಚೆ ಸರಿದು, ಗೋಮಾತೆಯ ಉಪಾಹಾರವಾಗುವ ತನಕ ಒಂದು ಕಡೆ ಬಿದ್ದುಕೊಂಡಿರುತ್ತವೆ. ಇಂತಹ ದಾನಧರ್ಮ ಬುದ್ಧಿ ವಿಶೇಷ! ಆಸ್ಪತ್ರೆಗೆ ಹೋಗಲೊಪ್ಪದ ಹುಚ್ಚರು ಬಂದರೆ, 'ಹೋಗಬೇಡ ಆಸ್ಪತ್ರೆಗೆ; ಇಲ್ಲೆ ಸಮಿಾಪದಲ್ಲಿ ಬಿದ್ದುಕೊಂಡು, ಆಗಾಗ್ಗೆ ಇಲ್ಲಿ ಬಂದು ಊಟಮಾಡಿ ಹೋಗು' ಎಂದು ಉಚ್ಚರಿಸುತ್ತವೆ. ಇಂತಹ ತ್ಯಾಗ ಇನ್ನೆಲ್ಲಿಯೂ ಇರದು.

ದೇಶವ ಸಂಪತ್ತನ್ನು ವಾಣಿಜ್ಯದಿಂದ ಅಳೆಯುಬಹುದಾದರೆ, ಆಯಾ ಊರುಗಳ ಸಂಪತ್ಸಮೃದ್ಧಿಯನ್ನು ಅಳೆಯುಲು ಅಲ್ಲಿ ಇರಿಸಿದ ಈ ಡಬ್ಬಿಗಳೇ ಒಳ್ಳೆ ತರದ ಕಳಸಿಗೆಗಳಾಗಿವೆ. ಎಲ್ಲಿ ಸಂಪತ್ತು ಕಡಿಮೆಯೋ ಅಲ್ಲಿ ಕಸವೂ ಕಡಿಮೆ. ಜನರಲ್ಲಿ ದುಡ್ಡು ಹೆಚ್ಚಿದಂತೆ ಡಬ್ಬಿಗಳಲ್ಲಿ ಕಸ ಹೆಚ್ಚುವುದು—ಇದು ಒಂದಿನ್ನೊಂದನ್ನು ಸದಾ ಹೊಂದಿಕೊಂಡಿಯೇ ಇದೆ. ಈ ಲೆಕ್ಕದಿಂದ, ಒಂದು ನಗರವು ಸಂಪತ್ಸಮೃದ್ಧ ಅಹುದೋ ಅಲ್ಲವೋ ಎಂಬುದನ್ನು ನಿರ್ಧರಿಸಿಕೊಳ್ಳಬಹುದು.

ಕಸವು ಯಾವಾಗಲೂ "ನಾಡ"ಲ್ಪಡುವುದಿಲ್ಲ. ಅದು ಅಜರಾಮರ; ನಿಜಕ್ಕೂ ಅದಕ್ಕೆ ಹುಟ್ಟು—ಸಾವುಗಳಿಲ್ಲ. ಉಂಟೆನ್ನುವಿರಾದರೆ, ಎಲ್ಲಿ ಹುಟ್ಟಿತು, ಹೇಗೆ ಅಥವಾ ಯಾವಾಗ ಸಾಯುವುದೆಂದು ನಿರ್ಧರಿಸಿಯೋ ಶೋಧಿಸಿಯೋ ಹೇಳಬಲ್ಲಿರಾ?

೦ ೦ ೦ ೦ ೦

ಒಂದು ಅಮವಾಸ್ಯೆಯ ದಿನ. ಪ್ರವಾಸಿಯು ಕಸದ ಡಬ್ಬಿಗೆ ಎಡವಿ ಬಿದ್ದನು. ಡಬ್ಬಿಗೆ ನಗು ಬಂತು. ಪ್ರವಾಸಿಗೆ ಕೋಪ ಬಂತು. "ನೀನು ಕಸದ ಡಬ್ಬಿ; ನಗಬಾರದು: ಗರ್ವ ಒಳ್ಳೆದಲ್ಲ"— ಎಂದನು.

"ನನ್ನ ದಾರಿಯಲ್ಲಿ ಬಂದು ಬಿದ್ದರೆ ನಕ್ಕೇನು" ಎಂದಿತು.

"ದಾರಿ ನಮ್ಮದು—ನಿನ್ನದಲ್ಲ. ನಿನ್ನನ್ನು ಹುಟ್ಟಿಸಿದವರಾರೆಂದು ತಿಳಿಯದೆ ಹಾರಾಡಬೇಡ. ಇತ್ತ ಬಂದುದೂ, ಕಣ್ಕತ್ತಲೆಯಿಂದ ಎಡವಿ ಬಿದ್ದುದೂ ನನ್ನ ದುರಾದೃಷ್ಟ" ಎಂದನು ಪ್ರವಾಸಿ.

"ಇದ್ದವನು ನಾನು—ಬಿದ್ದವನು ನೀನು; ನನಗೆಡವಿ ಬಿದ್ದರೂ ಪ್ರಾಣ ಹಾರಿ ಹೋಗಿಲ್ಲವಷ್ಟೆ? ಕೃತಜ್ಞತೆ ಇರಬೇಡವೆ?" ಕೇಳಿತು ಡಬ್ಬಿ.

"ತೋಳ—ಕೊಕ್ಕರೆಯ ಕಥೆ ನನಗೆ ಹೇಳಬೇಡ. ನಿನ್ನನ್ನಿಲ್ಲಿ ಇಡಿಸಿದುದು ಸಾರ್ವಜನಿಕ ಸೇವೆಗೆ; ಯಜಮಾನಿಕೆಗಲ್ಲ. ನೀನು ಜನರಿಗೆ ಕೃತಜ್ಞನಿರಬೇಕು, ಜನರು ನಿನಗಲ್ಲ" ಎಂದನು ಪ್ರವಾಸಿ.

"ನಾನು 'ಪಬ್ಲಿಕ್ ಸರ್ವೆಂಟ್' ಎನ್ನುವಿಯಾ? ಜನರಿಗುಪಕಾರ ಮಾಡಿದುದಕ್ಕೆ ನನಗೆ ಈ ಉಡುಗೊರೆಯೆ?"— ತುಸು ಕೋಪದಿಂದ ಕೇಳಿತು ಡಬ್ಬಿ.

"ನಿನಗೆ ಇಂಗ್ಲಿಷೂ ಬರುತ್ತದೆ, ಅಲ್ಲವೆ? ಇರಲಿ. ಈಗ ಹೇಳು—ನೀನು ಜನರಿಗೆ ಮಾಡುವ ಉಪಕಾರವೇನು?"

"ಜನರೊಗೆದುದನ್ನು ನನ್ನಲ್ಲಿ ಸಂಗ್ರಹವಾಗಿಡುತಿದ್ದೇನೆ: ನಗರದ ಆರೋಗ್ಯ ಕಾಪಾಡುತಿದ್ದೇನೆ."

ಪ್ರವಾಸಿ ನಕ್ಕನು. "ಆರೋಗ್ಯ ಪಾಲನೆ? ನಿನ್ನಿಂದ? ಮಾರಾಯಾ,—ಎಂತಹ ಭ್ರಮೆ ನಿನ್ನದು! ನಿನ್ನಲ್ಲಿ ಜಮೆಯಾದ ಸಾಮಾನು ಊರಿಗೆ ನಾತವಾಗುತ್ತಿದೆ. ನೀನನ್ನುತ್ತಿ ಆರೋಗ್ಯ ಪಾಲನೆ! ನೀನು ಹುಟ್ಟುವ ಮೊದಲು ಜನರಿಗೆ ಬರುತಿದ್ದ ರೋಗಗಳು ನಾಲ್ಕು- ನಿನ್ನ ಜನನದ ಅನಂತರ ನಾಲ್ಕು ನೂರಾಗಿವೆ! ಈಗ ನೀನು ಸತ್ತರೆ ಮುನ್ನೂರ ತೊಂಭತ್ತಾರು ರೋಗಗಳು ಕಡಮೆಯಾಗುವವು!"

ಡಬ್ಬಿ ತಿರಸ್ಕಾರದಿಂದ ಹೇಳಿತು: "ನಿನಗ ಅಜ್ಞಾನ. ನಾನು ಸತ್ತರೆ ಲೋಕ ಸತ್ತಂತೆ."

ಪ್ರವಾಸಿಗೆ ಗಾಬರಿಯಾಗಲಿಲ್ಲ: "ನೀರಲ್ಲಿ ಮುಳುಗುತಿದ್ದ ನರಿಯು 'ನಾನು ಮುಳುಗಿದರೆ ಲೋಕವೇ ಮುಳುಗೀತು' ಎಂದಂತೆ ನೀನೂ ಹೇಳುತ್ತಿ. ನಿನಗೆ ಸಾವು ಇಲ್ಲವೆ?"

ಡಬ್ಬಿ ಉಬ್ಬಿ ಹೇಳಿತು: "ನಾನು ಸಾವಿನ ಕುರಿತು ಚಿಂತಿಸಲೇ ಇಲ್ಲ. ಏಕೆ ಚಿಂತಿಸಲಿ? ನಾನು ಕೂಡಿಹಾಕುತಿದ್ದೇನೆ. ಲೋಕಕ್ಕೆ ಕೊಡುತ್ತಿದ್ದೇನೆ. ಜಮೆಯಾದುದನ್ನೆಲ್ಲ ನಾನೊಬ್ಬನೇ ಇಟ್ಟುಕೊಳ್ಳುತ್ತಿಲ್ಲ."

ಪ್ರವಾಸಿ ಹೇಳಿದನು: "ನೀನು ಚಿರಂಜೀವಿಯಾಗುವುದಾದರೂ ಚಿಂತೆಯಿದ್ದಿಲ್ಲ. ಆದರೆ, ಕೂಡಿ ಹಾಕುವ ಮಾತು ಹೇಳುತ್ತಿಯಲ್ಲಾ— ಆ ವಿಷಯ ತುಸು ಆಲೋಚಿಸು. ಊರಿನ ಜನರು ಬಿಸುಟ ಚೂರುಗಳು ನಿನ್ನಲ್ಲಿ ಕೂಡಿಕೆಯಾಗುತ್ತಿವೆ. ನೀನು ಹಂಚಿ ಕೊಡುತ್ತಿರುವುದು ಯಾರಿಗೆ? ಇಲಿ, ಹೆಗ್ಗಣ, ಹಾವು, ಹುಚ್ಚ—ಇವರಿಗೆ! ಒಂದೇ ಒಂದು ಒಳ್ಳೇ ಪ್ರಾಣಿಗೆ ನಿನ್ನಿಂದ ಉಪಕಾರವಿಲ್ಲ. ನಿನ್ನ ಸ್ನೇಹಿತರೆಂದರೆ ದುಷ್ಟ ಜಂತುಗಳು, ನಿಷ್ಪ್ರಯೋಜಕ ಜೀವಿಗಳು! ನಿನ್ನ ವಿಷಗಾಳಿಯಿಂದ ಅಳಿಯದೆ ಉಳಿಯುವವರಿದ್ದರೆ, ಆ ಉಳಿಕೆಯುವರನ್ನು ನಿನ್ನ 'ಚರ್ವಿತ ಚರ್ವಣ'ದಿಂದ ಬಲಿತ ಪ್ರಾಣಿಗಳು ಹೇಗೂ ಕೊಲ್ಲಬಹುದು............"

ಡಬ್ಬಿ ತಡೆಯಿತು: "ನಿಲ್ಲು. ಕಾಮಧೇನುವೂ ಬರುತ್ತಿದೆ; ಅದಕ್ಕೂ ಕೊಡುತಿದ್ದೇನೆ."

"ಭಾರತದ ದುರಾದೃಷ್ಟದ ದೃಷ್ಟಾಂತವೊಂದು. ಕಾಮಧೇನುವು ಪವಿತ್ರವೆಂದು ತಿಳಿದು ಪೂಜೆಮಾಡಬೇಕೆನ್ನುವವರು, ಅದಕ್ಕೆ ಸರಿಯಾದ ತಿಂಡಿಕೊಡಲಾರರು! ಕೆಲವು ಮೂರ್ಖರ, ದುಷ್ಟರ, ದರಿದ್ರರ, ಸ್ವಾರ್ಥಿಗಳ ನಡುವೆ ಬೆಳೆಯಲು ಯತ್ನಿಸುವ ಕಾಮಧೇನುಗಳು, ಒಮ್ಮೊಮ್ಮೆ ನಿನ್ನಲ್ಲಿಗೆ ಆಕರ್ಷಿತವಾಗುತ್ತವೆ. ಅದಕ್ಕಾಗಿ ನೀನು ಹೆಮ್ಮೆಪಡುತ್ತಿಯಾದರೆ ನಿನ್ನ ದುಷ್ಟತನವು ಮತ್ತಷ್ಟು ಒಡೆದು ಕಾಣುವುದು. ನಿನ್ನಲ್ಲಿದ್ದ ಒಳ್ಳೆಯದನ್ನು ಕಾಮಧೇನುವಿಗೆ ಕೊಡುವ ಯತ್ನಮಾಡಿದರಾಗುತ್ತಿತ್ತು. ನೀನೇನು ಮಾಡಬಲ್ಲೆ? ಒಳ್ಳೆಯದೊಂದಿಗೆ ಕೆಟ್ಟುದೂ ಸೇರಿ ಹೋಗುತ್ತಿದೆ ಎನ್ನ ಬಲ್ಲೆ."

ಡಬ್ಬಿಗೆ ದರ್ಪವಿಳಿಯಲಿಲ್ಲ: "ನನ್ನ ಗುಣಗಳು ನನ್ನೊಡನೆಯೇ ಇರುವುವು. ನನ್ನ ಬಳಿಗೆ ಸಾರುವವರೇ ನೋಡಿಕೊಳ್ಳಬೇಕು............"

ಪ್ರವಾಸಿ ಪುನಹ ನಕ್ಕನು: "ಶಹಭಾಸ್, ಈಗಲೀಗ ನಿನ್ನ ಅಂತರ್ಯದ ನಿಜರೂಪ ತೋರಿಸಿದೆ. ನಿನ್ನನ್ನು ಈ ರೀತಿಯಲ್ಲಿರಿಸಿದ ಜವಾಬ್ದಾರಿ ನಿನ್ನ ಯಜಮಾನರದು. ನಿನ್ನ ಯಜಮಾನರಿಗೇ ನೀನು ಯಜಮಾನನಾಗ ನೋಡುತ್ತಿ. ಈಗ ನಿನಗೆ ಗೊತ್ತಾಗಬೇಕು— ನಿನ್ನ ಆಯುಷ್ಯ ಒಂದು ಒದೆಯಲ್ಲಿದೆ."

"ಒದೆದಾತನ ಕಾಲಿಗೆ ಗಾಯಮಾಡದೆ ಬಿಡಲಾರೆ."

"ಕಾಲೇ ಹೋದರೂ ಕಾಲನ ಪ್ರತಿನಿಧಿಯಾಗಿರುವ ನಿನ್ನನ್ನು ಮುಗಿಸಿದ ತೃಪ್ತಿಯೊಂದುಂಟು"—

—ಎನ್ನುತ್ತ ಅದನ್ನೊದೆದು, ಪ್ರವಾಸಿಯು, ಒಂದು ಕಲ್ಲಿನಿಂದದನ್ನು ಜಜ್ಜಿ, ನಡೆದುಹೋದನು.

ಆದರೆ, ಮರುದಿನ ಅತ್ತ ಬರುವಾಗ, ಅದರ ಸ್ಥಳದಲ್ಲಿ ಮತ್ತೊಂದು ಡಬ್ಬಿಯಿತ್ತು! ಅದರ 'ಭೂತ'ವಾಗಿರಲೂ ಬಹುದು!

೨. ಮನುಷ್ಯನೂ ಅವನ ತಲೆಯೂ.......!

ಆ ಕಲ್ಪನೆಯಾದುದು ನನಗೆ ಹಳೆ ಪುಸ್ತಕವೊಂದರ ಪಾಠದಿಂದ. "ಮುದುಕನೂ, ಅವನ ಮಗನೂ, ಕತ್ತೆಯೂ" ಎಂದು ಸಣ್ಣವನಿರುವಾಗ ಓದಿದ್ದೆ. ಆ ಪುಸ್ತಕದೊಳಗಿನ ಎಲ್ಲಾ ಪಾಠಗಳಿಗಿಂತಲೂ ಇದುವೇ ಸುಂದರವೆಂದು,—ಆ ಪುಸ್ತಕವು ಹರಿದು ಹೋಗಬೇಕಾದರೆ ಅದೊಂದೇ ಪಾಠವನ್ನು ಸುಮಾರು ಮೂವತ್ತು ಬಾರಿ ಓದಿರುತ್ತೇನೆ. "....ಕತ್ತೆಯೂ" ಎಂದಾದ ಮೇಲೆ "ಆ ಸಂಕಟವೂ, ಅವರಿಗೆ ಬಂದ ದುರ್ಗತಿಯೂ" ಎಂದು ಕೂಡಿಸಲಿಲ್ಲವೇಕೆಂದು ಎಷ್ಟೋ ಬಾರಿ ಯೋಚಿಸಿದ್ದೇನೆ. ಅಂದಿನಿಂದ, ಅಂತಹ ಶಿರೋನಾಮೆಯುಳ್ಳ ಒಂದು ಲೇಖನವನ್ನು ಬರೆಯಬೇಕೆಂಬ ಆಸೆ. ಆದರೆ, ಆ ಆಸೆಯು ಫಲಿತಕ್ಕೆ ಬರಬೇಕಾದರೆ ಸಾಹಿತ್ಯ ಸಾಮ್ರಾಜ್ಯದಲ್ಲಿ ಮಹಾ ಕ್ರಾಂತಿಯಾಗಿ "ಎಲ್ಲವೂ ಚಿಕ್ಕದು ಬೇಕು" ಎಂಬ ಕೂಗು ಎದ್ದಿದೆ. ಕಾಲಂಗುಲಕ್ಕಿಂತಲೂ ಉದ್ದಕ್ಕೆ ಹೋಗುವ ಶಿರೋನಾಮೆಗಳನ್ನು ಕಂಡರೆ ಒಂದು ತಿಂಗಳು ನಿಶ್ಚೇಷ್ಟಿತರಾಗಿ ಬೀಳುವ ಸಂಪಾದಕರಿದ್ದಾರೆ. "ಕೃಷ್ಣಪ್ಪನು ಬೊಂಬಾಯಿಗೆ ಹೋಗಿ ಮರಳುವಾಗ ಒಂದು ನಾಯಿಮರಿಯನ್ನು ತಂದ ಕತೆ" ಎಂಬ ಶಿರೋನಾಮೆಯ ಒಂದು ಕತೆಯನ್ನು "ಸ್ವರ್ಣಕಿರಣ" ಪತ್ರಿಕೆಗೆ ಕಳುಹಿದ್ದಾಗ, ಒಂದು ತಿಂಗಳ ಅನಂತರ—"ನಿಮ್ಮ ಕತೆಯ ಶಿರೋನಾಮೆಯನ್ನು ಓದಿ ಮುಗಿಸಲು ಮೂರು ತಾಸು ಬೇಕಾಯಿತು. ಮತ್ತೆ ಲೇಖನವನ್ನಾದರೆ........ ಆಶ್ಚರ್ಯಪಟ್ಟಿರುವೆನು; ತಿಳಿಯಲಾರದವನಾಗಿದ್ದೇನೆ; ಮಂಕನಾಗಿದ್ದೇನೆ ಎಂಬ ಉತ್ತರವಿರುವ ಒಂದು ಪತ್ರದೊಂದಿಗೆ ಅದು ಹಿಂದೆ ಬಂದ ಮೇಲೆಯೇ ಅದು ನನಗೆ ಗೊತ್ತಾದುದು. ತರುಣ ಬರೆಹಗಾರರಿಗೆ (ನನ್ನ ವಯಸ್ಸು ೨೩; ನನಗಿಂತ ತರುಣರಿಗೆ ಈ ಮಾತು) ನನ್ನ ಉಪದೇಶವೇನೆಂದರೆ,—ಉದ್ದ ಶಿರೋನಾಮೆಯುಳ್ಳ ಲೇಖನಗಳನ್ನು ಯಾವ ಪತ್ರಿಕೆಗೂ ಕಳುಹದಿರಿ. ನಿರಪರಾಧಿಗಳಾದ ಸಂಪಾದಕರು ಒಂದು ತಿಂಗಳ ತನಕ "ವಿಸ್ಮಯಗೊಂಡು, ಆಶ್ಚರ್ಯಪಟ್ಟು, ತಿಳಿಯಲಾರದೆ, ಮಂಕರಾಗುವರು." ನಾನು ಈ ಲೇಖದ ಶಿರೋನಾಮೆಯನ್ನು

ಮನಸ್ಸು ಬಿಗಿಹಿಡಿದು ಚಿಕ್ಕದಾಗಿಯೇ ಬರೆದಿರುವೆನು. "........ತಲೆಯೂ" ಎಂದಾದ ಮೇಲೆ "ಅದರ ಕೂದಲೂ, ಅದಕ್ಕೆ ಹಚ್ಚುವ........"

—ಆದರೆ, ಇದು ವಿಶೇಷವಾಯಿತು. ಇಷ್ಟು ಚಿಕ್ಕ ಲೇಖಕ್ಕೆ ಎಷ್ಟು ದೊಡ್ಡ ಪೀಠಿಕೆ! ಶಿರೋನಾಮೆಯನ್ನೋದಲು ಮೂರು ತಾಸು ಬೇಕಾಗಿರುವ ಸಂಪಾದಕರು ಲೇಖವನ್ನೋದುವುದೇ ಇಲ್ಲವೆಂಬುದು ಖಂಡಿತವಾದುದರಿಂದ, ಚಿಕ್ಕ ಶಿರೋನಾಮೆಯುಳ್ಳ ಎಂತಹ ಲೇಖವನ್ನಾದರೂ ನೀವು ಕಳುಹಬಹುದೆಂದು ಸೂಚಿಸುವೆನಷ್ಟೆ!

* * * * *

ಮನುಷ್ಯನೂ ಅವನ ತಲೆಯೂ ಎಂದಾಗ, ನೀವು ನನ್ನಿಂದ ದೇಹಶಾಸ್ತ್ರದ ಒಂದು ಪಾಠವನ್ನು ನಿರೀಕ್ಷಿಸಿರುವಿರೆಂಬುದು ಖಂಡಿತ. ಆದರೆ ಇಲ್ಲ, ದೇಹಶಾಸ್ತ್ರದ ವಿಷಯವಾಗಿ ನಾನು ಏನನ್ನೂ ಓದಿಲ್ಲ. ಶಾಲೆಯಲ್ಲಿ ಕೊಂಚ ಓದಿರಬಹುದಾದರೂ ರಸ್ತೆಗೆ ಬಂದು ನೋಡಿದಾಗ ನನ್ನ ನಂಬಿಕೆಯೆಲ್ಲಾ ಮಾಯವಾಗಿದೆ. ಉದಾಹರಣಾರ್ಥ—ಕರುಳುಗಳ ಕೋಮಲತೆಯ ವಿಷಯವಾಗಿ ಕೇಳಿ ಹೊರಗೆ ಬಂದಾಗ,—ಒಂದು ಕಲ್ಲನ್ನು ಕಟಕಟನೆ ಕಡಿದು ತಿಂದು, ಹೊಟ್ಟೆಯ ಮೇಲೆ ಗುದ್ದಿಕೊಂಡು ಒಂದು ಪಾವಾಣೆ ಇನಾಮು ಪಡೆದವನೊಬ್ಬನನ್ನು ನೋಡಿದ್ದೇನೆ. ನಾನೂ ಮನೆಗೆ ಹೋಗಿ ಪ್ರಯತ್ನಿಸಿದಾಗ ನನ್ನಿಂದಾಗಲಿಲ್ಲ, —ಎಂಬುದಿದು, ಕರುಳು ಒಬ್ಬನಿಗೆ ಇರಬಹುದಾದರೂ ಮತ್ತೊಬ್ಬನಿಗೆ ಇರಲಾರದು ಎಂಬ ಸಂದೇಹವನ್ನು ನನ್ನಲ್ಲುಂಟು ಮಾಡಿದೆ. ನಾನು ನಂಬುವುದು ಮನುಷ್ಯನ ತಲೆಯಲ್ಲಿ. ಏಕೆಂದರೆ, ಈ ದಿನಗಳಲ್ಲಿ ನೀವೂ ಹೆಚ್ಚಾಗಿ ನೋಡುವುದು ತಲೆಗಳನ್ನು ಮಾತ್ರ. ಪ್ರಾಚೀನ ಆರ್ಯರ ವಿಷಯವಾಗಿ ನಾವು ಎಷ್ಟೋ ಲೇಖನಗಳನ್ನು ಓದುತ್ತಿದ್ದೇವೆ. ಅವರ ಸಂಸ್ಕೃತಿಯ ವಿಷಯವಾಗಿ ಕೇಳಿದುದರ ಮೇಲೆ, ಅವರ ತಲೆಯು ಗಟ್ಟಿಯಾಗಿದ್ದಿರಬೇಕೆಂದು ಊಹಿಸುತಿದ್ದೇವೆ. ಆದರೆ, ಈ ಕಾಲದ ತಲೆಗಳಷ್ಟು ಅವು ಅಲ್ಲ.

ಏಕೆ?

ಆ ಕಾಲದಲ್ಲಿ "ಬ್ರಿಲ್ಲಿಯಂಟೈನ್" ಇರಲಿಲ್ಲ.

ಸರ್ವ ಅಂಗಗಳಲ್ಲಿಅತೀ ಉನ್ನತವಾಗಿರುವತಲೆಯನ್ನುಒಂದುಯೋಗ್ಯ

ವಸ್ತುವಿನಿಂದ ಆಗಾಗ ಪುರಸ್ಕರಿಸಬೇಕೆಂದು ಮಾನವಕೋಟಿಯು ಪೇಚಾಡಿ, ಕೊನೆಗೆ ಈ ಶತಮಾನದಲ್ಲಿ ಅದಕ್ಕೆ ದೊರೆತುದೇ ಇದು–"ಬ್ರಿಲ್ಲಿಯಂಟೈನ್." ಈಗ ನೀವು ಪೇಟೆಗೆ ಹೋಗಿ ಯಾವ ಅಂಗಡಿಯಲ್ಲೂ, ರೂಪಾಯಿ ನಾಣ್ಯವನ್ನು ಬಿಸುಡಿ, 'ಕಮಲಾ—ಮೋಹಿನಿ-ಭೂದೇವಿ-ಶಕುಂತಲಾ, ಅಥವಾ ಇನ್ನಾವ ಹೆಸರನ್ನು ಹೇಳಿದರೂ ಆ ಹೆಸರಿನ ಬ್ರಿಲ್ಲಿಯಂಟೈನ್ ನಿಮಗೆ ದೊರೆವುದು. ಬ್ರಿಲ್ಲಿಯಂಟೈನ್ ಬಾಟಲಿಗಳು, ಪ್ರಚಲಿತವಿರುವ ಎಲ್ಲ ಬಗೆಯ ಹೆಸರುಗಳನ್ನೂ ಇಟ್ಟುಕೊಂಡಿವೆ. ಸತ್ಯ ಹೇಳುವುದಾದರೆ, ನನ್ನ ಮೂವರು ಮಕ್ಕಳಿಗೆ, ಬ್ರಿಲ್ಲಿಯಂಟೈನ್ ಬಾಟಲಿಗಳನ್ನು ನೋಡಿದ ಮೇಲೆಯೇ ಯೋಗ್ಯ ಹೆಸರುಗಳು ಹೊಳೆದು, ಅವುಗಳನ್ನಿರಿಸಿದ್ದೇನೆ.

× × × × ×

ಅವನು ಕಾಣಸಿಕ್ಕಿದುದು ಸರ್ಕಸ್ ಡೇರೆಯ ಬಳಿಯಲ್ಲಿ—ಪೆಣಂಬೂರ್. ಆತನ ಹೆಸರು ಅಷ್ಟೆ. ಊರಿನ ಹೆಸರೇ ಅವನ ಹೆಸರಾಗಿದೆ. ಪಣಂಬೂರಿನವನಂತೆ,—'ಪೆಣಂಬೂರ್' ಆವನು. ನಾನು ಟಿಕೇಟು ಕೊಂಡುಕೊಳ್ಳಲು ಹೋಗಿ, ಅವನ ಹಿಂದೆಯೇ ನಿಂತಿದ್ದಾಗ, ನನ್ನ ಕಾಲುಗಳ ಮೇಲೆ ನಿಂತು ಆತನು ಟಿಕೇಟು ಕೊಂಡುಕೊಂಡನು. ಅರ್ಧ ತಾಸಿನ ಮೇಲೆ ನನಗೆ ನೋವಾಯಿತೆಂಬುದನ್ನು ತಿಳಿದು, ನನ್ನ ಕ್ಷಮೆ ಬೇಡಿದನು. ಪರಿಚಯವಾಯಿತು. ನಾವಿಬ್ಬರೂ ಸರ್ಕಸ್ ಡೇರೆಯೊಳಗೆ ಹೋದೆವು.

ಪೆಣಂಬೂರನ ಸುತ್ತಲೂ ಒಂದು ಬಗೆಯ ಅಪೂರ್ವ ಸೌರಭ! ಇದೇನೆಂದು ಕೇಳಿದೆ. ನಸುನಗುತ್ತ, 'ಪಾರ್ವತಿ ಬ್ರಿಲ್ಲಿಯಂಟೈನ್' ಎಂದು ಹೇಳಿದನು. ಆ ಮೇಲೆ ಮೊದಲಾಯಿತು–ಬ್ರಿಲ್ಲಿಯಂಟೈನಿನ ಗುಣವರ್ಣನೆ. ಉಷ್ಣವು ಅತಿಯಾಗಿರುವ ನಮ್ಮ ದೇಶದಲ್ಲಿ ಬ್ರಿಲ್ಲಿಯಂಟೈನ್ ಕರಡಿಗೆಯೊಂದಿಲ್ಲದಿದ್ದರೆ ತಲೆಯು ಮಸಿತುಂಡಿನಂತೆ ಸುಟ್ಟು ಹೋದೀತೆಂದು ಪೆಣಂಬೂರಿನ ಅಭಿಪ್ರಾಯ. ಪ್ರಗತಿಯೊಂದಿಗೆ ಹೆಜ್ಜೆಯಿಡಲಾರದ ಕೆಲ ಹಳಬರು ಬ್ರಿಲ್ಲಿಯಂಟೈನನ್ನು ದೂರಬಹುದು. ಆದರೆ ವಿದ್ಯುಚ್ಛಕ್ತಿ ಮತ್ತು ಸಿನೇಮಾಗಳು ಬಂದ ಈ ಕಾಲದಲ್ಲಿ ಅದು ಇಲ್ಲದಿದ್ದಲ್ಲಿ, ಒಬ್ಬನು ಹುಟ್ಟಿದ ಆರನೇ ತಿಂಗಳಲ್ಲೇ ಕುರುಡಾಗಿ ಹೋಗಬೇಕಿತ್ತೆಂಬುದನ್ನು ಹೇಳಿ, ಬ್ರಿಲ್ಲಿಯಂಟೈನ್ ಬಂದುದರಿಂದ ಜನಕೋಟಿಯು ಎರಡೆರಡು ಕಣ್ಣುಗಳನ್ನು

ಹೊತ್ತುಕೊಂಡು ಇಂದು ನಡೆಯುತ್ತಿದೆಯೆಂಬುದನ್ನು ಖಚಿತಪಡಿಸಲೆತ್ನಿಸಿದನು. "ಕೇವಲ ಪರಿಮಳವಲ್ಲ. ಕೂದಲ ಸೌಂದರ್ಯ; ತಲೆಗೆ ತಂಪು, ಮನಸ್ಸಿಗೆ ಉಲ್ಲಾಸ. ಮನುಷ್ಯನು ಮತ್ತೇನನ್ನು ಬಯಸುವನಂತೆ?" ಎಂದು,—ಬ್ರಿಲ್ಲಿಯಂಟೈನನ್ನು ಹೊಗಳಿ ತಾನೇ ಜಗತ್ತಿಗೆ ಅದರ ದಿವ್ಯ ಗುಣಗಳನ್ನು ಜಾಹೀರುಪಡಿಸುತ್ತಿರುವನೋ ಎಂಬ ಆಶ್ಚರ್ಯದಿಂದ ನನ್ನನ್ನೇ ನೋಡಿದನು.

"ಆದರೆ, ಕೂದಲು ಬೆಳೆಯುವುದೇ?'' ಎಂದು ಪ್ರಶ್ನಿಸಿದೆ.

ಪೆಣಂಬೂರನು, 'ಸಂಶಯಪಡುವವರೂ ಇರುವರಲ್ಲ!' ಎಂಬರ್ಥದಲ್ಲಿ ನಗುತ್ತ, "ಕೂದಲು? ಬೆಳೆವುದು? ಒಂದು ಬಾಟಲಿಯು ನಿಮಗೆ ಒಂದು ಮಣ ಕೂದಲು ತರಲೂ ಬಹುದು; ಕಾಲು ಮಣ ತರಲೂ ಬಹುದು. ಅದು ನಿಮ್ಮ ತಲೆ ಮತ್ತು ಉಪಯೋಗದಲ್ಲಿ ಹೊಂದಿಕೊಂಡಿದೆ. ಬ್ರಿಲ್ಲಿಯಂಟೈನಿನಿಂದ ಕೂದಲು ಬೆಳೆವುದಿಲ್ಲವೆನ್ನುವವರು.................." ಎನ್ನುತ್ತಿರಲು,

"—ಅನುಭವಿಕರಾದ ಜಾಣರು ಮಾತ್ರ!'' ಎಂದು ಪೆಣಂಬೂರನ ಆ ವಾಕ್ಯವನ್ನು ಪೂರ್ತಿಗೊಳಿಸಿತೊಂದು ಸ್ವರ.

ಪೆಣಂಬೂರನೂ ನಾನೂ ಸರಕ್ಕನೆ ತಿರುಗಿ ನೋಡಿದೆವು. ನಮ್ಮ ಹಿಂದೆ ಒಬ್ಬ ತರುಣ. ಕಿವಿಗಳನ್ನೂ ಹಣೆಯನ್ನೂ ಅರ್ಧ ಮುಚ್ಚುವಷ್ಟು ಒಂದು ದೊಡ್ಡ ಟೋಪಿಯನ್ನಿಟ್ಟುಕೊಂಡಿರುವನು. ಮೀಸೆಯನ್ನು ನಯವಾಗಿ ಬೋಳಿಸಿರುವನಾದರೂ, ಆರೋಗ್ಯ ಸೂಚಕವಾದ ಆತನ ನಗುವನ್ನೂ, ಕಣ್ಣುಗಳೊಳಗಿನ ಆ ಪ್ರಕಾಶ ಮತ್ತು ಮುಖದ ಮೇಲಿನ ತುಂಟತನದ ಛಾಯೆಯನ್ನೂ ಕಂಡು, ಆತನ ವಯಸ್ಸು ೨೫ಕ್ಕಿಂತ ಹೆಚ್ಚಿರಲಾರದೆಂದು ಅಂದಾಜು ಹಾಕಿದೆ. ಪೆಣಂಬೂರನು ತಿರಸ್ಕಾರದಿಂದ ಆತನನ್ನೊಮ್ಮೆ ನೋಡಿ, ಆ ಮೇಲೆ ನನ್ನನ್ನು ಕುರಿತು, "ಆಶ್ಚರ್ಯವೆಂದರೆ ಸ್ವಾಮಿ, ಬ್ರಿಲ್ಲಿಯಂಟೈನನ್ನು ಪುರಸ್ಕರಿಸಬೇಕಾದವರಲ್ಲಿಯೇ ತಿರಸ್ಕರಿಸುವವರೂ ಇರುವರೆಂಬುದು!" ಎಂದು ತನ್ನ ಕೋಪವನ್ನು ಅಷ್ಟರಲ್ಲೆ ತಣಿಸಿದನು. ಹೆಚ್ಚಿಗೇನನ್ನೂ ಆಡಲು........ಆ ತರುಣನು ನಗುಮುಖದವನಾದರೂ ಸುದೃಢ ಮೈಕಟ್ಟಿನವನೆಂಬುದನ್ನು ಪೆಣಂಬೂರನು ನೋಡಿದ್ದನು.

ಸರ್ಕಸ್ ಆರಂಭವಾಗುವ ಮೊದಲೇ ಗೆಲರಿಯುಲ್ಲೊಂದು 'ಇಂಗಣ' ಹೊಡೆವ ಸರ್ಕಸನ್ನು ಬಹುಶಃ ಪೆಣಂಬೂರನು ಮೆಚ್ಚುವವನಲ್ಲ.

"ಮಹದಾಶ್ಚರ್ಯವೆಂದರೆ, ಬ್ರಿಲ್ಲಿಯಂಟೈನಿನ ಪ್ರತಿಯೊಂದು ಬಾಟಲಿಯೂ ಮಣಕೂವಲನ್ನು ತರುವ......."

ಪುನಃ ಆ ತರುಣ!

ನಾನು ಅವನನ್ನು ಅಲ್ಲೇ ತಡೆಯುತ್ತ, "ಇರಲಿ, ಹೋಗಲಿ. ನೀವು ಹೇಳುವುದನ್ನು ನಾನು ಅಲ್ಲಗಳೆಯುವುದಿಲ್ಲವಾದರೂ ನಮ್ಮ ನಮ್ಮೊಳಗಿನ ಸಂಭಾಷಣೆಯನ್ನು ಅರ್ಥವಲ್ಲೆ. ನಿಮ್ಮ ಪ್ರವೇಶದಿಂದ ಮುರಿಯಲು ನಾನು ಇಚ್ಛಿಸುವುದಿಲ್ಲ" ಎಂದು ಹೇಳಿದೆ.

"ಬೇಸರಿಸದಿರಿ. ನಾನು ವಿನೋದದಿಂದ ಆಡಿದುದು!" ಎನ್ನುತ್ತ ತರುಣನು ಸುಮ್ಮಗಾದನು.

ಪೆಣಂಬೂರನಿಗೆ ಕೊಂಬು ಬಂತಲ್ಲ! ತನ್ನ ಬ್ರಿಲ್ಲಿಯಂಟೈನ್ ಸ್ತವವನ್ನು ಮುಂದರಿಸಿದನು: "ತಿಳಿಯಲಿಲ್ಲವೇ? ನಿಮಗೆ ಜಿಲೇಬಿಯನ್ನು ನಿತ್ಯವೂ ತಿಂದರೆ, ಎಂಟು ದಿನಗಳ ಮೇಲಾದರೂ ಅದರ ಮೇಲೆ ನಿರಿಚ್ಛೆಯಾರಂಭವಾಗಬಹುದು. ನಿತ್ಯವೂ ನಾಟಕಗಳನ್ನು ನೋಡಿದರೆ, ಬೇಸರ ಬರಬಹುದು. ಆದರೆ, ಬ್ರಿಲ್ಲಿಯಂಟೈನ್ ಹಾಗಲ್ಲ. ಈ ದಿನ ಒಂದು ಬಾಟಲಿ ಕೊಂಡುಕೊಳ್ಳಿರಿ. ಅನಂತರ ಅದು ನಿಮ್ಮ ನಿತ್ಯದ ಗೆಳೆಯನಾಗಿಯೇ ಉಳಿವುದು."

"ಹೊಗೆಸೊಪ್ಪಿನಂತೆ?" ಎಂದೆ.

"ಅಲ್ಲ, ಅನ್ನದಂತೆ!" ಎನ್ನುತ್ತ, ಪೆಂಬೂರನು ಮುಂದರಿಸಿದನು: "ಈಗ, ಪೇಟೆಗೆ ನೂರಾರು ಬ್ರಿಲ್ಲಿಯಂಟಾಯ್ನುಗಳು ಬಂದಿವೆ. ಆದರೆ, ಪಾರ್ವತಿ ಬ್ರಿಲ್ಲಿಯಂಟಾಯ್ನನ್ನು ಮಿಗಿಸಿದುದಿಲ್ಲ......."

"ಈಶ್ವರನ ಜಟೆಗೆ, ಅದರದೊಂದೇ ಬಾಟಲಿ ಸಾಕಾಗಬಹುದೆಂದು ತೋರುವುದು" ಎಂದನು ಪುನಃ ಆ ಉದ್ದ ಟೋಪಿ!

ಪೆಣಂಬೂರಿನ ಮುಖವು ಕೆಂಪಗಾಯಿತು. "ಈಶ್ವರನು ಜೀವಂತನಾಗಿರುವನಾದರೆ, ಒಂದು ಬಾಟಲಿಯನ್ನು ಕೊಂಡುಕೊಳ್ಳುವುದು ನಿಜವಾಗಿಯೂ ಆತನಿಗೆ ಒಳ್ಳಿತನ್ನೇ ತಂದೀತು" ಎಂದು ಬಿರುಸಾಗಿ ನುಡಿದು,— "ದೇವರಾಗಲಿ ಮನುಷ್ಯರಾಗಲಿ, ಈ ಬ್ರಿಲ್ಲಿಯಂಟಾಯ್ನನ್ನು ಎಮರಿಸು

ವವರಿದ್ದರೆ ನನ್ನೆದುರು ನಿಲ್ಲಿರಿ ನೋಡೋಣ!" ಎಂಬ ದೃಷ್ಟಿಯಿಂದ ಆ ತರುಣನನ್ನೇ ಒಂದು ಕ್ಷಣ ದಿಟ್ಟಿಸಿದನು.

"ಕ್ಷಮಿಸಿರಿ. ಈಶ್ವರನು, ತನ್ನ ಹೆಂಡತಿಯ ಹೆಸರಿನ ಬ್ರಿಲ್ಲಿಯಂಟೈನನ್ನು ನೋಡುವ ಮೊದಲೇ, ಆ ಹೆಸರನ್ನು ಕೇಳುವ ಮೊದಲೇ ಈ ಲೋಕ ಬಿಟ್ಟಿರಬೇಕು." ಎನ್ನುತ್ತ ಆ ಉದ್ದಟೋಪಿ ಪುನಃ ತುಂಟತನದ ನಗುವನ್ನು ನಕ್ಕನು.

"ಅದು ಅವನ ದುರ್ಭಾಗ್ಯ. ಬ್ರಿಲ್ಲಿಂಟಾಯ್ನಿನ ಹೆಸರು ಅದರಿಂದ ಎಳ್ಳಷ್ಟು ಕುಂದಲಿಲ್ಲ" ಎಂದು ಪೆಣಂಬೂರನ ಗರ್ಜನೆ.

"ನಿಜ. ಬದಲಾಗಿ, ಒಂದು ಬ್ರಿಲ್ಲಿಯಂಟೈನ್ ನಾಳೆ ಹೆಚ್ಚಾಗುವುದು. **'ಗಣಪಾ ಬ್ರಿಲ್ಲಿಯಂಟೈನ್'** ಎಂಬುದನ್ನೊಬ್ಬನು ನಾಳೆ ಪೇಟೆಗೆ ತರಲಿದ್ದಾನೆಂದು ಕೇಳಿದೆ"ಎಂದು ಆ ಉದ್ದಟೋಪಿಯು ಪೆಣಂಬೂರನನ್ನು ಕೆಣಕಿ, ನನ್ನ ಕಡೆಗೆ ತಿರುಗಿ "ಆದರೆ, ಸ್ವಾಮಿ, ಅದನ್ನು ಆನೆಗಳಿಗೆ ಸವರಿಕೊಳ್ಳುವುದರಿಂದ ನಮಗೆ ಸೊಂಡಿಲು ಬರುವುದೆಂದೂ ಎಣಿಸಬೇಡಿ. ಕೇವಲ ಒಂದು ಹೆಸರು." ಎಂದು ಚೇಷ್ಟೆಯಿಂದ ನುಡಿದನು.

ಪೆಣಂಬೂರಿಗೆ ನೆತ್ತರೆಲ್ಲ 110 ಡಿಗ್ರಿಗೆ ಬಿಸಿಯಾಗಿದ್ದಿರಬೇಕು. ಬಾಯಲ್ಲಿ ನೊರೆ ಬಂತು. "ಹುಚ್ಚರನ್ನು ಮಾತ್ರ ಯಾವ ಬ್ರಿಲ್ಲಿಯಂಟಾಯ್ನೂ ಗುಣಪಡಿಸದು." ಎಂದನು.

"ಇಲ್ಲ; ಹುಚ್ಚು ಹಿಡಿಸುವ ಬ್ರಿಲ್ಲಿಯಂಟೈನುಗಳು, ಅದನ್ನು ಗುಣಪಡಿಸುವುವೆಂದು ಎಣಿಸುವುದೇ ಹುಚ್ಚು!" ಎಂದು, ಚಾವಟಿಯಿಂದ ಹೊಡೆದಂತೆ ಉತ್ತರವಿತ್ತನು ಜೋಳುಮುಖದ ಉದ್ದಟೋಪಿ.

ಇನ್ನು ಇದೊಂದು ದೊಡ್ಡ ಕದನಕ್ಕೆ ದಾರಿಯಾಗುವುದೆಂದು ನೆನೆದು ನಾನು, ಉದ್ದಟೋಪಿಗೆ ಕಣ್ಣುಮುಚ್ಚಿ, ಕೈಸನ್ನೆಮಾಡಿ, ಪೆಣಂಬೂರನನ್ನು ಕುರಿತು,—"ಹೋಗಲಿ, ಬಿಡಿ. ಬೇರಾವುದಾದರೂ ವಿಚಾರ ಇದ್ದರೆ ಮಾತಾಡಿ!" ಎಂದೆ.

"ಇಲ್ಲ....ಎಂದಿಗೂ ಇಲ್ಲ. ನನ್ನ ಬ್ರಿಲ್ಲಿಯಂಟೈನಿನ ಕತೆಯನ್ನು ಸಾವಿರ ಜನರು ತಡೆದರೂ ನಿಮಗೆ ಹೇಳದೆ ಬಿಡುವವನಲ್ಲ" ಎಂದು ಪೆಣಂಬೂರನು ಕ್ರೋಧೋನ್ಮತ್ತನಾಗಿ ನುಡಿದನು.

ಉದ್ದಟೋಪಿಯು ಇನ್ನಾವ ನಂಜಿನ ಮಾತನ್ನಾಡುವನೋ ಎಂದು ಹೆದರಿ, ನಾನು ದೀನವದನದಿಂದ ಆತನಿಗೆ ಮತ್ತೊಮ್ಮೆ, ಸುಮ್ಮಗಿರುವಂತೆ ಕೈಸನ್ನೆ ಮಾಡಿದೆ. ಉದ್ದ ಟೋಪಿಯು ತಲೆಯಲ್ಲಾಡಿಸಿ, ಪೆಣಂಬೂರನನ್ನು ಒಮ್ಮೆ ತಿರಸ್ಕಾರದ ದೃಷ್ಟಿಯಿಂದ ನೋಡಿ ಸುಮ್ಮಗಾದನು. ಅದೇ ಸಮಯದಲ್ಲಿ ಸರ್ಕಸಿನ ಗಂಟೆ ಹೊಡೆಯಿತು.

* * * *

ಸರ್ಕಸ್ ಮುಗಿವ ತನಕ ನಾವು ಯಾವ ಮಾತನ್ನೂ ಆಡಲಿಲ್ಲ. ರಾತ್ರಿ 12–30ಕ್ಕೆ ನಾವು ಹೊರಗೆ ಬಂದಾಗ, ರಸ್ತೆಯಲ್ಲಿ ನನ್ನ ಬೆನ್ನನ್ನು ಯಾರೋ ಮುಟ್ಟಿದಂತಾಯಿತೆಂದು ಹಿಂದೆ ನೋಡಿದೆ. ಉದ್ದ ಟೋಪಿ.

"ಒಂದು ಕ್ಷಣ ನಿಲ್ಲಿರಿ!" ಎಂದನು. ಪೆಣಂಬೂರನೂ ಆಗ ನನ್ನ ಬಳಿಯಲ್ಲಿದ್ದನು.

"ನಾನು ಸರ್ಕಸ್ ಢೇರೆಯೊಳಗೆ ಆಡಿದ ಒಂದೆರಡು ಮಾತುಗಳನ್ನು ಮರೆಯುವಂತೆ ನಿಮ್ಮ ಸ್ನೇಹಿತರಿಗೆ ಹೇಳಿರಿ!" ಎಂದನು. ಪೆಣಂಬೂರನು ಮುಖತಿರುಗಿಸಿ ಮತ್ತೆಲ್ಲಿಗೋ ನೋಡಿದನು.

"ಚಿಂತೆಯಿಲ್ಲ, ನಾವು ಅದನ್ನು ವಿನೋದವೆಂದೇ ಸ್ವೀಕರಿಸುವೆವು" ಎಂದು ನಾನು ನಸುನಗುತ್ತ ಹೇಳಿದೆ.

"ಬ್ರಿಲ್ಲಿಯಂಟೈನನ್ನು ಅನಗತ್ಯವಾಗಿ ದೂಷಿಸುವುದು ನನ್ನ ಉದ್ದೇಶವಲ್ಲ. ಪಾರ್ವತಿ ಬ್ರಿಲ್ಲಿಯಂಟೈನ್ ಆಗಲಿ, ಮಿಸ್ಕಿತ್ ಬ್ರಿಲ್ಲಿಯಂಟೈನ್ ಆಗಲಿ—ಅವವುಗಳ ಗುಣ ಅವವುಗಳ ಬಾಟಲಿಯಲ್ಲಿದೆ ಎಂಬುದು ಖಂಡಿತ. ನಾವು ಸುಮ್ಮನೆ ಏಕೆ ಏನೋ ಮಾತಾಡಿ ವಿಪರೀತಾರ್ಥ ಮಾಡಿಕೊಳ್ಳಬೇಕು?" ಎಂದನು ಉದ್ದಟೋಪಿ. ಆತನ ಮಾತುಗಳಲ್ಲಿ ಪಶ್ಚಾತ್ತಾಪದ ವರ್ಣವು ಕಿಂಚಿತ್ ಇತ್ತು.

ಪೆಣಂಬೂರನು ಆ ಮಾತುಗಳನ್ನು ಕೇಳಿ, ತನ್ನ ಆಗಂತುಕ ಎದುರಾಳಿಯು ಪಶ್ಚಾತ್ತಾಪದಿಂದ ಬೆಂದುಹೋಗಿರುವನೆಂದು ವಿಜಯ ಮುಖಮುದ್ರೆಯಿಂದ ನಸುನಗುತ್ತ ನನ್ನನ್ನು ನೋಡಿದನು.

"ಏನೋ ಒಂದು ದೈವದ ಕೃಪೆಯಿಂದ ನಾವು ಸರ್ಕಸ್ ಢೇರೆಯೊಳಗೆ ಕೂಡಿ, ಒಂದು ಬಗೆಯ ಪರಿಚಯ ಮಾಡಿಕೊಂಡೆವು. ನಾವೆಲ್ಲ

ಈಗ ಒಬ್ಬರನ್ನೊಬ್ಬರು ಕಿಂಚಿತ್ತಾದರೂ ಅರಿತುಕೊಳ್ಳದೆ ಅಗಲುವುದು ನನ್ನ ಮನಸ್ಸಿಗೆ ಹತ್ತದು. ನಿಮಗೆ ಸತ್ಯ ಹೇಳುವುದಾದರೆ, ಬ್ರಿಲ್ಲಿಯಂಟೈನ್ ಪ್ರಿಯರಲ್ಲಿ ನಾನೂ ಒಬ್ಬ" ಎಂದನು.

ಇವನು? ನನಗೆ ಆಶ್ಚರ್ಯವಾಯಿತು. ಪೆಣಂಬೂರನೂ ಬೆರಗಾಗಿ ಬಾಯ್ತೆರೆದು ನಿಂತನು.

"ನಾನು ಮೂರು ತಿಂಗಳಲ್ಲಿ 10 ಬಾಟಲಿ ಬ್ರಿಲ್ಲಿಯಂಟೈನನ್ನು ಉಪಯೋಗಿಸಿದ್ದೇನೆ. ಆದರೆ ಪಾರ್ವತಿ ಬ್ರಿಲ್ಲಿಯಂಟೈನ್ ಅಲ್ಲ, ಬೇರೊಂದು. ನಿತ್ಯವೂ ಕನ್ನಡಿಯಲ್ಲಿ ಮುಖನೋಡಿ, ನನ್ನ ಕೂದಲುಗಳ ಮೇಲಾಗುತ್ತಿರುವ ಪರಿಣಾಮವನ್ನು ನೋಡಿದ್ದೇನೆ. ಬ್ರಿಲ್ಲಿಯಂಟೈನು ಕೂದಲುಗಳ ಮೇಲೆ ನಡೆಸುವ ಅದ್ಭುತಗಳನ್ನು ಚೆನ್ನಾಗಿ ಬಲ್ಲೆ: ಸಂಕ್ಷೇಪವಾಗಿ ಹೇಳುವುದಾದರೆ:— ಹತ್ತನೇ ಬಾಟಲಿಯಲ್ಲಿ ಕೊನೆಯದಾಗಿ ಉಳಿದ ಒಂದು ನೆಲ್ಲಿಕಾಯಿಯಷ್ಟು ಬ್ರಿಲ್ಲಿಯಂಟೈನನ್ನು ತೆಗೆದು ನನ್ನ ತಲೆಗೆ ಹಚ್ಚುವಾಗ, ನನ್ನ ಕೂದಲುಗಳೆಷ್ಟು ಬೆಳೆದಿವೆ ಎಂಬುದನ್ನು ನೋಡುವುದು ನನಗೆ ಅಸಾಧ್ಯವೇ ಆಯಿತು. ಕಾರಣ?"

"ಕಾರಣ, ಕೂದಲುಗಳನ್ನು ಲೆಕ್ಕಮಾಡುವುದು ಎಲ್ಲರಿಂದಲೂ ಅಸಾಧ್ಯ!" ಎಂದೆವು ನಾವು.

"ನಿಜ. ನನ್ನ ವಿಷಯದಲ್ಲಿ ಅದು ಮತ್ತೂ ನಿಜ. ಏಕೆಂದರೆ........" ಎನ್ನುತ್ತ, ತನ್ನ ತಲೆಯ ಮೇಲಿನ ಟೋಪಿಯನ್ನು ತೆಗೆದನು.

ಭಗವಂತ! ಎಷ್ಟು ನಿಜ! **ಆತನ ತಲೆಯ ಮೇಲೆ ಒಂದೇ ಒಂದು ಕೂದಲಿರಲಿಲ್ಲ!**

ಹಾಗೆ ಹೇಳಿ, ಉದ್ದಟೋಪಿಯು ಫಕ್ಕನೆ ಪೆಣಂಬೂರಿನ ಕಡೆಗೆ ಕೈಚಾಚಿ, "ಕ್ಷಮಿಸಿರಿ, ನಿಮ್ಮ ತಲೆಯು ನನ್ನಷ್ಟು ಅಸಾಧ್ಯ ವಸ್ತುವಾಗಿ ಪೂರ್ವಟ್ಟಿಲ್ಲವೆಂದೆಣಿಸುವೆನು" ಎನ್ನುತ್ತ ಆತನ ತಲೆಯ ಟೋಪಿಯನ್ನು ತೆಗೆದನು!

ಭಯಂಕರ! ಪೆಣಂಬೂರನ ನೆತ್ತಿಯ ನಡುವೆ ಒಂದು ಸಾಮಾನ್ಯ ಗೆರಟೆಯಷ್ಟು ಗಾತ್ರದ ಪ್ರದೇಶವು, ಹಪ್ಪಳದಂತೆ ಕಾಣುತಿತ್ತು!

ಉದ್ದಟೊಪ್ಪಿಯು ನಸುನಗುತ್ತಲೇ, ಪೆಣಂಬೂರಿನ ಟೊಪ್ಪಿಯನ್ನು ಆತನ ತಲೆಗೆ ಇರಿಸಿ,—

—"ತಲೆಕೂದಲಿನ ಉಪಯೋಗವೇ ನಮಗಿಲ್ಲದ ಕಾರಣ, ಇನ್ನು ನೂರು ವರ್ಷಗಳಲ್ಲಿ ನಮ್ಮ ತಲೆಗಳು ಬೋಳಾಗಬಹುದೆಂದು ವಿಜ್ಞಾನಿಗಳು ಹೇಳುತ್ತಾರೆ. ಅವರು ಆದರ ಕಾರಣವನ್ನು ಅಷ್ಟು ದೂರಕ್ಕೆ ಹೋಗಿ ಹುಡುಕುವ ಬದಲಾಗಿ ತಮ್ಮ ತಲೆಗೆ ಹಚ್ಚುವುದಕ್ಕೆಂದು ತಂದು, ಕಪಾಟುಗಳಲ್ಲಿರಿಸಿದ್ದ ನಾನಾ ಬಗೆಯ ಲೇಪಗಳ ಬಾಟಲಿಗಳನ್ನು ನೋಡಿದರೆ ಅವರಿಗೆ ಉತ್ತರ ಸಿಕ್ಕುತಿತ್ತು. ಆದರೆ,—ಇಲ್ಲ; ಹಾಗೆ ಉತ್ತರ ಸಿಗುವುದು ಕಷ್ಟ. ಕಾರಣ,—ನಾನು ಈಗಲೂ ಬ್ರಿಲ್ಲಿಯಂಟೈನ್ ಹಚ್ಚುತ್ತಿದ್ದೇನೆ,—ಹೋದ ಕೂದಲು ಪುನಃ ಚಿಗುರಬಹುದೆಂದು ಆಸೆ!........ ನಮಸ್ಕಾರ!" ಎನ್ನುತ್ತ ಜನಸಂದಣಿಯೊಳಗೆ ಸಿಲುಕಿ ಮಾಯವಾದನು.

ಪೆಣಂಬೂರನ ಮುಖ ಹೇಗಾಗಿದೆಯೋ ನೋಡೋಣವೆಂದು, ಆತನು ನಿಂತ ಕಡೆಗೆ ಮುಖ ತಿರುಗಿಸಿದೆ. ಆದರೆ, ಪೆಣಂಬೂರನೂ ಮಾಯವಾಗಿದ್ದನು.

ಬ್ರಿಲ್ಲಿಯಂಟೈನನ್ನು, ಕೂದಲು ಉದುರಿಹೋದ ಮೇಲೂ ಹಚ್ಚುತ್ತಿರುವರೆಂಬುದನ್ನು ಕೇಳಿ, ನನಗೆ ಅದರ ಮೇಲೆ ಫಕ್ಕನೆ ಪ್ರೇಮೋದಯವಾಗಿದೆ. ಆದರೆ ಹತ್ತು ಬಾಟಲಿಗಳನ್ನು ಉಪಯೋಗಿಸುವುದರೊಳಗೆ ಕೂದಲೆಲ್ಲ ಉದುರಿಹೋಗಬೇಕೆಂಬ ಇಚ್ಛೆ ನನಗಿಲ್ಲ. ಹನ್ನೆರಡು ಬಾಟಲಿಗಳ ತನಕವಾದರೂ ಕೂದಲು ಉಳಿವ ಒಂದು ಬ್ರಿಲ್ಲಿಯಂಟೈನ್ ಯಾವುದೆಂದು ಯಾರಾದರೂ ನನಗೆ ತಿಳಿಸಿದರೆ ಉಪಕೃತನಾಗುವೆನು.

---

೩. ರಜೆಯ ಮರುದಿನ

ರೈಲುಬಂಡಿಯಲ್ಲಿ ನನ್ನೆದುರು ಕಾಣುತ್ತಿರುವ ಮುಖಗಳು ವಿಜಾತೀಯವಾಗಿ, ಭಯಂಕರವಾಗಿವೆ. ನಾಲ್ಕು ಮುಖಗಳು ಸೇಕಡಾ ನೂರು ಹುಚ್ಚರ ಆಸ್ತಿಗಳು; ಉಳಿದೆರಡು, ತರಬೇತಿಹೊಂದಿದ ಕಳ್ಳರ ಮುಖಗಳು. ಆ ಕಳ್ಳರಿಬ್ಬರು ಆ ಹುಚ್ಚರ ಕಿಸೆಗಳಲ್ಲಿದ್ದ ವೀಳ್ಯದೆಲೆಯನ್ನು ತೆಗೆದು ತಿಂದು, ಹೆಬ್ಬೆರಳು ಗಾತ್ರದ ಬೀಡಿಗಳನ್ನೆಳೆದು ನನ್ನನ್ನು ಭಂಗಿಸಿದರು.

* * * * *

ರೈಲ್ವೆ ನಿಲ್ದಾಣದಲ್ಲಿ ಟಿಕೆಟ್ ಕಲೆಕ್ಟರನು, ನನ್ನ ಟಿಕೇಟು ಮಸುಕಾಗಿದೆ ಎಂದನು. ಒಳ್ಳೆ ಶಾಯಿ ಹಾಕಿಸಿ, ಒಳ್ಳೆ ಛಾಪಖಾನೆಯಲ್ಲಿ ಅಚ್ಚು ಹಾಕಿಸಿದರೆ ಮಸುಕಾಗುವದಿಲ್ಲವೆಂದು ಅವನಿಗೆ ಬುದ್ಧಿವಾದ ಹೇಳಿ, ಸುಲೋಚನಗಳನ್ನವನು ಉಪಯೋಗಿಸದಿದ್ದರೆ ಮೋಸವಿದೆಯೆಂದೂ ಸೂಚಿಸಿದೆ. ಸ್ಥಿತಿಯು ಕೊನೆಯಂಕಕ್ಕೆ ಮುಟ್ಟುವ ಕಾಲಕ್ಕೆ ಸರಿಯಾಗಿ ಜಿಲ್ಲಾ ಜಡ್ಜಿಗಳು ಅತ್ತ ಬಂದು ನಮ್ಮನ್ನು ಪೃಥಕ್ಕರಿಸದಿದ್ದರೆ ಟಿಕೆಟ್ ಕಲೆಕ್ಟರನ ಅಥವಾ ನನ್ನ ಹಲ್ಲುಗಳು ಕೆಳಗಿಳಿಯುತಿದ್ದುವು.

* * * * *

ನಗರದ ರಸ್ತೆಗಳಲ್ಲಿ ಕಿಸೆಗಳ್ಳರು ಸ್ವೇಚ್ಛೆಯಾಗಿ ತಿರುಗಾಡುತ್ತಿರುವರು. ಪ್ರತಿಯೊಬ್ಬನ ದೃಷ್ಟಿಯೂ ಹದ್ದಿನ ದೃಷ್ಟಿ; ಮುಸುಡುಗಳೆಲ್ಲ ದರೋಡೆಖೋರರ ಮುಸುಡುಗಳು!

* * * * *

ಪೇಪರ್ ಬೇಕೇ ಎಂದು ಹುಡುಗ ಕೇಳಿದನು. ದುಡ್ಡುಕೊಟ್ಟುಕೊಂಡುಕೊಂಡರೆ, ಅದರಲ್ಲಿ ಸುದ್ದಿಗಳೇ ಇಲ್ಲ. ಹಲವು ತಕ್ಸೀರುಗಾರರು, ಕಿಸೆಗಳ್ಳರು, ದರೋಡೆಖೋರರು, ಸ್ವೇಚ್ಛೆಯಾಗಿ ತಿರುಗಾಡುವಲ್ಲಿ ಒಂದು ಒಳ್ಳೇ ಕೊಲೆಯಾಗಿಲ್ಲವೆಂದರೆ....! ಹಿಟ್ಲರರೂ ಮುಸಲನಿಯೂ ಭಾಷಣಗಳನ್ನು ಮಾಡಿಲ್ಲ. ವಿಲಾಯಿತಿ ಕ್ರಿಕೆಟ್ ಆಟದಲ್ಲಿ ಮಳೆ ಬಂದು, ಆಟ ನಿಂತಿತಂತೆ. ಒಳ್ಳೇ ಆಟದಲ್ಲೆ ಒಳ್ಳೇ ಮಳೆ!

* * * * *

ನಾವು ಆಶ್ಚರ್ಯಪಡಬೇಕಾದ ಪ್ರಮುಖ ವ್ಯಕ್ತಿಗಳಾರೂ ದಿವಂಗತರಾದ ಸುದ್ದಿಯೂ ಇಲ್ಲ!

* * * * *

ಆಫೀಸಿನ ಕೆಳಗೆ ರಬ್ಬರ್ ಸುಟ್ಟ ವಾಸನೆ ಬರುತ್ತಿದೆ! ಈ ವಾಸನೆ ಎಂದಿಗಿಂತಲೂ ಈ ದಿನ ಹೆಚ್ಚು! ಸಾಬೂನನ್ನು ರಖಂ ಆಗಿ ತರಿಸುವ ಅಂಗಡಿಯವರು ಆಗಾಗ್ಗೆ ರಬ್ಬರನ್ನು ಸುಡುವುದು ಏಕಂತೆ?

* * * * *

ನನ್ನ ಕೆಲಸದವನ ಮೂಗು ಈ ದಿನ ಎಂದಿಗಿಂತಲೂ ಕೆಂಪಗಾಗಿದೆ.

ಅವನ ಮೂಗು ಯಾವಾಗಲೂ ಕೆಂಪು; ಆದರೆ ಈ ದಿನ ಟೊಮೆಟೋ ಹಾಗೆ ಬಣ್ಣ ತಾಳುವುದು ನನ್ನಿಂದ ಸಹಿಸಲಾಗದು.

* * * * *

ಇತರರ ಕೆಲಸದವರಲ್ಲಿ ಕೆಲವರಿಗೆ ಕೆಂಪು ಮೂಗು ಇರಬಹುದು. ಆದರೆ, ಅವರೆಲ್ಲ ಏನೋ ಹಚ್ಚಿ, ಅವುಗಳನ್ನು ಮಡಿಮಾಡುತ್ತಾರೆ. ಎಲ್ಲರಿಗಿಂತಲೂ ಅತಿಶಯವಾಗಿ ನನ್ನ ಕೆಲಸದವನಿಗೇ ಕೆಂಪು ಮೂಗಿನ ಹಾಗೆ ಕಾಣುವ ಕೆಂಪು ಮೂಗು ಇರಬೇಕೇಕೆ?

* * * * *

ನನ್ನ ಆಫೀಸು ಕುರ್ಚಿಯು ಗಟ್ಟಿಯಾಗಿದೆ. ತಲೆದಿಂಬನ್ನು ಯಾರೋ ತೆಗೆದಿರುವರು. ಪೇಪರ್ ಕಟ್ಟನ್ನಿಟ್ಟರೆ, ಅದು ಕುರ್ಚಿಗಿಂತಲೂ ಗಟ್ಟಿಯಾಗಿ ಕಾಣುತ್ತಿದೆ.

* * * * *

ಶಾಯಿದವತಿಯಲ್ಲಿ ನೊಣಗಳು ಈಜಾಡುವುದೆಂದರೆ...........!

* * * * *

ಗಂಟೆ ಬಾರಿಸಿದೆ. ಕೆಲಸದವನು ಕಾಣುವುದಿಲ್ಲ. ಅರ್ಧ ತಾಸಿನ ತನಕ ಬಾರಿಸಿದೆ. ಕೆಲಸದವನು ಕಾಣೆಯಾಗಿಯೇ ಇದ್ದಾನೆ! ಕೊನೆಗೆ, ಅರ್ಧ ತಾಸಿನಿಂದ ನಾನೇಕೆ ಗಂಟೆ ಬಾರಿಸುತ್ತಿರುವೆನೆಂದು ತಿಳಿಯದೆ "ಬೆಲ್ಲ"ನ್ನು ತೆಗೆದು ಪೆಟ್ಟಿಗೆಯಲ್ಲಿಟ್ಟು ಕೆಲೆಂಡರಿನ ಕಡೆಗೆ ನೋಡಿದೆ.

* * * * *

ಕೆಲೆಂಡರಿನ ಮೇಲೆ ಎಷ್ಟು ಧೂಳು! ಕೆಲೆಂಡರ್ ಕಳಿಸುವವರು ಧೂಳನ್ನೂ ಕಳಿಸಿರಲಿಕ್ಕಿಲ್ಲ. ಪುನಃ ಘಂಟೆ ಬಾರಿಸಿದೆ. ಕೆಲಸದವನ ಬದಲು ಮತ್ತೊಂದು ಆಫೀಸಿನ ಕೆಲಸದವನು ಬಂದು, "ತಾವು ತಾಸಿನ ತನಕ ಘಂಟೆ ಬಾರಿಸಿದರೆ ನಮ್ಮ ಆಫೀಸಿನ ಹುಡುಗರೆಲ್ಲ ಗಾಬರಿಪಡುತ್ತಾರೆ!" ಎಂದನು. ಪೆಟ್ಟಿಗೆಯಿಂದ ತೆಗೆದ ಬೆಲ್ಲನ್ನು ಅವನ ಕಡೆಗೆ ಬಿಸಾಡಿದೆ. ಕೊನೆಗೆ, ಆ ಮತ್ತೊಂದು ಆಫೀಸಿನ ಕೆಲಸದವನು ಕ್ರೊಪ್ ಬಾಚಿ ಚಲ್ಲಣ ಹಾಕಿರುವನೆಂದೂ, ಅವನ ಮಾವನು ಕರ್ನೂಲಿನಲ್ಲಿ ಮುನ್ಸಿಫನೆಂದೂ ತಿಳಿದು, ಅವನಿಂದಲೇ ಬೆಲ್ ತರಿಸಿ, ಅವನಿಗೆ ನಾಲ್ಕಾಣೆ ಕೊಟ್ಟು,

ಕರ್ನೂಲು ಮುನ್ಸಿಫರಿಂದ ಆಗ ತಾನೆ ನನಗೆ ಬಂದ ಕಾಗದದಲ್ಲಿ ನಾಲ್ಕಾಣೆ ಕೊಡಬೇಕೆಂದು ಬರೆದಿತ್ತು, ಎಂದು ಸುಳ್ಳು ಹೇಳಿದೆ.

*　　*　　*　　*　　*

ಆಫೀಸಿನ ಬಾಗಿಲು ಹಾಕಿದೆ. ಎರಡು ಕುರ್ಚಿಗಳನ್ನು ಒಟ್ಟಿಗಿಟ್ಟೆ. ಹರಕು ಕಾಗದಗಳನ್ನು ಹಾಕುವ ಪೆಟ್ಟಿಗೆಯ ಹಲಗೆಗಳನ್ನು ತೆಗೆದು ತಲೆಯಡಿಯಲ್ಲಿಟ್ಟು ನಿದ್ದೆಹೋದೆ.

*　　*　　*　　*　　*

ಇನ್ನೊಮ್ಮೆ, ರವಿವಾರ ರಜೆಯಿಂದ ಆಫೀಸಿಗೆ ಬರುವ ಆ ದಿನವನ್ನು ಮನೆಯಲ್ಲಿಯೇ ಕಳೆಯಬೇಕೆಂದು ಮಾಡಿದ್ದೇನೆ.

---

೪. ಆಯಾಸವಿಲ್ಲದ ಒಗಟುಗಳು

ಮಳೆಗಾಲದಲ್ಲಿ ಕೆಲಸ ಕಡಿಮೆಯೆಂದು ಹೇಳುವರಾದರೂ, ಕರಣಿಕರಿಗೆ ದೊರೆವ ರಜೆ ಒಂದು ರವಿವಾರ ಮಾತ್ರವೆಂಬ ದುಃಖದಿಂದ, ಒಂದು ರವಿವಾರ ನನ್ನ ಹರಕುಮುರುಕು ಕೊಠಡಿಯಲ್ಲಿ ಕುಳಿತು, ನನ್ನ ಮುಂದಿರುವ—ಕಡ ಇಸುಕೊಂಡ—೨೨ ಪತ್ರಿಕೆಗಳ ಕಡೆಗೂ ದೃಷ್ಟಿ ಹರಿಯಿಸಿ, ದುಃಖವನ್ನು ನೀಗಲು ಒಂದನ್ನು ಎತ್ತಿಕೊಂಡೆ. ಅದರ ಪುಟಗಳನ್ನು ತಿರುವಿ ಮಡಚಿ, ಮತ್ತೊಂದನ್ನು ತೆಗೆದು, ಪುನಃ ಹಾಗೆಯೇ ತಿರುವಿ ಮಡಚಿಡುತ್ತ, ಆ ೨೨ ಪತ್ರಿಕೆಗಳನ್ನೂ, ಅಂದಿಗೆ ಏಳನೇ ಬಾರಿ ತಿರುವಿ ಮಡಚುತ್ತ ಹೋದೆ. ಆ ಏಳನೇ ಬಾರಿ ನನಗೊಂದು ಶೋಧದ ಬೋಧೆಯಾಯಿತು; — ಆ ೨೨ ಪತ್ರಿಕೆಗಳಲ್ಲಿ ೨೧ರಲ್ಲಿ ಒಗಟುಗಳಿವೆ! ಆಗಲೇ ಹೊಳೆದ ಕರಡು ವಿಚಾರಗಳಿವು:

ಚಕ್ರಬಂಧಗಳೆಂದರೆ ನಿಮಗೆ ಗೊತ್ತು—ಮಂದವಾದ ತಲೆಗಳನ್ನು ಚುರುಕುಮಾಡಿ, ಚುರುಕಾದುವುಗಳನ್ನು ಅತಿ ಚುರುಕುಮಾಡಿ, ಅತಿ ಚುರುಕಾದುವುಗಳನ್ನು ಪರಮಾವಧಿಗೆ ಮುಟ್ಟಿಸುವ ಸುಲಭಪಾಠಗಳು. ಯಾವ ದಿನವೂ ನೀವು ಬಾವುಟೆಗುಡ್ಡೆ ಹತ್ತಿ ನೋಡಿದರೆ, ಬೋಳುತಲೆಯ ಐವರು ನಿವೃತ್ತಿ ಸರಕಾರೀ ನೌಕರರು, ಮುಂಡಾಸನ್ನು ದೂರ ಬಿಸುಡಿ,

ತಲೆಯನ್ನು ತಂಗಾಳಿಯ ಆರೈಕೆಗೆ ಭರವಸೆಯಿಂದ ಬಿಟ್ಟು, ಕಾಲುರೀಮು ಕಾಗದವನ್ನು ಬಳಿಯಲ್ಲಿಟ್ಟುಕೊಂಡು, ಚೌಕಾಕಾರವಾಗಿ ಗೀಟುಗಳನ್ನೆಳೆದು, ಕಾಗೆಗುಬ್ಬಚ್ಚಿಗಳನ್ನು ಬಿಡಿಸಿ ರಾಶಿಹಾಕುವುದನ್ನು ನೋಡಬಹುದು. ಯಾವ ವಿದ್ಯಾರ್ಥಿಯ ಮೇಜಿನ ಡ್ರಾವರನ್ನೊಎಳೆದಲ್ಲಿ ಮೊದಲು ಕಣ್ಣಿಗೆ ಬೀಳುವ ಹಾಳೆಗಳು ಚಕ್ರಬಂಧಬಂಧಿತವಾದುವುಗಳು. ನೀವದನ್ನು ಹುಚ್ಚೆನ್ನ ಬಹುದು. ಆದರೆ, ಮೂರಾಣೆಯೋ ಆರಾಣೆಯೋ ಕೊಟ್ಟು ಒಂದು ಪತ್ರಿಕೆ ಯನ್ನು ಕೊಂಡುಕೊಂಡು, ಬಾಯೊಳಗೆ ಪೆನ್ಸಿಲನ್ನು ತುರುಕಿ ಚೀಪುತ್ತ ಮಿದುಳಿನಲ್ಲಿ ಕಸರತ್ತಾಡಿ ಕುಳಿತುಕೊಳ್ಳುವ ಶ್ರಮವು ಸಾಮಾನ್ಯವಲ್ಲ. ನಿಮ್ಮೊಳಗಿನ ಶಬ್ದಭಂಡಾರವೆಷ್ಟಿದೆಯೆಂದು ಅಳತೆ ಮಾಡಿ ನೋಡುವ ಸಾಧನವದು. ನೀವು ಯಶಸ್ವಿಯಾದರೆ ಹಣದ ಭಂಡಾರ ದೊರೆಯು ಬಹುದು; ಸೋತರೆ ಶಬ್ದಭಂಡಾರ ಬೆಳೆಯಬಹುದು. ಅಂತು ಎರಡ ರಲ್ಲೊಂದು ಭಂಡಾರ ದೊರೆವ ಶರ್ತದಲ್ಲೆ ನೀವು ಪೆನ್ಸಿಲನ್ನು ಚೀಪುವ ದಾಗಿದೆ. ಆದರೆ,—

ಆದರೇನು? ಯಾವ ಭಂಡಾರವೂ ಎಷ್ಟಕ್ಕೂ ಬೆಳೆಯದೆ ವೈರಾಗ್ಯ ತಾಳಿದವರಿರುವರು. ಅವರಲ್ಲಿ ನೀವೊಬ್ಬರಾಗಿರಬೇಕು. ಅಹುದೆನ್ನಿ; ನಾಚಿಕೆಯೇನು? 'ಕ'ದಿಂದಾರಂಭವಾಗಿ 'ಕ್ಷ' ಎಂಬಲ್ಲಿ ಮುಗಿವ ಒಂದು ವೃಕ್ಷವೆಂಬುದಕ್ಕೆ—(೧) ಕಪಿಲ ವೃಕ್ಷ (?) (೨) ಕಟುಕರೋಹಿಣಿ ವೃಕ್ಷ(?) (೩) ಕದಳೀ ವೃಕ್ಷ (?) (೪) ಕರಿಮರ ವೃಕ್ಷ (?) ಇವಿಷ್ಟನ್ನು ಬರೆದಾದ ಮೇಲೆ,—"**ಏಳು ಅಕ್ಷರಗಳಾಗಬೇಕೆಂ**"ಬುದನ್ನು ನೋಡಿ, ಮೊದಲು ಬರೆದ ಆ ನಾಲ್ಕು ವೃಕ್ಷಗಳನ್ನು ಅಲ್ಲೇ ಕಡಿದು ಹಾಕಿ; 'ಕತಾರಿದ್ರುಮ ವೃಕ್ಷ'—'ಕಂಠಕಪ್ರಾಯ ವೃಕ್ಷ'ವೆಂದು ನವಸೃಷ್ಟಿಗೆ ಹೊರಟು, ಸಂತಾಪ ದಿಂದ ಕಣ್ಣೀರು ಬರಲು,—'ಕಂಡೂ ಕೇಳದ ವೃಕ್ಷ'ವೆಂದು ಕೋಪದಿಂದು ಸುರಿ, ಪೆನ್ಸಿಲನ್ನು ಮೇಜಿಗೆ ಬಡೆದು, ವೃಕ್ಷಗಳನ್ನು ಸೃಷ್ಟಿಸಿದ ಆ ಪತ್ರ ಭೂಮಿಯನ್ನು ಮುಡಚಿ ಮುದ್ದೆಮಾಡಿ ನಿಮ್ಮ ಕೊಠಡಿಯ ಕಿಟಕಿಯಿಂದ— ಹೊರಗೆ ಜಗುಲಿ ಮೇಲೆ ಮಲಗಿದ ಯಾವನೊಬ್ಬ ಸುಬ್ಬ—ಧೂಮು— ಕಿಟ್ಟ ಎಂಬ ಆಳಿನ ಮುಖಕ್ಕೆ ಒಗೆವುದು ಕಷ್ಟವಲ್ಲದಿದ್ದರೆ ಸುಖವೂ ಆಗಿರದು.

"ಹದಿಮೂರು ಕಡ್ಡಿಗಳಿವೆ. ಇವುಗಳನ್ನು ಕ್ರಮವಾಗಿರಿಸಿ ಏಳು ಕೊಠಡಿಗಳನ್ನು ಮಾಡಿರಿ" ಎಂದು ಮತ್ತೊಂದು ಒಗಟು. ಸುಂಕವೇರಿದ ಒಂದು ಬೆಂಕಿ ಪೆಟ್ಟಿಗೆಯನ್ನು ಕೊಂಡುಕೊಂಡು, ನೂರು ಜೋಡು ಹದಿಮೂರು ಕಡ್ಡಿಗಳನ್ನು ನೀವು ಪ್ರಯತ್ನಿಸಿದರೂ ಏಳು ಕೊಠಡಿಗಳನ್ನು ಕಟ್ಟಿದುದಿದೆಯೇ? ಖಂಡಿತವಾಗಿಯೂ ಇಲ್ಲ.

ಅಷ್ಟೇಕೆ ನಿಮ್ಮ ಮಿದುಳಿಗೆ ತ್ರಾಸ? ನನ್ನ ಕೆಲವು ಚಕ್ರಬಂಧಗಳನ್ನು ಮಾಡಿ:— (೧) **ನಾಲ್ಕು ಕಡ್ಡಿಗಳನ್ನು ತೆಗೆಯಿರಿ.** (ಇವುಗಳನ್ನು ಯಾರ ಬೆಂಕಿಪೆಟ್ಟಿಗೆಯಿಂದಲೂ ಧರ್ಮಾರ್ಥವಾಗಿ ಪಡೆಯಬಹುದು.) **ಅವುಗಳಲ್ಲಿ ಒಂದನ್ನು** (ಮುಳಿ ಮಾಡಿಸ ಮನೆ ಬಳಿಯಲ್ಲಿದ್ದರೆ, ಉರಿಸದೆ) **ಬಿಸುಡಿ ಬಿಟ್ಟು ಒಂದು ತ್ರಿಕೋಣವನ್ನು ಮಾಡಿ. (೨) ನಾಲ್ಕರಲ್ಲಿ ಎರಡನ್ನು, ಎರಡರ ಮೇಲೆ—ಕೆಳಗೆ ಇಟ್ಟು ಒಂದು ಚಚ್ಚೌಕ ಕೊಠಡಿ ಮಾಡಿ. (೩) ನಾಲ್ಕರಲ್ಲಿ ಮೂರನ್ನು ಬಿಸುಡಿ ಒಂದೇ ಕಡ್ಡಿ ಮಾತ್ರ ಅಲ್ಲಿ ಉಳಿವಂತೆ ತೋರಿಸಿ ಕೊಡಿ.**

ಎಷ್ಟು ಸುಲಭ! ನಿಮಗೆ ಕಾಣದೇ? ವೆಚ್ಚವಿಲ್ಲ, ಸಮಯ ಹಾಳಾದುದಿಲ್ಲ, ತಲೆಕರಡಾದುದಿಲ್ಲ, ಪೆನ್ಸಿಲಿನ ತುದಿಯು ಕಚ್ಚಿ ಕಚ್ಚಿ ಕುಂಚವಾದುದಿಲ್ಲ. ಜಗುಲಿ ಮೇಲೆ ಮಲಗಿದ ಸುಬ್ಬ—ಧೂಮ—ಕಿಟ್ಟರ ಮೇಲೆ ಕಾಗದದ ಪೊಟ್ಟಣ ಬಂದಿಳಿದುದಿಲ್ಲ—ಏನೂ ಇಲ್ಲ!

ಮತ್ತೊಂದು ಒಗಟು:—

ಪ್ರಶ್ನೆ:—ರಾಮು, ಗೋವಿಂದ, ವೆಂಕಪ್ಪ ಎಂಬ ಕಲ್ಲುಕುಟಿಗ, ಕಮ್ಮಾರ, ಅಕ್ಕಸಾಲಿಗ ಈ ಮೂವರು ಉದ್ಯಾವರದಿಂದ ಮೂರುವರೆ ಮೈಲು ದೂರವಿರುವ ಅಜ್ಜರ ಕಾಡಿಗೆ ಹೋಗುತ್ತಾರೆ. ರಾಮನೊಡನೆ ಸೈಕಲ್ ಇದೆ; ಗೋವಿಂದನೊಡನೆ ಮೋಟಾರ್ ಇದೆ; ವೆಂಕಪ್ಪನೊಡನೆ ಕುದುರೆಗಾಡಿ ಇದೆ. ಗೋವಿಂದನು, ರಾಮನೂ ವೆಂಕಪ್ಪನೂ ಮುಟ್ಟುವ ಒಟ್ಟು ಸಮಯದ ಅರೆವಾಸಿ ಸಮಯದೊಳಗೆ ಅಜ್ಜರ ಕಾಡಿಗೆ ಮುಟ್ಟುತ್ತಾನೆ. ಹಾಗಾದರೆ, ಆ ಸಮಯವೆಷ್ಟು?

ಉತ್ತರ:—ಅಗತ್ಯವಿಲ್ಲ.

ಸರಿ! ಅಲ್ಲವೇ?

ಇನ್ನೊಂದು ಒಗಟು ಹೀಗಿದೆ:—

ತಿರುಗುಮುರುಗಾಗಿರುವ ಈ ಅಕ್ಷರಗಳನ್ನು ಒಟ್ಟು ಕೂಡಿಸಿದರೆ ಹುಡುಗ—ಹುಡುಗಿಯರ ಹೆಸರುಗಳಾಗುವುವು:—

(೧) **ನೋೀಮಮರ**—ಹುಡುಗಿಯ ಹೆಸರು.

(೨) **ಸಪ್ಪದಾ**—ಹುಡುಗನ ಹೆಸರು.

(೩) **ವಸಲಾರಾಕೈ**—ಹುಡುಗನ ಹೆಸರು.

ಈ ಒಗಟನ್ನು ಮಾತ್ರ ಸಾವಿರಾರು ಜನರು (ಆ ಪತ್ರಿಕೆಗೆ ಅಷ್ಟು ಚಂದಾದಾರರಿದ್ದರೆ) ಮಾಡಿರಬಹುದು. ಮಾತ್ರ, ಮಾಡಿದವರಲ್ಲಿ ಹೆಚ್ಚಿನವರು, **"ಸುಂದರವಾದ ಬೆಳ್ಳಿಯ ಪದಕ ಇನಾಂ"** ಎಂಬುದನ್ನು ನಿರೀಕ್ಷಿಸಿ, ಆರಾರಾಣೆ ಕೊಟ್ಟು ಒಂದೊಂದು ಚಿಕ್ಕ ಪೆಟ್ಟಿಗೆಯನ್ನು ಕೊಂಡುಕೊಂಡು, ಆ ಬೆಳ್ಳಿಯ ಪದಕದ ಗೃಹಪ್ರವೇಶ ಸಮಾರಂಭಕ್ಕಾಗಿ ಕಾಯುತ್ತ ಕುಳಿತಿರಬಹುದು. ಇದೀಗ ಒಗಟು ಬಿಡಿಸಿದ ಆನಂದವನ್ನು ಮಣ್ಣುಪಾಲು ಮಾಡಿತು.

ನಿಮಗೆ ಆ ಹೆಸರುಗಳೇನೆಂದು ತಿಳಿದಿಲ್ಲವಾದರೆ, ನನ್ನ ಮತ್ತು ನಿಮ್ಮ ಸಮಯವನ್ನು ಹಾಳುಮಾಡುವುದು ಬೇಡ. (೧) ಮನೋರಮೆ (೨) ದಾಸಪ್ಪ (೩) ಕೈಲಾಸರಾವ. ನಾನೇನೂ ಬೆಳ್ಳಿಯ ಪದಕವನ್ನು ಕೊಡುವುದಿಲ್ಲವಷ್ಟೆ? ನೀವೂ, ಅದಕ್ಕೊಂದು ಪೆಟ್ಟಿಗೆಯನ್ನಾಗಲಿ 'ರಿಬ್ಬನ'ನ್ನಾಗಲಿ ಕೊಂಡುಕೊಳ್ಳುವುದೂ ಇಲ್ಲ.

'ಇನ್ನೊಂದು'—.

ಮೇಲಿಂದ ಕೆಳಗೆ—೧ರಿಂದ ೩ರ ವರೆಗೆ 'ದಶಕಂಠ'; ೪ರಿಂದ ೭ರ ವರೆಗೆ 'ಒಂದು ಭೂತ'; ೯ರಿಂದ ೧೩ರ ವರೆಗೆ 'ಹೆಂಡತಿಯ ತಂದೆ' ಎಂಬುದನ್ನೂ,—

ಎಡದಿಂದ ಬಲಕ್ಕೆ—೧ರಿಂದ ೨೩ರ ವರೆಗೆ 'ಸಂಸಾರತ್ಯಾಗ'; ೪ರಿಂದ ೨೬ರ ವರೆಗೆ 'ತಲೆಗೆ ಕಟ್ಟುವ ಒಂದು ದೊಡ್ಡ ವಸ್ತ್ರ'; ೭ರಿಂದ ೩೦ರ ವರೆಗೆ 'ನೀರಿನೊಳಗಿರುವ ಒಂದು ಉದ್ದದ ಪ್ರಾಣಿ'; ಎಂಬುದನ್ನೂ—

—ನೆನೆನೆನೆದು, **'ಮೇಲಿಂದ ಕೆಳಗೆ'** ಎಂಬಲ್ಲಿ **'ನೂರೂ ಒಂದೇ'** ಎಂಬ ಉತ್ತರವನ್ನೂ; **'ಎಡದಿಂದ ಬಲ'**ಕ್ಕೆಂಬಲ್ಲಿ **'ಎರಡನೆಯದು**

ಕಳೆದು ಹೋಗುತ್ತಲೇ ಮೊದಲನೆಯದು; ಮೊದಲನೆಯದು ಪ್ರಾಪ್ತವಾಗುತ್ತಲೇ ಮೂರನೆಯ ಅವಸ್ಥೆ' ಎಂಬ ಉತ್ತರವನ್ನೂ ಬರೆದು, ನಿಮಗೂ ಒಗಟುಗಾರನಿಗೂ ತೃಪ್ತಿಯಿಲ್ಲದೆ ಎಲ್ಲರೂ ಕಗ್ಗತ್ತಲೆಯಲ್ಲಿ ಕಾಲಕಳೆಯುವುದೇಕೆ? ಒಗಟುಗಾರನೇ ಬಿಡಿಸಲಾರದ ಒಗಟುಗಳ ಮತ್ತು ಆ ಕನಸಿನ ಭಂಡಾರ (ಬಹುಮಾನ)ಗಳ ಗೊಡವೆ ನಿಮಗೇಕೆ? **'ನೂರು ರೂಪಾಯಿಗಳನ್ನು ನೀವು ಪಡೆಯಲೇಬೇಕು'** ಎಂದಿರುವ ಶಿರೋನಾಮೆಗಳನ್ನು ನೋಡಿ, ಆ '೧೦೦' ಎಂಬುದರಲ್ಲಿ ಮೊದಲನೆ ಅಂಕೆಯನ್ನು ನೀವು ಒಗಟುಗಾರನಿಗೆ ತೆತ್ತು, ಎರಡನೆ—ಮೂರನೆ ಅಂಕೆಗಳನ್ನು ಪಡೆವ ಬದಲಾಗಿ, ನಾನು ಹೇಳಿದಂತೆ ಯಾರೊಡನೆಯಾದರೂ ನಾಲ್ಕು ಬೆಂಕಿಕಡ್ಡಿಗಳನ್ನು ಎರವಾಗಿ ತಂದು,—

(೧) ನಾಲ್ಕನ್ನು ಸಾಲಾಗಿ ನೆಲದ ಮೇಲೆ ಹಾಸಿ, ಎರಡರ ಸ್ಥಾನ ತಪ್ಪಿಸಿ ಇಟ್ಟು, ಒಂದು ಚೌಕ ಮಾಡಿ.

(೨) ಆ ನಾಲ್ಕರಲ್ಲಿ ಒಂದನ್ನು (ಹುಲ್ಲಿನ ಮಾಡಿನ ಮನೆ ಬಳಿಯಲ್ಲಿಲ್ಲದನ್ನು ನೋಡಿ—) ಬಿಸುಡಿ, ಮೂರರಿಂದ ಒಂದು ತ್ರಿಕೋಣವನ್ನು ಮಾಡಿ.

(೩) ಮತ್ತೆರಡನ್ನು ಜೋಕೆಯಿಂದ ಬಿಸುಡಿ, ಅಲ್ಲಿ ಒಂದೇ ಉಳಿಯುವಂತೆ ಮಾಡಿ.—

—ಹಾಗಾದರೆ, ಮತ್ತೊಮ್ಮೆ ನೀವು ಈ ಆಟವನ್ನು ಆಡುವಾಗ ಮೂರು ಕಡ್ಡಿಗಳನ್ನು ಮಾತ್ರ ಎರವು ತಂದರಾಯಿತು.

ನನ್ನ ಈ ಸುಲಭ ಆಟದ ಉತ್ತರವು ನಿಮಗೆ ಮನಸ್ಸಿಗೆ ಹತ್ತಿಲ್ಲವಾದರೆ, ಟಪ್ಪಾಲು ಖರ್ಚಿಗೆಂದು ಮಾತ್ರ ಎಂಟಾಣೆ ಅಂಚೆ ಚೀಟುಗಳನ್ನು ಕಳುಹಿಸಿದರೆ, ಉತ್ತರ ಕಳುಹಿಸಬಹುದು.

೫ ಅವಳ ಸ್ಮಾರಕವಾಗಿ

(ವೇಶ್ಯಾಗೃಹ ಸಂಬಂಧವಾದ 'ಬ್ರೊದೆಲ್ಸ್ ಆಕ್ಟ್' ಮಂಗಳೂರು ನಗರದಲ್ಲಿ ಜ್ಯಾರಿಗೆ ತರಲ್ಪಟ್ಟು ಕೆಲವು ದಿನಗಳ ಹಿಂದೆ ವೇಶ್ಯಾ ವೃತ್ತಿಯವರನ್ನು ನಗರದಿಂದ ಹೊರತಳ್ಳಿದರು. ಆ ಸಂಬಂಧವಾಗಿ ಪ್ರೇರಿತವಾದ ಒಂದು ವಿನೋದ ಲೇಖ.)

ನಿತ್ಯ ಸುಮಂಗಲೆ,

ಏನಿದು ದುರಂತ! ನೂರಾರು ವರ್ಷಗಳಿಂದ ನಗರದ ಓಣಿಗಳನ್ನೂ, ಇತ್ತೀಚೆಗೆ ದೊಡ್ಡ ರಸ್ತೆಗಳನ್ನೂ ಅಲಂಕರಿಸುತಿದ್ದ ನಿನ್ನನ್ನು ಗಡೀಪಾರು ಮಾಡಿದರೆ? ಸರ್ವನಾಶವಾಯಿತು!

ಮದನಿಕಾ, ರದನಿಕಾ, ಕದನಿಕಾ, ಸದನಿಕಾ, ಮುಂತಾದ ಬೌದ್ಧ ಕಾಲೀನ ಹೆಸರುಗಳ ಬದಲಿಗೆ ಕಿಲ್ಕಿ—ಬೆಟ್ಸಿ—ಮೆಣ್ಕಿ—ಜಬ್ಬಿ ಮೊದಲಾದ ಅತ್ಯದ್ಭುತಕರ, ಅತ್ಯಾಧುನಿಕ ಹೆಸರುಗಳನ್ನು ಧರಿಸಿ, ನಗರದ ಪುರುಷ ವರ್ಗಕ್ಕೆ ಎಳೆಪುಷ್ಪಗಳಂತೆ ತೋರಿ ಮೆರೆಯುತಿದ್ದ ನಿನ್ನನ್ನು ಇನ್ನೆಲ್ಲಿ ಕಾಣಲಿ! ಹೃದಯ ಅತ್ತರೂ ತುಟಿಗಳಿಂದ ನಗುತ್ತ, ನಿನ್ನ ಆ ಎಳೆ ಚಿಗುರಿನಂತಹ ಕೈ ಬೆರಳುಗಳಿಂದ ಕರೆಯುತಿದ್ದಿಯಲ್ಲ,—ಆ ಸ್ವಾಗತ ಸಂಭ್ರಮವನ್ನು ಇನ್ನಾವಾಗ ಕಾಣಲಿ! ಹಗಲು ನಿದ್ರಿಸಿ, ರಾತ್ರೆ ಎಚ್ಚೆತ್ತು, ಓಣಿಕೇರಿಗಳನ್ನು ಬೆಳಗುತಿದ್ದಿಯಲ್ಲ,—ಇನ್ನಾ ದೀಪೋತ್ಸವದ ಸೊಬಗನ್ನೆಲ್ಲಿ ಕಾಣಲಿ! ಕಾಮನಿಗೆ ಕಣ್ಣಿಲ್ಲವಂತೆ. ಕಾನೂನಿಗುಂಟೆ? ನಿನಗಾಗಿ ಒಂದು ಕಾನೂನೆ?

ದರ್ಜಿ ಮಹಾಶಯನು ಎಷ್ಟು ದುಃಖಿತನಾಗಿರುವನೆಂದು ನಿನಗೆ ಗೊತ್ತೇ? ಐವತ್ತರ ತರುಣಿಗೆ ಗವನು ಹೊಲಿದು ಹದಿನಾರರ ಚರ್ಯೆ ತರುವ ಅದ್ಭುತವನ್ನವನಿನ್ನು ಮಾಡಲುಂಟೆ? ಅರುವತ್ತೇಳರ ತರುಣಿಗೆ ಗವನು ಹೊಲಿದ ದಾಖಲೆ ಅವನದೆಂದು ಹೆಮ್ಮೆಪಡುತ್ತ, ಸಪ್ತತಿ ವಯಸ್ಕರನ್ನು ಸೂಜಿ-ದಾರಗಳ ಮಾಯೆಯಿಂದ ಪರಿವರ್ತಿಸುವ ದಿನವನ್ನೆದುರು ನೋಡುತ್ತಿರುವಾಗಲೇ ನೀನು ನಗರತ್ಯಾಗ ಮಾಡಬೇಕೆ? ಹೊಟೇಲಿನವನ

ಕಣ್ಣೀರು ನೀನು ನೋಡಿದ್ದಿಯೇ? ಹಗಲು ರಾತ್ರಿಯೆನ್ನದೆ ಇನ್ನಾತನು ಯಾರಿಗೆ ಕಾಫಿ ಸರಬರಾಯಿ ಮಾಡಲಿ! ಕಾಫಿ ಸೆಸ್ ಕಮಿಟಿಯವರಿಗೆ ಮಾಫಿಯ ಪ್ರಚಾರಕಳಾಗಿದ್ದ ನಿನ್ನನ್ನು, ಅವರು ಗೌರವಿಸುವ ಮೊದಲೇ ಹೋದೆಯಾ! ಪೌಡರ್ ಅಂಗಡಿಯವನು ಎಷ್ಟು ಕಣ್ಣೀರಿಡುವನೆಂದು ನೀನರಿಯಲಾರೆ. ಒಂದೊಂದು ರಾತ್ಲ ಭಾರದ ಆ ದೊಡ್ಡ ಕರಡಿಗೆಗಳ ನ್ನಾತನು ಇನ್ನು ಯಾರಿಗೆ ವಿಕ್ರಯಿಸಲಿ! ಬೀಡಿ ಅಂಗಡಿಯವನ ಮೌನ ದುಃಖವನ್ನೂ ನೀನರಿಯಲಾರೆ! ಧೂಮ್ರಪಾನ ಮಾಡುವ ಸ್ತ್ರೀದೈವಗಳ ನ್ನಾತನಿನ್ನೆಲ್ಲಿ ಕಾಣಲಾಪ?

ಅಬಕಾರಿ ಇಲಾಖೆಗೆ ನಿನ್ನಿಂದ ಇನ್ನು ಲಾಭವಿದೆಯೆ? ಮೊದಲು ಕುಡಿದು ಮತ್ತೆ ನಿನ್ನನ್ನು ಕಾಣುವವರೆಷ್ಟೋ ಅಷ್ಟೇ ಮೊದಲು ನಿನ್ನನ್ನು ಕಂಡು ಮತ್ತೆ ಕುಡಿಯುತಿದ್ದರಲ್ಲವೆ?

ತಾಂಬೂಲ ಚರ್ವಣದ ಸ್ಪರ್ಧೆ ಇನ್ನಿದೆಯೆ? ನಗರದ ಓಣಿಗಳಲ್ಲಿನ್ನು ಗದ್ದಲವಿದೆಯೆ?

ಪಂಡಿತರು ನಿನ್ನನ್ನು ಮರೆವುದು ಸಾಧ್ಯವೇ? ಭಸ್ಮವಾಗಿ ಹೋಗುವ ಈ ದೇಹಕ್ಕೆ ಭಸ್ಮ ಕೊಡುವುದಿನ್ನು ಸಾಧ್ಯವೇ?

ವಿದ್ಯಾರ್ಥಿಗಳನ್ನು ನೀನು ಮರುಳುಮಾಡುವೆಯೆಂಬ ದೂರು ಇತ್ತು. ಆದರೆ, ಮರುಳಾದ ಅನಂತರ ಅವರು ಮೇಲ್ತರಗತಿಗೆ ಹೋಗದಿದ್ದರೂ ಒಂದೊಂದೇ ಕ್ಲಾಸು ಕೆಳಗೆ ಬರಲಿಲ್ಲವೆಂಬ ಸತ್ಯವನ್ನು ಮರೆಮಾಜಲುಂಟೆ?

ಪೂರ್ವಕಾಲದಲ್ಲಿ ರಾಜರು ಮೆರೆವಣಿಗೆ ಹೋಗುವಾಗ ಲಲನೆಯರು ರಸ್ತೆ ಬಳಿ ನಿಂತು, ಮಂದಸ್ಮಿತದಿಂದ ಅವರಿಗೆ ಮರ್ಯಾದೆ ಸಲಿಸುತಿದ್ದರಂತೆ. ಈ ಕಾಲದಲ್ಲಿ ರಾಜರಿಗೆ ಇತ್ತ ಬರಲು ಪುರುಸೊತ್ತಿಲ್ಲವೆಂದು ತಿಳಿದ ನೀನು ಪ್ರಜೆಗಳಿಗೇ ಆ ಗೌರವ ಸಲಿಸುತ್ತಿದ್ದಿ. ಚಿಕ್ಕ ಮಗುವಿನಿಂದ ಹಣ್ಣಾದ ಮುದುಕನ ತನಕ, ಎಲ್ಲರನ್ನೂ ನೋಡಿ ನಗುತಿದ್ದಿ.

ಸಿನೆಮದವರು ವೇಷ ಬರೆಮುಕೊಳ್ಳುವ ಕ್ರಮವನ್ನು ನಿನ್ನಿಂದ ಕಲಿತ

ರೆಂದು ನನಗೆನಿಸುತ್ತದೆ. ಇಲ್ಲದಿದ್ದರೆ ಮಮ್ಮಿಗಳು ಬೇಬಿಗಳಂತೆಯೂ ಬೇಬಿಗಳು ಮಮ್ಮಿಗಳಂತೆಯೂ ಕಾಣುವುದು ಸಾಧ್ಯವೇ?

ಹಾಯ್! ವಿಜಯನಗರದ ಅರಸರು ನಿನ್ನ ಹೆಸರಲ್ಲಿ ಒಂದು ಕೇರಿಯನ್ನೆ ತೆರೆದಿದ್ದರಂತೆ. ಇತ್ತೀಚಿಗೆ ನಮ್ಮ ಅರಸರ ಕಾಲದಲ್ಲೂ 'ವಿ' ನೋಡಿ, ಈಗಲೂ ಒಂದು ಕೇರಿ ರಚಿಸಲ್ಪಡುವುದೆಂದೆಣಿಸಿದೆ. ಆದರೆ, ನಿನಗೆ ವಿದಾಯ ಹೇಳಬೇಕಾಗಿ ಬಂತು. ವಿಷಾದಿಸಬೇಡ!

ಕಲಾರಾಣಿ, ನೀನು ಅಮರಳು. ನೀನು ಸಾಯಲಾರೆ. ನೀನು ಸತ್ತರೆ ವೈದ್ಯ ವಿಜ್ಞಾನಕ್ಕೆ ವಿರಾಮ! ನೀನು ಸತ್ತರೆ ತತ್ತ್ವಜ್ಞಾನಕ್ಕೆ ವಿರಾಮ! ನಿನ್ನಿಂದ ಸ್ವರ್ಗ ಕಂಡವರಿಗೆ ಇಹದಲ್ಲಿ ಸ್ಮಾರಕವಿಲ್ಲ. ಸ್ವರ್ಗ ಕಾಣಲಾರದ ನಿನಗೊಂದು ಸ್ಮಾರಕವಾಗಬೇಕೆಂದು ನನ್ನ ಹಿರಿಯಾಸೆ. ಆ ಸ್ಮಾರಕವನ್ನು ಕುಷ್ಟರೋಗಿಗಳ ಭವನದೆದುರು ಇರಿಸುವುದಾದರೆ ನಿನಗೆ ಸಮ್ಮತಿಯಷ್ಟೆ?

ವಿದಾಯ!

---

೬. ಹೊಸ ಕೊಡೆ

ಕೊಂಡುಕೊಂಡದ್ದು ಭಗವಾನ್‌ದಾಸ್ ನರಕ್‌ದಾಸ್ ಛತ್ರಿವಾಲರಲ್ಲಿ. ತಂದದ್ದು ಋಷಿಯ ಅಶ್ರಮದಂಥಾ ನನ್ನ ಮನೆಗೆ; ಧರಿಸಿದ್ದು ಕಲ್ಲಿನಂಥಾ ನನ್ನ ತಲೆಯ ಮೇಲೆ; ಇಳಿಸಿದ್ದು ಪರಮಾತ್ಮನ ದಿವ್ಯ ಸೃಷ್ಟಿ ಧರಣಿಗೆ; ಮತ್ತೆ ದುರಸ್ತಿ ಮಾಡಿಸಿದ್ದು ಚಿನ್ನದಂಥಾ ಮನುಷ್ಯ 'ಕೊಡೆ ರಿಪೇರಿ ಕೃಷ್ಣ'ನಲ್ಲಿ.

ಕಂಪೆನಿ ಆಕ್ಷಿನ ಭಾಷೆಯಂತೆ, 'ಭಗವಾನ್‌ದಾಸ ನರಕ್‌ದಾಸ್' ಅಂದರೆ 'ಪಾಪ—ಪುಣ್ಯ'ಗಳ ಪಚ್ಚಡಿಯೆಂದೂ; 'ಛತ್ರಿವಾಲ'ನೆಂದರೆ 'ತಲೆಯ ಮೇಲೆ ಕೆಲವು ನಿಮಿಷ ಹಿಡಿಯುವ ಕರ್ರಗಿನ ಯಾವ ವಸ್ತುವನ್ನಾ

ದರೂ ವಿಕ್ರಯಿಸುವ ಹಕ್ಕುಳ್ಳ'ವನೆಂದೂ; 'ಋಷಿಯ ಆಶ್ರಮ'ವೆಂದರೆ ಮಿಶನ್ ಹಂಚು ಇರಿಸಲು ಹಣವಿಲ್ಲದೆ, ಇಟ್ಟ ಹುಲ್ಲು ಹಾರಿಹೋಗಿ ಸೋರುವ ಮನೆಯೆಂದೂ; 'ಕಲ್ಲಿನಂಥಾ ತಲೆ'ಯೆಂದರೆ ಕೊಡೆಯು ಅಥವಾ ಅಂತಹ ಒಂದು ವಸ್ತುವಿನ ಯೋಚನೆಯಿಂದ ಅಥವಾ ಉಷ್ಣದಿಂದ ಕೂದಲು ಪೂರ್ಣ ಕಿತ್ತುಹೋಗಿ ಜಮಾಲಾಬಾದಿನಂತೆ ನಿಂತಿರುವ ಬೋಳಾದ ತಲೆಯೆಂದೂ, 'ದಿವ್ಯಸೃಷ್ಟಿ—ಧರಣಿ'ಯೆಂದರೆ ವರುಷದ ಎಲ್ಲ ತಿಂಗಳೂ (೧೯೪೬ನೇ ಮೇಯಿಂದ ೧೯೪೭ನೇ ಎಪ್ರಿಲ್ ತನಕ) ಪ್ರತಿ ತಿಂಗಳಲ್ಲೂ ಮಳೆಬಂದ ಪುಣ್ಯಭೂಮಿ ಎಂದೂ; 'ಚಿನ್ನದಂಥಾ ಮನುಷ್ಯ' ಎಂದರೆ ಪರರ ಕೊಡೆಗಳನ್ನು ವರ್ಣಸಂಕರದಿಂದ ನಾನಾ ರೂಪಕ್ಕೆ ತಿರುಗಿಸಿ ತನ್ನ ಮಟ್ಟಿಗೆ ಚಿನ್ನದ ಖಡಗ—ಉಂಗುರ—ಸರಪಣಿ—ಅಂಬ್ಲೆ—ಮೊದಲಾದುವನ್ನು ಮಾಡಿಸಿಕೊಂಡ ನರಪ್ರಾಣಿಯೆಂದೂ ಅರ್ಥಮಾಡಿಕೊಳ್ಳಬೇಕು.

ಜೂನ್ ೬ಕ್ಕೆ ಮಳೆ ಆರಂಭವೆಂದು ಮೇಷ್ಟ್ರು ಶಾಲೆಯಲ್ಲಿ ಹೇಳಿದ್ದರು. ಅವರಿಗೆ ಪಂಚಾಂಗ ತಿಳಿಯುವುದಿಲ್ಲ; ನಾನು, ಅದನ್ನು ನೋಡಿದ್ದೇ ಇಲ್ಲ. ಬೆಳೆದ ನಂತರವೂ 'ಜೂನ್ ೬ರ' ನಂಬಿಕೆ ಬಿಟ್ಟಿಲ್ಲ. (ಈಗೀಗ ಮಳೆಯು ಎಪ್ರಿಲಿನಲ್ಲೆ ಆರಂಭವಾಗುತ್ತಿದೆ!)

ಜೂನ್ ೧ರಂದು ರೂ. ೭—೧೦—೦ ಕೊಟ್ಟು ಒಂದು ಕೊಡೆ ಕೊಂಡುಕೊಂಡೆ. "ಕೊಡೆ ಹೇಗೆ? ನಾಲ್ಕು ತಿಂಗಳು ಬಾಳಿಕೆ ಬಂದೀತೇ?" ಎಂದು ಭಗವಾನದಾಸ್ ನರಕ್‌ದಾಸ್‌ನನ್ನು ಕೇಳಿದೆ. ಹಲ್ಲೆಲ್ಲ ಉದುರಿ ಹೋಗಿ ನಲ್ಲಿಬಾವಿಯಂತಾದ ಬಾಯಿಯಿಂದ ಆ ಮನುಷ್ಯನು, "ನಾಲ್ಕು ತಿಂಗಳು? ವರ್ಷ—ವರ್ಷ!" ಎಂದನು; ಮತ್ತೆ ಕಣ್ಣುಗಳನ್ನು ಬಲು ವೇಗವಾಗಿ ತಿರುಗಿಸಿದನು. ತನ್ನ ಕೊಡೆಯ ವಿಷಯವಾಗಿ ಹೇಳುವಾಗ ಸಂತೋಷವುಕ್ಕಿ ಕಣ್ಣಾಡಿಸಿ ಕುಳಿತಲ್ಲೆ ಭಗವಾನನಲ್ಲಿಗೆ ಹೋಗಿ ಅಲ್ಲಿ ದಾಸನಾಗುವಂತಿದೆಯೋ ಎಂದು ಭಯಪಟ್ಟೆ. ಆದರೆ, ಹಾಗಲ್ಲ. ಅವನ ಅಭ್ಯಾಸವೇ ಹಾಗಿದ್ದಿರಬೇಕು.

ಭರವಸೆಯಿಂದ ಕೊಂಡುಕೊಂಡೆ. ಬಿಡಿಸಿದೆ; ಎತ್ತಿದೆ; ನಡೆದೆ.

ಅವನು 'ವರ್ಷ' ಎಂದುದಕ್ಕೆ 'ಮಳೆ' ಎಂಬ ಅರ್ಥವಿದ್ದಿರಬೇಕು.

ಕೊಡೆ ಹಿಡಿದದ್ದೇ ತಡ—ಮಳೆ ಬಂತು. ಹಣಕೊಟ್ಟರೂ ಉಪಯೋಗವಾಯಿತಲ್ಲ ಎಂಬ ಆನಂದವುಂಟಾಯಿತು.

ಕೊಡೆಯು ಬಹು ಬಾಳಿಕೆ ಬಂತು—ಒಂದು ಘಂಟೆ ಐವತ್ತಮೂರು ನಿಮಿಷ! ನಾಲ್ಕು ಘಂಟೆಗೆ ಕೊಂಡುಕೊಂಡ ಆ ದಿವ್ಯ ಛತ್ರ, ಅಂದೇ ೫-೫೭ರ ಗೋಧೂಳಿ ಲಗ್ನದಲ್ಲಿ (ಆ ದಿನ ಮಳೆ ಬಂದ ಕಾರಣ 'ಗೋಧೂಳಿ' ಇರದೆ 'ಕೆನ್ನೀರು' ಇತ್ತು; ಆದಕಾರಣ 'ಕೆನ್ನೀರು ಲಗ್ನ'ವೆನ್ನಲೂ ಬಹುದು) ಕೈಯಲ್ಲೇ ಮೂರು ಬಾರಿ ಸಟಸಟನೆ ಹಾರಿ, ಬಲಕ್ಕೂ ಎಡಕ್ಕೂ ಅಲುಗಾಡಿ, ಒಂದು ಸುತ್ತು ತಿರುಗಿದಂತಾಗಿ,—ಇದಕ್ಕೆ ಜೀವವಿದೆಯೇ ಎಂದು ನಾನು ದಿಗಿಲುಗೊಳ್ಳುತಿದ್ದಂತೆಯೆ ಸೊಯ್ಯೆಂದು ಶಬ್ದಮಾಡಿ ಚಿಕ್ಕದಾಯಿತು. ನೋಡಿದರೆ, ಅದರ ಎರಡು ಎಲುಬುಗಳು ತುಂಡಾಗಿ, ಉಳಿದುವು ಮೇಲಿನ ಆ ದುಂಡುಮೇಜು ಪರಿಷತ್ತಿನ ಸರಿಗೆಯಿಂದ ಜಾರಿ ಹೊರಗೋಡಿದ್ದುವು. ಪರ್ಜನ್ಯ ಮಹಾಶಯನು ನೇರಾಗಿ ಕಲ್ಲಿನಂಥ ನನ್ನ ತಲೆಯ ಮೇಲೆ ಕಾಲಿಟ್ಟು ಧರಣಿಗಿಳಿದು ಹೋಗುತಿದ್ದನು. ದಾರಿಯಲ್ಲೆ, ಕಿವಿಗೆ ಆಂಬ್ಲೆಹಾಕಿ, ಎಡಕೈಗೆ ಚಿನ್ನದ ಬಳೆ ತೊಟ್ಟು, ಬಲಕೈಗೆ ಎರಡು ಉಂಗುರ ಸಿಕ್ಕಿಸಿ, ಕಂಠದಿಂದ ದಪ್ಪಗಿನ ಬಂಗಾರದ ಸರಪಣಿ ಜೋಲುಬಿಟ್ಟ ಒಂದು ಪೌರಾಣಿಕ ತರಗತಿಯ ವ್ಯಕ್ತಿಯು, ಒಂದು ಅಂಗಡಿ ಹಲಗೆಯ ಮೇಲೆ ಕುಳಿತಿತ್ತು. ಆ ವ್ಯಕ್ತಿಯ ಎಡಬಲಗಳಲ್ಲಿ ನೂರಾರು ಹಳೇ ಕೊಡೆಗಳು ರಖಂ ಆಗಿ ಆತ್ಮಹತ್ಯ ಮಾಡಿಕೊಂಡು ಸಾಲಾಗಿ ನೇತಾಡುತಿದ್ದ ಕೆಲವು ಪ್ರೇಮಭಂಗ ಜೀವಿಗಳಂತೆ ನೇತಾಡುತಿದ್ದುವು. ಎದುರಲ್ಲಿ ನಾನಾ ತರದ ವಿಚಿತ್ರ ಶಸ್ತ್ರಾಸ್ತ್ರಗಳೂ ಉಪಕರಣಗಳೂ ರಾಶಿಬಿದ್ದಿದ್ದುವು. ಈ ಮನುಷ್ಯನು ನನಗೆ ಉಪಕಾರ ಮಾಡಬಲ್ಲನೆಂದು ಕಂಡಿತು. ಹೋದೆ.

ವಿಚಾರಿಸಿದೆ—"ನಿನ್ನ ಹೆಸರೇನು?"

"ಕೃಷ್ಣಪ್ಪ."

"ಯಾವ ಕೃಷ್ಣಪ್ಪ?"

"ಕೊಡೆ ಕೃಷ್ಣಪ್ಪ."

"ಕೊಡೆ?"

"ಕೊಡುತ್ತೇನೆ; ರಿಪೇರಿಯಾದನಂತರ."

"ರಿಪೇರಿಗೇನು?"

"ವ್ಹಾಲು ನೋಡಿ ದರ."

"ಈ ವ್ಹಾಲು........!" ನನ್ನ ಹೊಸ ಕೊಡೆ ತೋರಿಸಿದೆ.

ಕೃಷ್ಣಪ್ಪನು ಬಲಕೈಯನ್ನೆತ್ತಿ, ತನ್ನ ಮೂಗನ್ನು ಮೊದಲು ಮುಚ್ಚಿ, ಮತ್ತೆ ಚೆನ್ನಾಗಿ ಶಿಕ್ಕಿ ಒಂದು ಅಹಿತವಾದ ಶಬ್ದ ಮಾಡಿದನು. ಮತ್ತೆ ನನ್ನ ಕೊಡೆಯನ್ನೆತ್ತಿ, ಬಿಡಿಸಿ, ತಿರುಗಿಸಿ, ಕವಚಿ,—"ಒಂದು ರೂಪಾಯಿ ಹನ್ನೆರಡಾಣೆ" ಎಂದನು.

ಅಸ್ವಸ್ಥದವನಿಗೆ ಮದ್ದು ಕುಡಿಸುವ ಬದಲು ತಿವಿದರೆ ಹೇಗಾಗುತ್ತದೋ ಹಾಗಾಯಿತು. "ನಗದಿ ಇಂದು—ಕಡ ನಾಳೆ" ಎಂಬ ಬೋರ್ಡು ಹಾಕದಿದ್ದರೂ ಕೃಷ್ಣಪ್ಪನ ಶರ್ತವು ನಗದಿ ಎಂದೇ ನನಗೆ ಗೊತ್ತು. ಎರಡರ ನೋಟು ಕೊಟ್ಟು, ಸಿಕ್ಕಲಿನ ನಾಲ್ಕಾಣೆ ಪಾವಲಿ ಪಡೆದು, ಅರ್ಧ ತಾಸು ಅಲ್ಲಿ ಮಂಡಿಸಿದೆ. ಮನಸ್ಸು ಅಳುತಿತ್ತು. ಕೃಷ್ಣಪ್ಪನು ಮಾತ್ರ ಯಾವ ಭಾವವನ್ನೂ ತೋರಿಸದೆ, ನೂರಾರು ಶಸ್ತ್ರಗಳನ್ನು ತೆಗೆದು ಕೊಡೆಗೆ ತೋರಿಸಿ, ಹೊಡೆದು, ತಿರುಪಿ, ಎಳೆದು, ಅಲುಗಿಸಿ, ಬಿಡಿಸಿ, ಮಡಚಿ ನನ್ನೊಡನೆ ಕೊಟ್ಟು, ನನ್ನನ್ನು ನೋಡದೆ ವಿರೋಧ ದಿಕ್ಕಿಗೆ ದೃಷ್ಟಿ ಬೀರಿ, ಪುನಃ ತನ್ನ ಮೂಗನ್ನು ಕೈಯಿಂದ ಉಜ್ಜಿ, ಹಿಸುಕಿ, ವಿಕಾರ ಶಬ್ದ ಮಾಡಿ, ಸರ್ಕಸ್ ಹುಲಿಯು, ಯಜಮಾನನು ತರುವ ಮಾಂಸಕ್ಕಾಗಿ ಸಿದ್ಧವಾಗುವಂತೆ, ನನ್ನಂತಹ ಮತ್ತೋರ್ವ ಹತಭಾಗಿಯನ್ನು ಸ್ವೀಕರಿಸಲು ಸಿದ್ಧನಾದನು.

ಜೂನ್ ೨ರಂದು ಮೆಜಿಸ್ಟ್ರೇಟ ಕೋರ್ಟಿನ ಕರೆ. ಹೊರಟೆ. ಅದೃಷ್ಟದಿಂದ ಮಳೆ ಬರಲಿಲ್ಲ; ಆದರೆ, ದುರಾದೃಷ್ಟದಿಂದ ಪುನಃ ನಡು ದಾರಿಯಲ್ಲಿ ಕೊಡೆಯು ನಡುಗಿದಂತಾಯಿತು. ಆಕಾಶದಿಂದ ದೈತ್ಯರು ಅಥವಾ ದೇವತೆಗಳು ತಮಾಷೆಗಾಗಿ ಎಳೆದರೋ ನೋಡಿದೆ. ಅಲ್ಲ; ಕೃಷ್ಣಪ್ಪನು ತಿರುಪಿ ಕುಳ್ಳಿರಿಸಿದ ಕಡ್ಡಿಗಳು ಪುನಃ ಒಗ್ಗಟ್ಟಾಗಿರಲು ಸಾಧ್ಯವಿಲ್ಲವೆಂದು ತೀರ್ಮಾನಿಸಿ, ಮಿಂಚಿನ ರಣಹೂಡಿ ಹಾರಿಹೋಗಿ, ನಾನಾ ಸ್ಥಾನಗಳನ್ನು ಕಟ್ಟಿಕೊಂಡಿದ್ದುವು. ಗಲಾಟೆಯಲ್ಲಿ ಪುನಃ ಎರಡು ಕಡ್ಡಿಗಳು ತುಂಡಾಗಿ, ದಿವಂಗತವಾಗಿದ್ದುವು. ಹಾವಿನ ಬಾವಿಯು ಛತ್ರಿವಾಲನ ಮುಖವೂ ಕಣ್ಣುಗಳೂ ನನ್ನ ಮುಂದೆ ಬಂದುವು; 'ವರ್ಷ'ವೆಂಬ ಮಾತೂ ಪ್ರತಿಧ್ವನಿ

ಸಿತು. ಜತೆಗೆ 'ಕೊಡೆ ಕೃಷ್ಣಪ್ಪ'ನ ಸಾಲಂಕೃತ ದೇಹವೂ ಕಣ್ಣಮುಂದೆ ಬಂದು ಕುಳಿತಿತು. ಒಳಗಿಂದೊಳಗೇ ನಡುಗಿದೆ. ಇಂತಹ ನಡುಕಗಳು ಆರೋಗ್ಯಕ್ಕೊಳ್ಳೆಯುವಲ್ಲವೆಂದು ಬಲ್ಲವರು ಹೇಳುತ್ತಾರೆ. ಆದರೆ, ನಡುಕ ವನ್ನು ನಾನು ಕರೆಯಲಿಲ್ಲ; ಅತಿಥಿಯಾಗಿ ಅದುವೇ ಬಂದಿತ್ತು.

ಕೋರ್ಟು ಮುಗಿದು ಕೊಡೆ ಕೃಷ್ಣಪ್ಪನಲ್ಲಿಗೆ ಕಾಲಟ್ಟೆ. ನನ್ನ ಸ್ವರ ಕೇಳಿ ಅವನು ದಿಗಿಲು ಹೊಂದಲಿಲ್ಲ; ವಿಸ್ಮಯ ಹೊಂದಲೂ ಇಲ್ಲ. ಕೈಚಾಚಿ ಕೊಡೆ ಎಳೆದು ತೊಡೆಯ ಮೇಲಿರಿಸಿ, ಮೂಗನ್ನು ಪುನಃ ಹಿಸುಕಿ ನೋಯಿಸಿ ಕೊಂಡು, "ಒಂದು ರೂಪಾಯಿ ಹನ್ನೆರಡಾಣೆ" ಎನ್ನುತ್ತ, ಪಶ್ಚಿಮಕ್ಕೆ ನೋಡಿದನು. ಆ ಮೊದಲೇ ಎರಡರ ನೋಟು ತೆಗೆದು ಸಿದ್ಧನಾಗಿ ನಿಂತ ನಾನು, "ಅದೇಕೆ?" ಎಂದು ಪ್ರಶ್ನಿಸದೆ ಹಣ ತೆತ್ತು, ಅರ್ಧತಾಸು ಕುಳಿತು, ನಾಲ್ಕಾಣೆ ಚವಲ ಮತ್ತು ಆ ಕೃಷ್ಣಹಸ್ತದಲ್ಲಿ ಪುನೀತವಾದ ಛತ್ರವನ್ನು ಪಡೆದು, ಮನೆಗೆ ನಡೆದೆ. ನಡೆವಾಗ ನನ್ನ ಕಾಲುಗಳು ಹೇಗೋ ಹೇಗೋ ಖದಂ ಇಡುತಿದ್ದಿರಬೇಕು. ಯಾವಾಗಲೂ ನನ್ನ ಹಿಂದೆ ಓಡಿಬಂದು 'ಒಂದಾಣೆಯ ಉಪಕಾರ' ಕೇಳುವ ಹಳೆ ಪರಿಚಿತನೊಬ್ಬನು 'ಕಾಲು ನೋವೇ?' ಎಂದು ಪ್ರಶ್ನಿಸಿ, ನನ್ನನ್ನು ಹೌಹಾರಿಸಿದನು. ಮತ್ತೆ ವೇಗ ವಾಗಿ ಹಜ್ಜೆ ಇಟ್ಟು ನನ್ನ ಆಶ್ರಮ ಸೇರಿದೆ.

ಜೂನ್ ೩ರಲ್ಲಿ ಆಫೀಸಿಗೆ ಹೊರಟೆ. ಮೂಲೆಯಲ್ಲಿ ಕುಳಿತ ಛತ್ರಿ ಯನ್ನು ತೆಗೆದೆ. "ನೀನು ಈ ದಿನವೂ, ನಡು ದಾರಿಯಲ್ಲಿ 'ಮೈ ಭುಕಾಹೂಂ' ಎಂದು ಕಾಳಿಯಂತೆ ಗರ್ಜಿಸಿ ಒಂದು ರೂಪಾಯಿ ಹನ್ನೆರಡಾಣೆ ಕೇಳಿದರೆ ನಿನ್ನನ್ನು ನಡು ರಸ್ತೆಯಲ್ಲೆ ಮುರಿದು—ಬಿಸುಡಿ—ತುಳಿದು—ಸಮಾಧಿ ಮಾಡಿಸುವೆನು" ಎಂದು ಮನಸ್ಸಿನೊಳಗಿಂದಲೇ ಗದರಿಸಿ ಶಪಥ ಹಾಕಿ ಕೊಂಡೆ. ಹೊರ ನಡೆದೆ.

ಕೊನೆಯ ಮೆಟ್ಟಲು ಇಳಿದದ್ದೇ—ಭರ್ರೆಂದಿತು ಮಳೆ—ಆದರೂ ನಡೆದೆ. ನಡೆಯುತಿದ್ದಂತೇ ಕೊಡೆ ಬಿಡಿಸಿದೆ–ತಲೆ ಮೇಲೆ ಹಿಡಿದೆ. ಆಫೀಸು ಸೇರಿದೆ. ಮಡಚಿದೆ, ಮೂಲೆಗಿಟ್ಟೆ. ಮಳೆಬಿಟ್ಟಿತು.

ಮಧ್ಯಾಹ್ನ ಊಟಕ್ಕೆ ಹೊರಟೆ. ಮಳೆಯಿರಲಿಲ್ಲ. ಒಂದು ಫರ್ಲಾಂಗು ನಡೆವಷ್ಟರಲ್ಲಿ ಹೊಡೆಯಿತು. ಕೊಡೆಗೆ ಕೈಹಾಕಿ ಬಿಡಿಸಹೋದೆ. ಎರ

ಡಂಗುಲ ಮೇಲಕ್ಕೆ ಸರಿದು, ಸುಮ್ಮಗೆ ನಿಂತಿತು. ಒಳಗೆ ಯಾರೋ ಹೊಕ್ಕಿ ಹಿಡಿದಿರುವರೆಂದು ನೀವೆಣಿಸಬೇಕು. ಬಲಪ್ರಯೋಗ ಮಾಡಿದೆ,— ಮತ್ತೆರಡು ಅಂಗುಲ ಹೋಯಿತು. ನಡು ರಸ್ತೆಯಲ್ಲಿ ನಿಂತೆ. ಚೆನ್ನಾಗಿ ಮೂಡಿದೆ. ಮೇಲಕ್ಕೆ ಹೋಗಲೇ ಇಲ್ಲ. ಪರ್ಜನ್ಯನು ಕ್ರಮದಂತೆ ನನ್ನ ತಲೆಯನ್ನೆಲ್ಲ ತೊಳೆದು, ಅಂಗಿ ಶರ್ಟುಗಳಲ್ಲಿ ಧಾರಾಳವಾಗಿ ಇಳಿದು ಕುಳಿತಿದ್ದನು. ನಾನು ವಿಶೇಷ ನೆನೆದಿರಲಿಲ್ಲ—ಪಂಚೆಯುಟ್ಟು, ಶರ್ಟು-ಕೋಟುಗಳನ್ನು ಹಾಕಿ, ಟೊಪ್ಪಿ ಧರಿಸಿ ಎಂಟಡಿ ಆಳದ ಕೆರೆಗೆ ಇಳಿದು ಮೇಲಕ್ಕೆ ಬಂದರೆ ಎಷ್ಟು ಒದ್ದೆಯಾಗಬಹುದೋ ಅಷ್ಟೆ.

ಬಿಡಿಸಲಾರದಿದ್ದರೆ, ನಾಲ್ಕಂಗುಲ ಮೇಲೆ ಹೋದುದನ್ನು ಕೆಳಗಿಳಿಸೋಣವೆಂದು ಕೆಳಗೆಳೆದೆ; ಇಲ್ಲ,—ಕೆಳಗೂ ಬರಲಿಲ್ಲ! ಮಳೆ ಭೋರೆನ್ನುತಿತ್ತು. ಇದ್ದುದನ್ನು ಇದ್ದ ಹಾಗೇ ಹಿಡಿದು, ಗಟ್ಟಿ ಮನಸ್ಸು ಮಾಡಿ, ದೃಷ್ಟಿಯನ್ನು ನಾಸಿಕಾಗ್ರದಲ್ಲಿಟ್ಟು, ವೀರ ಯೋಧನಂತೆ ಏಕಪ್ರಕಾರ ಹಜ್ಜೆಯಿಟ್ಟು, ಮಳೆಯಲ್ಲಿ ನೆನೆಯುತ್ತಾ ಮನೆ ಸೇರಿದೆ. ಮತ್ತೆ ಊಟ ಮುಗಿಸಿ, ಆಫೀಸಿಗೆ ಹೋಗಿ, ಸಾಯಂಕಾಲ ೫ಕ್ಕೆ ಕೊಡೆ ರಿಪೇರಿ ಕೃಷ್ಣಪ್ಪನಿಗೆ ಶರಣು ಹೋದೆ. ಎರಡರ ನೋಟನ್ನು ಹೊರತೆಗೆವಷ್ಟರಲ್ಲಿ ಕೃಷ್ಣಪ್ಪನು, "ಒಂದು ರೂಪಾಯಿ" ಎಂದನು. ನನಗೆ ಏನೋ ಲಾಭ ಸಿಕ್ಕಿದಂತೆ ಸಂತೋಷವಾಯಿತು. ಒಂದು ನೋಟನ್ನಿಟ್ಟು ಅರ್ಧ ತಾಸು ಮಂಡಿಸಿದೆ. ಕೃಷ್ಣಪ್ಪನು ಕಬ್ಬು ಗೀಸಿದಂತೆ ಏನೇನೋ ಗೀಸಿ ಕೊಡೆಯನ್ನು ನನಗೆ ಕೊಟ್ಟನು.

ಮತ್ತೆ ಜೂನ್ ೪, ೫, ೬, ೭, ೮—ಹೀಗೆ, ದ್ವಿತೀಯ ಮಹಾಯುದ್ಧದ ವಿಶೇಷ ಘಟನಾ ಪರಂಪರೆಗಳಂತೆ ಡಂಕರ್ಕ ಪತನ—ಬೆಂಗಾಝಿ ಪತನ ಇತ್ಯಾದಿ ವಿವರದಂತೆ ನಾನಾ ಘಟನೆಗಳಾಗಿವೆ. ಅವೆಲ್ಲವುಗಳನ್ನು ವಿವರಿಸುವುದಕ್ಕಿಂತ ಒಂದೇ ಪಂಕ್ತಿಯಲ್ಲಿ ಇಷ್ಟನ್ನು ಹೇಳುತಿದ್ದೇನೆ—

ಜೂನ್ ತಾ. ೧೨ಂದು ರೂ. ೭—೧೦—೦ಕ್ಕೆ ಕೊಂಡುಕೊಂಡ ಆ ಕೊಡೆಗೆ ಜುಲೈ ತಾ. ೧ರಲ್ಲಿ ಲೆಕ್ಕ ಹಾಕುವಾಗ ರೂ. ೭೦—೧೦—೦ ಬಿದ್ದಿದೆ. ಇವರಲ್ಲಿ ಬರೀ ರಿಪೇರಿ ಚಾರ್ಜು ಮಾತ್ರ ಸೇರಿದೆ. ಆ ಕೊಡೆಯಿಂದಿಳಿದ ಕೃಷ್ಣ ಜಲದಿಂದಾದ ಟೊಮ್ಯಾಟೋ ಬಾರ್ ಖರ್ಚು, ರಿಪೇರಿ ಯಾತ್ರೆಗಳಲ್ಲಿ ತಗಲಿದ ಕಾಫಿ ಖರ್ಚು, ಕೊಡೆ ಹಿಡಿದೂ ಮಳೆಯಲ್ಲಿ ನೆನೆ

ದುಂಟಾದ ಶೀತ ಜ್ವರಗಳ ಚಿಕಿತ್ಸೆಯ ಖರ್ಚು—ಇವಾವುವನ್ನೂ ಸೇರಿಸಿಲ್ಲ. ಇದೆಲ್ಲವನ್ನೂ ಸೇರಿಸಿದರೆ ಜುಮ್ಲಾ ಖರ್ಚು ರೂ. ೧೭೦—೦—೦ಕ್ಕೆ ಕಡಿಮೆಯಾಗದು.

ಈಗ ಆ ಕೊಡೆಯಲ್ಲಿ ಒಂದೇ ಒಂದು ಮೂಲ ವಸ್ತುವಿಲ್ಲ. ಎಲ್ಲವೂ ಹಳತು. ಪೂರ್ಣ ವರ್ಣಸಂಕರವಾಗಿದೆ.

§ § § § §

ಈಗಲೂ—ಹತ್ತು ತಿಂಗಳ ನಂತರ—ಅದೇ ಕೊಡೆಯಿದೆ. ಆದರೆ, ಮಳೆ ಬಂದರೂ—ಬಿಸಿಲು ಕಾದರೂ ಅದನ್ನು ಬಿಡಿಸುವುದಿಲ್ಲ. ಬಿಡಿಸಿದರೆ ೧—೧೨—೦ರ ಬೀಲುಗಳು ಹೊರಡುತ್ತವೆ.

ಈ ಖರ್ಚುಗಳನ್ನೂ, ಆಂತರಿಕ ನಡುಕಗಳನ್ನೂ, ಒಳಗಿಂದೊಳಗೇ ಸುಡುವ ಜ್ವರಗಳನ್ನೂ ನಿಲ್ಲಿಸಬೇಕಾದರೆ ಒಂದೇ ಉಪಾಯ—ಕೊಡೆ ಕೊಂಡುಕೊಂಡರೂ, ಅದನ್ನು ಭೂಷಣವಾಗಿ ಕಂಕುಳಲ್ಲಿ ಇರಿಸಿಕೊಂಡು, ಮಳೆ ಬಂದರೂ ಮನಸ್ಸು ಬದಲಾಯಿಸಿ ಅದನ್ನು ಬಿಡಿಸದೆ ಇರೋದು. ಏಕೆಂದರೆ, ಬಿಡಿಸಿದರೂ ಚಳಿಜ್ವರ, ಬಿಡಿಸದಿದ್ದರೂ ಚಳಿಜ್ವರ.

ವಿ. ಸೂ: ಒಂದು ವಿಷಯ ಮರೆತೆ. ಜುಲೈ ತಾ. ೧ರಲ್ಲಿ, ಕೊಡೆ ಕೃಷ್ಣಪ್ಪನ ಮತ್ತೊಂದು ಕೈಗೂ ಒಂದು ಚಿನ್ನದ ಹೊಸ ಬಳೆ ಕಂಡಿದ್ದೇನೆ. ಅದರ ಮುಂಚಿನ ದಿನ, ನನ್ನ ಪಾಚಿನ ಚಿನ್ನದ ಸರಪಳಿಯನ್ನು ಸರಾಫ್ ಸರ್ಪತ್ರಾಯರಿಗೆ ಮಾರಿದ್ದೇನೆ. ಕೊಡೆ ಕೃಷ್ಣಪ್ಪನು ಅದೇ ಚಿನ್ನವನ್ನು ಅದೇ ಸರಾಫರಲ್ಲಿ ಕೊಂಡುಕೊಂಡನೋ ಎಂಬುದನ್ನು ಮಾತ್ರ ಖಂಡಿತ ಹೇಳಲಾರೆ.

---

೭. ಗೋಡೆಗಳೂ ಬರೆಹಗಾರರೂ

'ಇಟ್ಟೀಲಿಯೂ ಶರೀರವೂ' ಎಂಬ ಶಿರೋನಾಮೆಯ ಲೇಖನವನ್ನು ನನ್ನ ಗೆಳೆಯ ಕಿರಣನು ಬರೆದಿರುವೆನೆಂದಾಗ,—'ನುಸಿಯೂ ಸಮೂವಿನ ಅರಸನೂ' ಎಂದು ಬರೆಯಲಿಲ್ಲವೇಕೆ? ಎಂದು ಕೇಳಿದೆ. ಕಿರಣನು ಕೋಪಗೊಂಡು ಅಸ್ತಂಗತನಾದನು. ಇದಾಗಿ ಎರಡು ವರುಷಗಳಾದುವು.

ಅಂದಿನಿಂದ ವಿಚಿತ್ರ ತಲೆಕಟ್ಟುಗಳೇ ಹೊಳೆಯುತ್ತಲಿವೆ. 'ಗೋಡೆಗಳೂ ಬರೆಹಗಾರರೂ' ಎಂದರೆ ವಿಚಿತ್ರವಾಗಿ ಕೇಳಿಸುತ್ತದೆ ಎನ್ನುವವರಿದ್ದಾರೆ. ನಾಲ್ಕೈದು ಬಾರಿ ಓದಿದರೆ ಅಭ್ಯಾಸವಾಗಿ ಮುಮತೆಯುಂಟಾಗಿ ಮೆಚ್ಚುವವರೂ ಇದ್ದಾರೆ. ಈ ತಲೆಕಟ್ಟು ಚೆನ್ನಾಗಿದೆಯೆಂದು ಮನಗಾಣುವವರು ದೊರೆತರೆ ಮುಂದೆ,—

(೧) 'ವಿಶಾಲ ಹೃದಯವೂ ಸುಯೇಜ್ ಕಾಲುವೆಯೂ'
(೨) 'ಫೇರಿವಾಲನೂ ಮೇರುಪರ್ವತವೂ'
(೩) 'ಡಾಮರು ರಸ್ತೆಯೂ ಎಕ್ಸ್‌ರೇ ಯಂತ್ರವೂ'
(೪) 'ಹರಿಜನರೂ ಕೋಪಿಂಗ್ ಪೆನ್ಸಿಲುಗಳೂ'

........ಮುಂತಾದ ಲೇಖನಗಳನ್ನು ಬರೆಯಲಿದ್ದೇನೆ.

ಗೋಡೆಗಳೆಂದರೇನು? 'ಭಾಷಾಸಾಗರ'ರು ಬರೆದ ನಿಘಂಟಿನಲ್ಲಿ "ಕಲ್ಲು ಅಥವಾ ಮಣ್ಣಿನಿಂದ ತೆಳ್ಳಗೆ ಕಟ್ಟಲ್ಪಟ್ಟ ಒಂದು ಎತ್ತರದ ದಂಡೆ" ಎಂದಿದೆ. ಕರ್ಣಾಟಕದ ಜೊನ್ಸನರು ಮತ್ತೆ ಜನಿಸಿದರು. 'ಭಾಷಾಸಾಗರ'ರು ಬರೆದುದನ್ನು ಇವರು ಖಂಡಿಸಿ, ತಾವೇ ಹೊಸ ನಿಘಂಟನ್ನು ರಚಿಸಿರುವರು. "ಗೋಡೆ=ಕಲ್ಪಣೆಯಿಂದ ಕೆಂಪಂಗಿಯವರು ಕೂಲಿ(ಳಿ)ಗಾಗಿ ಕಡಿದುತಂದ ಚಿಕ್ಕ ಕಲ್ಲು ತುಂಡುಗಳ ಅಥವಾ ಗುಡ್ಡ ಯಾ ಹಿತ್ತಿಲನ್ನು ಅಗೆದು ತೆಗೆದ ಮಣ್ಣಿನ ನೇರಾದ—ಅಥವಾ ಓರೆಕೋರೆಯಾದ ಪರಂತು ಎತ್ತರವಾದ ಕಲ್ಲು ಅಥವಾ ಮಣ್ಣಿನ ಬೇಲಿ" ಎಂದು ಕರ್ಣಾಟಕದ ಜೊನ್ಸನರು ಬರೆದ, ತೂಕದ ಶರ್ತದಲ್ಲಿ ಮಾರಾಟಕ್ಕಿರಿಸಿರುವ ನಿಘಂಟಿನಲ್ಲಿದೆ. ಈ ಸುದೀರ್ಘ ಅರ್ಥದ ಕೊನೆಯಲ್ಲಿ "ಒಳ್ಳೆ ಕಲ್ಲಿನಿಂದ ಅಥವಾ ಅಂಟಾದ ಮಣ್ಣಿನಿಂದ ಕಟ್ಟಿದರೆ ಥಕ್ಕನೆ ಬೀಳಲಾರದ ಇಲ್ಲದಿದ್ದರೆ ಬೀಳುವ ನಚಿರ ವಸ್ತು" ಎಂದೂ ಕೂಡಿಸಬೇಕೆಂದು ಕೆಲವರ ಅಭಿಪ್ರಾಯ. ಆದರೆ ಈ ವಿಷಯವು ಸಾಹಿತ್ಯ ಕ್ಷೇತ್ರದಲ್ಲಿನ್ನೂ ಚರ್ಚೆಯಲ್ಲೇ ಇದೆ.

'ಗೋಡೆ' ಎಂಬುದರ ಎದುರಿಗೆ ಏನನ್ನೆಲ್ಲ ಸೇರಿಸಬೇಕೋ ಆ ವಿಷಯದಲ್ಲಿ ಹಲವರು ಹಲವು ಸೂಚನೆಗಳನ್ನು ಮಾಡಿರುತ್ತಾರೆ. ತ್ರಿಕನ್ನಾಡಿನ ಗೋವಿಂದನ್‌ರವರು ಗೋಡೆ ಎಂಬುದನ್ನು "ಗ-ಉ-ಓ-ಡ-ಎ" ಎಂದು ಸಂಧಿವಿಂಗಡಿಸಿ, ಒಂದೊಂದು ಸ್ವರ ಮತ್ತು ವ್ಯಂಜನಕ್ಕೂ ಎರಡೆರಡು

ಪುಟ ಬರೆದಿರುವರು. ಇದು 'ಎಂಟಿಕ್' ಕಾಗದದಲ್ಲಿ ಚಿತ್ರಕರೂಪದಲ್ಲಿ ಅಚ್ಚಾಗಿದ್ದು, ಕರ್ಣಾಟಕದಲ್ಲೆಲ್ಲ ಗೊಂದಲವನ್ನೆಬ್ಬಿಸಿದೆ.

ಶಾಮಕುಂಜದವರು ಸ್ಪರ್ಧಾಬುದ್ಧಿಯಿಂದ ಗೋಡೆಯೆದುರಿಗೆ "ಕಟ್ಟಿದರೆ ಕಟ್ಟುವುದು; ಕಟ್ಟಿಲ್ಲ—ಕೆಟ್ಟಿಲ್ಲ" ಎಂದು ಗಾದೆರೂಪದಲ್ಲಿ ಒಂದು ಪಂಕ್ತಿ ಬರೆದು, ಈ ಒಗಟನ್ನು ಬಿಡಿಸಬೇಕೆಂದಿದ್ದಾರೆ.

ನೆರಿಯಡ್ಕದಲ್ಲಿ ಗೋಡೆಯು ಜನಜೀವನದಲ್ಲಿ ಸುಸುಳಿದೆಯೆಂಬುದಕ್ಕೆ ಆಧಾರಗಳಿವೆ. ರಾಮಯ್ಯನವರು "ಗೋಡೆಯೆಂದರೇನು?" ಎಂದು ಗೋಡೆಯಲ್ಲೆ ಬರೆದುಹಾಕಿಸಿದ್ದಾರೆ. "ಇಪ್ಪತ್ತು ಬಸ್ಸುಗಳು ಓಡಾಡುತ್ತಲಿವೆ. ಜನರು ನೋಡಲಿ, ಬುದ್ಧಿಯಿದ್ದರೆ ಆಲೋಚಿಸಲಿ" ಎಂದು ರಾಮಯ್ಯನವರನ್ನುವರು. ನಿಜ.

ಉಡುಪಿಯು ಹಿಂದಿಲ್ಲ. ಅಲ್ಲಿಯ ಮಾಜಿ ಸಂಪಾದಕ ಕೃಷ್ಣ ಸಾಮುಗರು ಗೋಡೆಯೆಂದರೇನೆಂಬುದನ್ನು ಕೂಲಂಕಷವಾಗಿ ನೋಡಿ ಅಭ್ಯಸಿಸದೆ ಅದರ ಮೇಲೆ ಒಂದೂ ಪಂಕ್ತಿಯನ್ನು ಬರೆಯಲಾರೆನೆಂದು ಶಪಥ ಹಾಕಿ, ತನ್ನ ಕೊಠಡಿಗೆದುರಾಗಿ ಒಂದು ಗೋಡೆ ಕಟ್ಟಿಸಿ ಅದನ್ನೇ ನೋಡುತ್ತ ಕುಳಿತಿರುವರೆಂದು ಬಾತ್ಮೀದಾರರು ಬರೆಯುತ್ತಾರೆ. ಈ ಲೇಖಕರು (ಕೃಷ್ಣ ಸಾಮುಗರು) ದಿನಕ್ಕೆ ಎಂಟು ಸಾವಿರ ಶಬ್ದಗಳನ್ನಾಲೋಚಿಸುತ್ತಿರುವರೆಂದೂ ಸುದ್ದಿ. ಮುಸ್ಲಿಂ ಬಂಧುಗಳಲ್ಲಿ ಉನ್ನತ ಕನ್ನಡ ಪಂಡಿತರೆನಿಸಿರುವ ಔಪ್ರಾವ್ ಬ್ಯಾರಿಗಳು ಗೋಡೆಯ ರಹಸ್ಯಗಳನ್ನು ಭೇದಿಸಲು ಬಹಿರಂಗ ಸ್ಥಳಗಳನ್ನು ತೊಲಗಿ ಅಂತರಂಗದಲ್ಲಿ ಸಮಾಧಿಷ್ಠರಾಗಿರುವರೆಂದೂ, ಇವರೆದ್ದರೆ ಗೋಡೆಯ ಮೇಲೆ ಹೊಸ ಬೆಳಕು ಬೀಳಬಹುದೆಂದೂ ಹೇಳಲಾಗಿದೆ. ಇವರು ದಿನಕ್ಕೆ ಒಂದು ರಾತ್ಲು ಮಾಂಸ, ನಾಲ್ಕು ರೊಟ್ಟಿ ಮತ್ತು ಹತ್ತು ಸಿಗರೇಟುಗಳನ್ನು ಮಾತ್ರ ಕೊಟ್ಟರೆ ಗೋಡೆಯ ಸಮಸ್ಯೆಯನ್ನು ಪೂರ್ಣಗೊಳಿಸುವೆನೆಂದು ಕಲಿಯೂರು ಶೀನ ಸಿಂಬ್ರಾಣಿಯವರಿಗೆ ವಚನಕೊಟ್ಟು, ಕೊಳಕನ್ನು ಲಕ್ಷಿಸದೆ ಚರಂಡಿಯಲ್ಲಿ ಇಳಿದು ಗೋಡೆಯ ಅಂತರಂಗವನ್ನು ಸೇರಿದ ಘಟನೆಯು ಚರಿತ್ರಾರ್ಹವಾದುದು.

ಪಿಣಿಪಾಡಿ ಪಾದ್ಯರು ಗೋಡೆಯ ಮೇಲೆ ಒಂದು ಮಹದ್ಗ್ರಂಥ ಬರೆದು ತಿದ್ದುವುದಕ್ಕಾಗಿ ಪುನಃ ಓದುತ್ತಿರುವರೆಂದು ಹೇಳುವರು. ಪಿಣಿಪಾಡಿ

ಯುವರು ಸ್ವತಹ ಒಂದು ಜೀನಸಿನ ಅಂಗಡಿಯನ್ನೂ, ಒಂದು ಸೆಲೂನನ್ನೂ ಒಂದು ಹೋಟೇಲನ್ನೂ, ಒಂದು ಬೂಟ್‌ಮಾರ್ಟನ್ನೂ ನಡೆಸಿ ವಾಣಿಜ್ಯ ವಿಶಾರದರೆನಿಸಿರುವರು. ಇತ್ತೀಚೆಗೆ ಒಂದು ಚಿಕ್ಕ ಆಸ್ಪತ್ರೆಯನ್ನೂ ತೆರೆದು ಬರೆಹಗಾರರೆಂಬ ಭ್ರಾಂತಿಯು ವಿಶೇಷವಾಗಿ ಹುಚ್ಚುಹಿಡಿದ ನಾಲ್ವರನ್ನು ಕಟ್ಟಿಹಾಕಿ ಈ ಜಾತಿಯ ಹುಚ್ಚು ಹೇಗಾಯಿತು—ಇದು ಬೆಳೆಯಲು ಸಾಧ್ಯವೇ ಎಂಬುವನ್ನು ಪರೀಕ್ಷಿಸುತ್ತಿರುವರೆಂದು ವಾರ್ತೆ. ಅವರ ಮೊನ್ನಿನ ಸೋಜಿಗವೆಂದರೆ ಒಂದು ಪತ್ರಿಕೆ. ಅದರಲ್ಲಿವರು ಈ ಹುಚ್ಚರ ಲೇಖನಗಳನ್ನು ಮಾತ್ರ ಸಂಗ್ರಹಿಸಿ, ಪ್ರಸಿದ್ಧಿಸಿ, ಸೇಕಡಾ ೭೫ ಕಮಿಷನ್ ಕೊಟ್ಟು (ಫ್ರೈಟ್ ಫ್ರೀ) ದೊಡ್ಡ ಕೋಲಾಹಲವನ್ನುಂಟುಮಾಡಿರುವರೆನ್ನ ಲಾಗಿದೆ. ಇತ್ತೀಚೆಗೆ ಪತ್ರಿಕೆಯಲ್ಲಿ ಪಿಣಿಪಾಡಿಯವರು ಬರೆದ ಗ್ರಂಥದಿಂದ ಕೆಲವಂಶಗಳನ್ನು ಎತ್ತಿಕೊಡಲಾಗಿದೆ ಎಂಬ ಕೆಲ ಪಂಕ್ತಿಯಿರುವ—"ನಾ ಕಂಡ ಗೋಡೆ" ಎಂಬ ಶಿರೋನಾಮೆಯ ಲೇಖಮಾಲೆಯಾರಂಭವಾಗಿದೆ.

ಗೋಡೆಯ ವಿಷಯವು ಕರ್ನಾಟಕದಲ್ಲೆಲ್ಲ ಇಷ್ಟು ದಿಗಿಲನ್ನುಂಟು ಮಾಡಿರಲು,—ಮಂಗಳೂರಲ್ಲಿ ಈ ಸಮಸ್ಯೆಯು ಸುಖಕರವಾಗಿ ಪರಿಹರಿಸ ಲ್ಪಡುತ್ತಲೇ ಇದೆ. ಬಂಬ್ರಣ್ಣ ಶ್ರೀಪಾದನೆಂಬವನು ದಿನಾಲೂ ನಾಲ್ಕಡಿ ಎತ್ತರದ ಗೋಡೆಯನ್ನು ಹಾರಿ ಜಯಿಸಿರುವನು. ಲಾಠಿಚಾರ್ಜು ನಡೆದ ಕೂಡಲೇ ಇನ್ಸ್‌ಪೆಕ್ಟರ್ ವೈರಿಯೊಬ್ಬನು 'ವಿಲಿಯಾಂ ಸಾಹೇಬ ಸತ್ತ' ಎಂದು ತನ್ನ ಕೋಪವನ್ನೆಲ್ಲ ಒಂದು ಗೋಡೆಯ ಮೇಲೆ ಆಹ್ವಾನಿಸಿ ಚಿಕ್ಕ ಮಸಿ ತುಂಡಿನಿಂದ ಒಬ್ಬ ಇನ್ಸ್‌ಪೆಕ್ಟರನನ್ನು ಕೊಂದು ಕೀರ್ತಿಶಾಲಿಯಾದನು. ಸಿಂಗಾರವೇಲುವು ಚುನಾವಣೆಯಲ್ಲಿ ಗೆದ್ದಕೂಡಲೇ ಅಂಜೂರ ಅಣ್ಣಪ್ಪನು ಸಿಂಗಾರುವೇಲುವಿನ ಎದುರಾಳಿಯನ್ನು ಕುರಿತು ವಿಲಾಸಿನಿಯ ಮನೆ ಗೋಡೆಯ ಮೇಲೆ "ಮೂರು ಕಾಸಿನವನೇ, ಈಗ ಏನಂತೆ?" ಎಂದು ದಸ್ಕತಿಲ್ಲದ ಪಂಕ್ತಿ ಬರೆದು ಸಿಂಗಾರವೇಲುವಿನಿಂದ ಚೋಕಿನ ಕಾಸು ನಾಲ್ಕು, ರಾತ್ರಿಕಾಲ ಕಳ್ಳತನಮಾಡಿ ಬರೆದ ಶ್ರಮಕ್ಕೆ ಆಣೆ ಎರಡು ಹೀಗೆ ಬಹು ಮಾನ ಪಡೆದು ಶ್ರಮಕ್ಕೆ ತಕ್ಕ ಫಲವೆಂದುಕೊಂಡನು. ಇವನು ಸಿಂಗಾರ ವೇಲುವಿನ ಕುರಿತು ಹೀಗೆ ಬರೆದನೋ ಎದುರಾಳಿಯನ್ನು ಕುರಿತು ಬರೆ ದನೋ ಎಂಬುದು ಜನರಿಗೊಂದು ಸಮಸ್ಯೆಯಾಗಿದೆ.

'ಗೀಳಿ' ಎಂಬ ಸುಂದರ ಹೆಸರಿನ ನಾಯಕಸಾನಿಯ ಏಕಮಾತ್ರ ಪುತ್ರ ಪರಶುರಾಮನು ತನ್ನ ಏಕಮಾತ್ರ ಭಗಿನಿಯ ಕೈ ಹಿಡಿಯಲೊಪ್ಪದ, ಕಳೆದುಹೋದ ಭಾವನನ್ನು ಕುರಿತು "ಹೇ ನಾಯಿ...." ಎಂದು ಶೌಕತ್ ಗಲ್ಲಿಯ ಗೋಡೆ ಮೇಲೆ ಬರೆದು ಲೋಕವಿಖ್ಯಾತನಾಗಿರುವನು. ಸಿನೆಮಾ ಕಂಪೆನಿಯವರೂ 'ಬೆನಿಫಿಟ್' ನಾಟಕಗಳನ್ನಾಡುವವರೂ 'ಬರುತ್ತದೆ' ಎಂಬ ನಾಟಕವನ್ನಾಡುವವರೂ ಮೂವತ್ತು ಇಂಚು ಉದ್ದ, ಇಪ್ಪತ್ತು ಇಂಚು ಅಗಲದ ಕಾಗದಗಳನ್ನು ಹಚ್ಚಿ ಗೋಡೆಗಳ ಮೇಲೆ ಹುಲ್ಲು ಬೆಳೆಯುದಂತೆ ಅವುಗಳನ್ನು ರಕ್ಷಿಸಿ 'Protected—Monuments Act' ಎಂಬ ಪ್ರಾಚೀನ ಶಿಲ್ಪರಕ್ಷಣಾ ಕಾನೂನಿಗೆ ಸಹಾಯಮಾಡಿರುವರು. 'ಬೀಲು' ಎಂದರೆ ಭಯಹುಟ್ಟಿ ಕೆಲವರು 'No Stick bills'—'Bills Stick No' ಎಂದೂ 'Stick bills no' ಎಂದೂ ಬರೆದು, ಬೀಲಿನವನೂ ಅವನ ಏಣಿಯೂ ಬರುವುದೋ ಎಂದು ಕಣ್ಣಿಗೆ ಎಣ್ಣೆಹಾಕಿ ಕಿಟಕಿಯಿಂದಿಣಿಕಿನೋಡುತ್ತಿರುವರು. 'ನಿಮಗೆ ಮಕ್ಕಳಿರುವುವೇ?' ಎಂದು ದಪ್ಪ ಅಕ್ಷರಗಳಲ್ಲಿ ಬರೆದು ಕೆಳಗೆ ಬಲಿತ ಹೆಗ್ಗಣದ ಚಿತ್ರ ಬಿಡಿಸಿ ಬಾಟಲಿಗೆ ಎರಡೂಕಾಲು ರೂಪಾಯಿ ಎಂದು ಕಾಣಿಸಿದ ಕಾಗದಗಳನ್ನು ಹಚ್ಚಿ ಮದ್ದಿನ ಕಂಪೆನಿಯವರು ಆ ಗೋಡೆಗಳೊಳಗಿಂದ ಗಿರಾಕಿಗಳು ಬಾರರೇ ಎಂದು ಆಶ್ಚರ್ಯಪಡುತ್ತಿರುವರು.

ಗೋಡೆಯೆಂದರೇನು—ಅದರ ಉಪಯೋಗವೇನು ಎಂದು ತೃಪ್ತಿಕರವಾದ ಉತ್ತರವನ್ನು ಕೊಟ್ಟವರಲ್ಲಿ– ರಾತ್ರಿಕಾಲ ಕತ್ತಲೆಯಲ್ಲಿ ನಿಂತು ಅವುಗಳ ಮೇಲೆ ಮಸಿಯಿಂದ ತಮ್ಮ ಶತ್ರುಗಳನ್ನು ಜರೆದು ಬರೆವ ವೀರ ಪುರುಷರು ಅಗ್ರಗಣ್ಯರು. ಹುಟ್ಟಿದಾರಭ್ಯ ತಮ್ಮ ಮಕ್ಕಳು ಮಾತಾಪಿತರ ಸೇವೆಮಾಡಿಲ್ಲ, ದುಡಿಯಲಿಲ್ಲ, ಜನಸೇವೆ ಮಾಡಿಲ್ಲ,–ದೇಶಸೇವೆ ಮಾಡಿಲ್ಲ– ಎಂದು ಮರುಗುವುದಾದರೆ,—ಅವರಿಗೆ ಗೋಡೆಗಳ ಮೇಲೆ ಮಸಿಯಿಂದ ಬರೆಯುವ ಧೈರ್ಯವಿದೆಯೋ ಎಂದು ಪರೀಕ್ಷಿಸಲಿ. ಭಾರತಮಾತೆಯ ಮಾನವಂತ ಪುರುಷರಲ್ಲಿ ಇಂತಹವರು ಅಗ್ರಗಣ್ಯರು. ವೀರ್ಯ ಶೌರ್ಯಗಳಲ್ಲಿ ಮೊದಲಿಗರು. ಬರೆಹಗಾರರಲ್ಲಿ ಪ್ರಥಮಶ್ರೇಣಿಯವರು. ಬಹಿರಂಗವಾಗಿ ಹೇಳಲಾಗದುದನ್ನು ಅಂತರಂಗದಲ್ಲಿ ಹೇಳುವ ಘನವಂತರು. ಇವರ

ಕುಲವು ಬೆಳೆದಂದೇ ಭಾರತಮಾತೆಯ ಉದ್ಧಾರ. ಮನುಷ್ಯ ಜಾತಿಯ ಈ ವಿಚಿತ್ರ ಮಾದರಿಗಳನ್ನು ಕಂಡರೆ ನಮಸ್ಕರಿಸಿರಿ! ಅವರಿಗೊಂದು ಸೇರು ಮಸಿ ಅಥವಾ ಜೇಡಿಯನ್ನು ತೆಗೆಸಿಕೊಡಿರಿ!

---

೮ ಹೈಡಿಗೊಂದು ಪತ್ರ.

ಹೈಡಿ,

ಬಹುಕಾಲದ ನಂತರ ನಿನ್ನ ವಿಳಾಸ ದೊರೆಯಿತು. ನೀನು ಶ್ವಾನ ಕುಲದವನಲ್ಲವೆಂದೇ ನನ್ನ ಅಭಿಪ್ರಾಯವಿತ್ತು. ಆ ದಿನ ಸಬ್ ಇನ್ಸ್‌ಪೆಕ್ಟರರ ಕಾಲಿಗೆ ನೀನು ಕಚ್ಚಿದಾಗ, ನನ್ನನ್ನು ಯಮನ ಕಣ್ಣಿನಿಂದ ನೋಡಿದ ಟೊಣ ಪನಿಗೆ ತಕ್ಕ ಶಾಸ್ತಿಯಾಯಿತೆಂದು ನೆನಸಿ ಹಿಗ್ಗಿದ ನಾನು, ಮುನಿಸಿಪಲ್ ಕಮಿಷನರರ ಬೂಟಿಸಿಗೂ, ಡಾಕ್ಟರ್ ಗಂಧರ್ವರ ಮೆಟ್ಟಿಗೂ ನೀನು ಬಾಯಿ ಹಾಕಿ ಜಗಿದೆಯೆಂದು ತಿಳಿಯುತ್ತಲೇ ಕುಗ್ಗಿದೆ. ಶ್ವಾನಕುಲದಲ್ಲಿ ಹುಟ್ಟಿ ದರೂ ನಿನಗೆ ಸಿಂಹಾಸನದಲ್ಲಿ ಕುಳ್ಳಿರಿಸಿದರೆ, ನಿನ್ನ ದುರ್ಗುಣಗಳೆಲ್ಲ ಒಂದೊಂದೇ ಮಾಯವಾಗಿ, ನೀನು ಸಚ್ಚರಿತನಾಗುವೆಯೆಂದು ಆಶಿಸಿದ್ದ ನನ್ನಲ್ಲಿ ಒಮ್ಮೆಲೇ ಆಶಾಭಂಗವಾಯಿತು. ನೀನು ಸಿಂಹಾಸನದಿಂದ ಸಭಿ ಯುವರನ್ನು ನೋಡಿ ಗರ್ವದಿಂದ ಅಸಹ್ಯ ಶಬ್ದಗಳನ್ನು ಮಾಡಿದೆ.

ನೀನು ಯಾರಾಗಿದ್ದೆಯೆಂಬುದನ್ನು ನೀನು ಮರೆತೆ. ರಸ್ತೆಯಲ್ಲಿ ಎಂಜ ಲೆಲೆಗಳನ್ನು ಹೆಕ್ಕುತ್ತಿದ್ದಾಗ ನಿನ್ನನ್ನು ಸಿರೀಲ್ ಸಾಹೇಬರು ಹೆಕ್ಕಿ ಒಳ್ಳೇ ಅನ್ನ ಹಾಕಿದರು. ನಿನಗೆ ನಾಲ್ಕು ತುಂಡು ಎಲುಬುಗಳೂ ಕೆಲವು ರಾತಲು ಮಾಂಸವೂ ಹೆಚ್ಚಿತು. ನಾಲಿಗೆ ಸ್ವಲ್ಪ ಉದ್ದನಾಯಿತು. ತೆರೆಯ ಮರೆ ಯಿಂದ ಬಾಲವನ್ನೆತ್ತಿ ಹಿಡಿದು ಆಡಿಸಲು ಕಲಿತೆ. ಪಾಸಿಗೆ ಕೊಟ್ಟವನ ಮುಖದಂತಿದ್ದ ನಿನ್ನ ಮುಸುಡು ಸ್ವಲ್ಪ ಬಲಿತು, ಅಲ್ಲಿಷ್ಟು ಇಲ್ಲಿಷ್ಟು ಹೊಳಪು ಬಂದು, ಸ್ವಲ್ಪ ಠೀವಿಯೂ ಕಂಡಿತು. ನಾಲಿಗೆಯ ಮೇಲೆ ಎಂಜಲೇ ಇಲ್ಲದೆ, ಸತ್ತ ಹಾವಿನ ಬಾಯಿಯಂತಿದ್ದ ನಿನ್ನ ಆ ಬೂಟ್ ಭಕ್ಷಕ ಬಾಯಿಯಿಂದ ಚೆನ್ನಾಗಿ ಪಸೆಯಿರುವ ನಾಲಿಗೆಯೊಂದು ಹೊರಟು ನೇತಾಡಿತು. ನಾಲ್ಕಾರು ದಿನ ನೀನು ಯಜಮಾನನ ಹಿಂದೇ ತಿರುಗುತ್ತ

ಅವನ ವಿಷಯವಾಗಿ ಕೃತಜ್ಞತೆ ತೋರಿಸಿದೆ. ಐದನೇ ದಿನ ಕಳ್ಳರು ಬಂದು ಕಾಲಾಣೆಯ ಎರಡು ಅಂಜೋಡೆಗಳನ್ನು ಬಿಸಾಡುತ್ತಲೇ ಅವುಗಳನ್ನು ತಿಂದು, ನಿನ್ನ ಯಜಮಾನನ ಭಂಡಾರವನ್ನು ಜ್ಜಿಬಿಡಲು ಕಳ್ಳರಿಗೆ ಅನುಮತಿ ಕೊಟ್ಟೆ. ಯಜಮಾನನ ಜ್ಯೋತಿ ಅರಿತು, ನಿನ್ನ ಜ್ಯೋತಿಯು ಆ ಕೊಳಕು ಹೃದಯವನ್ನು ಬಿಡದೆ ಇತ್ತ ಬಂತು. ಸತ್ತ ಸಿರೀಲ್ ಸಾಹೇಬರು ಸ್ವರ್ಗಕ್ಕೆ ತೆರಳಿ ನಿನ್ನ ವಿಷಯ ದೇವರಲ್ಲಿ...........

...........ಆದರೆ, ಸ್ವರ್ಗ ಮತ್ತು ದೇವರ ವಿಷಯವಾಗಿ ನಿನಗೇನು ಗೊತ್ತು? "ನೀನು ಬೊಗಳಿದರೆ ದೇವಲೋಕ ಹಾಳಾಗದು" ಎಂಬ ಗಾದೆಯೇ ಇದೆ. ಅದರರ್ಥವೂ ಹೆಚ್ಚು ಇದೆ.

ಸಿರೀಲ್ ಸಾಹೇಬರ ಶವಸಂಸ್ಕಾರದ ವಿಷಯದಲ್ಲಿ ಹೇ ಹೈಡಿ, ನೀನು ಹೊಲೆಯನ ಜಗಲಿ ಮೇಲೆ ಕುಳಿತು ಸೊಣಗಳೊಂದಿಗೆ ಆಡುತ್ತಿದ್ದಿ ಯೆಂದು ಹೇಳುವರು. ಅಹುದೇ?

ಯಾವ ನಾಯಿಯೂ ಮಕ್ಕಳ ತೊಟ್ಟಿಲಡಿಯಲ್ಲಿ (ನಾಲ್ಕು ಚಕ್ರದ ಚಿಕ್ಕ ಗಾಡಿ) ಬಿದ್ದು ಗಾಯಗೊಂಡದ್ದಿಲ್ಲ. ಆದರೆ, ಹೈಡಿ! ನೀನು ಮಾತ್ರ ತೊಟ್ಟಿಲ ಅಡಿಗೂ ಬಿದ್ದೆ. ಶ್ವಾನ ಕುಲಕ್ಕೆ ಅಪಮಾನ ಮಾಡಿದೆ. ನೀನು ಬದುಕಿದುದಕ್ಕಾಗಿ ನನಗೆ ಸಂತೋಷವಾಯಿತು. ನೀನು ಬದುಕಿಕೊಂಡೆ ಎಂದು ನಿನಗೇ ತಿಳಿದಿರುವುದೋ ಇಲ್ಲವೋ; ನೀನು ಜೀವಿಸಿರುವೆ ಎಂದು ನಿನಗೆ ಗೊತ್ತಿದ್ದರಲ್ಲವೇ ಅಂದು ಬದುಕಿ ಉಳಿದ ಅರಿವು! ನಿನ್ನನ್ನು ಗೋವರ್ಧನರಾಯರು ಎತ್ತಿದರು. ಅನಾಥ ಜೀವಿಯೆಂದು ತಿಳಿದು ನಿನಗೆ ಅವರೇ ಯಜಮಾನರಾದರು. ನೀನು ಹುಟ್ಟಿದ ಕುಲವು ಸ್ವಾಮಿ ಭಕ್ತಿಗೆ ಹೆಸರಾದುದೆಂದು ಗೋವರ್ಧನರಾಯರು ತಿಳಿದು ಮೋಸಹೋದರು. ನೀನು ಅವರ ಮಕ್ಕಳ ಕೈಯಿಂದ ರೊಟ್ಟಿಯನ್ನು ಕಸಕೊಂಡು ತಿಂದು, ಅವರ ಮಾವನ ಕಾಲಿಗೆ ಕಚ್ಚಿ, ಹೆಂಡತಿಯ ಸಾಟಿನಿಂದ ನೇರಾಗಿ ತಲೆಗೇ ಪೆಟ್ಟು ತಿಂದು, ಶಿರಸ್ತ್ರಾಣವಿದ್ದರೆ ನೆತ್ತರು ಬರುತ್ತಿದ್ದಿಲ್ಲವೆಂದು ಮರುಗಿ, ಹಿಂಬದಿಯ ಗೇಟನ್ನು ಹಾರಿ ಇನಾಸ್ ಫೊರ್ಬುಗಳ ಹಂದಿಮರಿಗಳನ್ನು ಚಲ್ಲಾಪಿಲ್ಲಿಯಾಗಿ ಓಡಿಸಿ, ಒಂದು ಮೋಟಾರಡಿಯಲ್ಲಿ ಅಡಗಿ ಪಾರಾದೆ ಯೆಂದು ಕೇಳಿದೆ. ಅಹುದೇ ಹೈಡಿ?

ಹೈಡಿ! ನೀನು ಹೇಡಿಯೆಂದು ಯಾರು ತಿಳಿದಿದ್ದರು! ಗೇಟಿನೊಳಗೆ ನಿಂತು ಸರಳುಗಳೆಡೆಯಿಂದ ನೀನು ಬೊಗಳುವೆ. ರಸ್ತೆಯಲ್ಲಿ ಹಾದು ಹೋಗುವ ದನವನ್ನು ನೋಡಿದರೂ ಬೊಗಳುವೆ. ಕರುವನ್ನು ನೋಡಿದರೂ ಬೊಗಳುವೆ. ಆಡಿನ ಮರಿಯ ಮೇಲೂ ನಿನಗೆ ಹಗೆ! ನಿನ್ನವರ ಮೇಲಂತೂ ನೀನು ಹಗೆ ಕಾರದಿದ್ದರೆ ನಿನ್ನನ್ನು ಶ್ವಾನವೆನ್ನುವುದಿಲ್ಲವೆನ್ನು. ಆದರೆ ಯಾರೂ ಇಲ್ಲದಿದ್ದರೂ ಬರಿದಾದ ರಸ್ತೆಯನ್ನು ನೋಡಿ ಬೊಗಳುವುದೇಕೆ! ನಿನಗೆ ಅತೀ ಕೆಟ್ಟ ತರಗತಿಯ ಹುಚ್ಚು ಆರಂಭಿಸಿರಬಹುದೇ ಎಂಬ ಅಂಜಿಕೆ. ಹುಚ್ಚು ಅಹುದಾದರೆ ನಿನ್ನಷ್ಟಕ್ಕೆ ನೀನು ಮಡಿವ ದಿನಗಳು ದೂರವಿಲ್ಲದಿರುವಾಗ ಸರಕಾರಕ್ಕೆ ತಿಳಿಸಿ ನಿನ್ನನ್ನು 'ಲೆಥಾಲ್ ಚೇಂಬರ್' ಎಂಬ ಮರಣದ ಮನೆಗೆ ಕಳುಹಲೇಕೆ ಎಂದು ಜನರು ಆ ರಸ್ತೆಯನ್ನೇ ಬಿಟ್ಟು ಮತ್ತೊಂದು ರಸ್ತೆಯಿಂದ ನಡೆದು ಹೋಗುವರೆಂದು ನಿನಗೆ ಕೋಪವೇ? ಇನ್ನು ನೀನು ಆ ರಸ್ತೆಗೂ ಹೋಗಿ ನಿನ್ನ ಪರಾಕ್ರಮ ತೋರಿಸ ಹೋದರೆ, ಸರಕಾರದ ದೂತರು ಬರುವ ಮೊದಲೇ ಚಿಕ್ಕ ಹೆಗ್ಗಣಗಳಾದರೂ ಮುನಿದು ನಿನ್ನನ್ನು ಸೀಳಿ ಹಾಕಿದರೆ........!

ಹೈಡಿ, ನಿನಗೀಗ ನಾಲ್ಕು ವರ್ಷ ಪ್ರಾಯ, ನಿನ್ನ ಆಯುಷ್ಯವನ್ನು ಮಾನವನ ಆಯುಷ್ಯಕ್ಕೆ ಹೋಲಿಸಿದರೆ ನಿನಗೀಗ ಇಪ್ಪತ್ತೆಂಟಾಯಿತು. ಕಳೆದೊಂದು ವರ್ಷದ ನಿನ್ನ ಆಟಗಳನ್ನು ನೋಡಿದರೆ ನೀನೀಗ ಯೌವನದ ಮಧ್ಯಾವಸ್ಥೆಯಲ್ಲಿ ಇರುವೆ. ಬೆಕ್ಕುಗಳ ವಿಷಯವಾಗಿ ನಿನ್ನ ವರ್ತನೆ ವಿಶೇಷವಾಗಿದೆ. ಹುಲಿಗಳೊಡನೆಯೂ ನೀನು ಗುರ್ರೆಂದು ಹಾರುವ ಚಿಹ್ನ ತೋರಿಸುತ್ತಿರುವುದು ಸರಿಯಲ್ಲ. ಏಕೆಂದರೆ ನಿನಗೆಷ್ಟು ಪ್ರಾಯ ಸಂದರೂ ಹುಲಿಯು ಹುಲಿಯೇ, ನಾಯಿ ಎಂಬ ನಿನ್ನ ಹೆಸರು ಯಾವ ಕಾಲಕ್ಕೂ ಅಳಿಸಿ ಹೋಗದು.

ಇದೇ ಜೂನ್ ತಿಂಗಳಲ್ಲಿ ನಿನ್ನ ಜೀವಮಾನದಲ್ಲಿ ಘಟಿಸಿದ ಅತ್ಯಂತ ಮಹತ್ವದ ಬದಲಾವಣೆಯ ಮೇಲಾದರೂ ನಿನ್ನಲ್ಲಿ ಸದ್ಬುದ್ಧಿಯುಂಟಾಗುವುದೆಂದು ನಾನೆಣಿಸಿದ್ದೆ. ನಾನಾವುದರ ಕುರಿತು ಹೇಳುತ್ತಿರುವೆನೆಂದು ನಿನಗೆ ಚೆನ್ನಾಗಿ ಗೊತ್ತಿದೆ. "ಸುಬ್ಬಿ"ಯ ಪ್ರಣಯಗೊಂದಲ, ತಿಳಿಯಿತೇ? ಸುಬ್ಬಿಯು ರಾಮರಾಯರ ಸಾಕು ನಾಯಿ ಎಂದು ನಿನ್ನ ಅಭಿಪ್ರಾಯವಾಗಿದ್ದಿರಬಹುದು. ಸುಬ್ಬಿಯು, ತಾನು ರಾಮರಾಯನ ಸಾಕು ಮಗಳು ಎಂದು

ನಿನ್ನಲ್ಲಿ ಸುಳ್ಳು ಹೇಳಿದುದನ್ನು ನೀನು ನಂಬಿದೆ. ಸತ್ಯ ತಿಳಿದಿದ್ದರೆ ನಿನ್ನ ಕಣ್ಣು ಗೊಂಬೆಗಳು ದುಃಖದಿಂದ ಒಳಗೆ ಹೋಗುತ್ತಿದ್ದುವು. ಟೈಗರ್, ಟೊನಿ, ಗುಲ್ಮದ್ ಮೊದಲಾದ ಮಹಾಶಯರೊಡನೆ ಈ ಮೊದಲು ಸುಬ್ಬಿಯು ಪ್ರಣಯ ನಾಟಕವಾಡಿದ ಕತೆಯನ್ನು ನೀನು ಕೇಳಲಿಲ್ಲ. ಸುಬ್ಬಿಯು ಸರ್ವ ಶ್ರೇಷ್ಠಳು ಎಂದು ಹಿರಿಹಿರಿ ಹಿಗ್ಗಿ ನೀನು ಮೈಯಲ್ಲಿದ್ದ ಸ್ವಲ್ಪ ಎಲುಬುಗಳನ್ನು ಮಾಂಸದಡಿಯಲ್ಲಿ ಮರೆಸಿದೆ. ನೀನು ನಂಬಿದ ಸುಬ್ಬಿಯನ್ನು ನೀನು ದಪ್ಪದ ಮುಸುಕನ್ನು ತೆಗೆದುಹಾಕಿ ನೋಡಿದರೆ ನಿನ್ನ ಪುಪ್ಪುಸವು ನಿಂತು ಹೋಗುತಿತ್ತು. ಮುಸುಕು ಬಿಳಿದಾದರೂ ಏನು! ಕಣ್ಣಿನ ಮುಂದೆ ಹಿಡಿದರೆ ಕತ್ತಲೆಯಷ್ಟೆ.

ಹೈಡಿ! ನೀನು ನಮ್ಮ ಕೊಟ್ಟಗೆಯಲ್ಲಿ ಬಿಡಾರಮಾಡಿದೆ. ಇದು ನಿನ್ನ ತೃತೀಯಾವಸ್ಥೆ. ಹಿಂದೆ ನೀನು ಸಿರೀಲ್ ಸಾಹೇಬರ ಗೇಟಿನೊಳಗಿಂದ ನನ್ನನು ನೋಡಿ ಬೊಗಳಿದ ನೆನಪು ನನಗಿದ್ದಿಲ್ಲವೆಂದು ನೀನೆಣಿಸಿದೆ. ಆದರೆ, ನನ್ನ ಕಾಲನ್ನು ನಿನ್ನ ದಿವ್ಯ ಮುಸುಡು ಚುಂಬಿಸಿಲ್ಲವೆಂಬ ಸಂತೋಷವೊಂದಿತ್ತು. ಎಷ್ಟೆಂದರೂ ಶ್ವಾನವೆಂದು ನೆನಸಿ ನಿನ್ನನ್ನು ಸಾಕಿದೆ. ಆದರೆ, ನೆರೆಕರೆಯ ಸಂಕಣ್ಣನ ಗಡಂಗಿಗೆ ನೀನು ನಡು ಮಧ್ಯಾಹ್ನ ಹೋಗಿ ಹಿಂಬದಿಯ ಕೊಠಡಿಯಲ್ಲಿರಿಸಿದ ಹೆಂಡಕ್ಕೆ ಬಾಯಿಕೊಡುವೆಯೆಂದು ನಾನೆಣಿಸಲಿಲ್ಲ, ಸಂಕಣ್ಣನೂ ಎಣಿಸಲಿಲ್ಲ. ಹೆಂಡ ಕುಡಿದವನು ಹೃದಯದಲ್ಲಿ ಮುಚ್ಚುಮರೆಯಿಲ್ಲದೆ ಎಲ್ಲವನ್ನು ಕಾರುವನು ಎಂದಾದರೂ ನಿನ್ನ ವಿಷಯದಲ್ಲಿ ನಂಬಿದ್ದೆ. ಆ ನನ್ನ ನಂಬಿಗೆಯನ್ನೂ ನೀನು ಮಣ್ಣುಪಾಲು ಮಾಡಿದೆ. ಹೆಂಡವು ಒಬ್ಬನಲ್ಲಿ ಹುದುಗಿರುವ ಸದ್ಗುಣಗಳನ್ನೂ ಮೇಲಕ್ಕೆತ್ತಿ ತರುವುದೆಂಬುದನ್ನು ಕೂಡ ನೀನು ಸುಳ್ಳೆಂದು ರುಜುಪಡಿಸಿದೆ. ಆ ದಿನ ನೀನು ಮಾಡಿದುದೇನು? ಕೆಲ ಸಮಯದ ವರೆಗೆ ನೀನು ನಿರ್ಲಜ್ಜತನದಿಂದ ಅಂಗಾತ ಮಲಗಿ, ನಾಲ್ಕೂ ಕಾಲುಗಳನ್ನು ಆಕಾಶಕ್ಕೆತ್ತಿದೆ. ಅನಂತರ ಫಕ್ಕನೆ ಗಾಳಿ ಬಂದು ದೋಣಿಯು ಮುಂದೆ ಸಾಗಿದಂತೆ ಜಗುಲಿ ಮೇಲಿಂದ ಎದ್ದು ಅಂಗಳಕ್ಕೋಡಿದೆ. ಸ್ವಲ್ಪ ಸಮಯದ ಅನಂತರ ನಿನ್ನನ್ನು ನಾನು ಬಾವಿ ಬಳಿಯಲ್ಲಿ ಮೂರ್ಛೆಹೋದುದನ್ನು ಕಂಡೆ. ನೀನು ಇಪ್ಪತ್ತನಾಲ್ಕು ತಾಸುಗಳ ತನಕ ಮರಣಹೊಂದುವಿಯೆಂದು ನಾನೆಣಿಸಿರಲಿಲ್ಲ. ಎದ್ದ ಮೇಲಾ

ವರೂ ನೀನು ಕುಡಿಕತನ ಬಿಟ್ಟು ಸನ್ಮಾರ್ಗಿಯಾಗುವ ಆಸೆಯಿತ್ತು. ಆದರೆ, ಮತ್ತೆ ಮೂರು ಬಾರಿ ಸಂಕಣ್ಣನಲ್ಲಿ ನೀನು ಕೊಳ್ಳಿ ಹೊಡೆದೆ; ಮೂರು ಬಾರಿ ನಿರ್ಲಜ್ಜತನದಿಂದ ಅಂಗಾತ ಮಲಗಿ ಕಾಲುಗಳನ್ನು ಆಕಾಶಕ್ಕೆತ್ತಿದೆ; ಮೂರು ಬಾರಿ ಇಪ್ಪತ್ತನಾಲ್ಕು ತಾಸು ಮರಣಹೊಂದಿ ಬದುಕಿದೆ. ಹೆಂಡ ಕುಡಿಕರನ್ನು ಮನೆ ಕಾವಲಿಗೆ ಇರಿಸುವ ಸಹೃದಯವಿಲ್ಲದೆ ನಿನ್ನನ್ನು ನಾನು ತೋಮರನೆಂಬ ದಯಾಳುವಿನ ಕೈಗೆ ಒಪ್ಪಿಸಿದೆ.

• ತೋಮರನಲ್ಲಿ ನೀನು ಅತ್ಯಾಶ್ಚರ್ಯಕರವಾಗಿ ಬೆಳೆದಿರುವೆಯೆಂದು ಈಗ ಕೇಳಿದ್ದೇನೆ. ಮೈ ಬೆಳೆದವರಿಗೆ ಬುದ್ಧಿಯೂ ಕ್ಷೀಣವಾಗುವುದೆಂಬುದನ್ನು ಮಾತ್ರ ನೀನು ಸತ್ಯಗೊಳಿಸಿರುವೆಯೆಂದೂ ಕೇಳಿದ್ದೇನೆ. ಒಮ್ಮೊಮ್ಮೆ ನೀನು ನಿನ್ನ ಹಳೆ ಯಜಮಾನರನ್ನು ನೆನಸಿ, ಆಕಾಶಕ್ಕೆ ಮುಸುಡೆತ್ತಿ ಗೋಳಿಡುವೆಯೆಂಬುದು ನಿಜವಾದರೂ, ನಿನ್ನ ಹಳೆ ಯಜಮಾನರಂಥವರನ್ನು ಕಂಡರೂ ಕಚ್ಚಲೂ ನೆಗೆಯುವಿಯೆಂದು ಕೇಳಿ ದುಃಖವಾಗುತ್ತದೆ. ತೋಮರನ ಕೆಂಬಣ್ಣದ ಅರಿವೆ ನೋಡಿ ನಿನಗೆ ಆನಂದವಾಗಿದೆಯೆಂದೂ, ಬಿಳಿಯರಿವೆ ನೋಡಿದರೆ ನಿನ್ನ ಹಗೆತನ ಹೊರಬೀಳುವುದೆಂದೂ ಕೇಳಿದ್ದೇನೆ. ತೋಮರನಲ್ಲಿ ನಿನಗೆ ಸದ್ಬುದ್ಧಿಯುಂಟಾಗದೆಂದು ಲೋಕದ ಅಭಿಪ್ರಾಯ. ತೋಮರನು ಊರಿಗೆಲ್ಲ ಚಾಂಡಾಲ; ಆ ಚಾಂಡಾಲನಿಗೆ ನೀನು ಬಲಗೈ. ಆದರೆ, ಒಂದು ಭಯಂಕರ ಸತ್ಯವನ್ನು ನೀನು ಮನಗಾಣಬೇಕು ಹೈಡಿ! ತೋಮರನು ನಿನ್ನನ್ನು ಒಂದು ದಿನ ಕಡಿದು ತಿನ್ನಲಿಕ್ಕಾಗಿಯೇ ಹೀಗೆ ಬೆಳೆಸಿದ್ದಾನೆ. ಆದರೆ, ಹಿಂದಿನವರು ನಿನಗೆ ಕೊಟ್ಟ ಅಮೃತವು ನಿನ್ನಲ್ಲಿ ವಿಷವಾಗಿ ಮಾರ್ಪಾಟುಹೊಂದಿದುದನ್ನು ತೋಮರನು ತಿಳಿದಿಲ್ಲ. ಹಾವಿಗೆ ಹಾಲೆರೆದರೆ ವಿಷ ವರ್ಧಿಸುತ್ತದೆಯೆಂದು ಸಂಸ್ಕೃತನಲ್ಲದ ತೋಮರನಿಗೆ ಹೇಗೆ ಗೊತ್ತು? ತೋಮರನಿಗೆ ಸತ್ಸಂಗವಿಲ್ಲ; ವ್ಯಾಸಂಗವಿಲ್ಲ. ಅವನಿಗೂ ನಿನಗೂ ಸರೀ ಹೋಗುವುದು. ನಿನ್ನನ್ನು ಒಂದು ದಿನ ತೋಮರನು ಕಡಿದಾಗ ನಿನ್ನ ಲೀಲೆ ಮುಗಿವುದು; ನಿನ್ನನ್ನುಂಡು ವಿಷವೇರಿ ತೋಮರನ ಲೀಲೆಯೂ ಮುಗಿವುದು. ಹೈಡಿ! ನಿನಗೆ ಎಚ್ಚರದ ಮಾತಾಗಿ ಈ ಪತ್ರ ಬರೆದಿದ್ದೇನೆ. ನೀನು ಬದುಕಿದರೆ ನಿನ್ನ ಸುಬ್ಬಿಗಷ್ಟು ಅನ್ನ; ಸತ್ತರೆ ಲೋಕಕ್ಕೆ ಕ್ಷೇಮ.

ಇತಿ, ನಿನ್ನ ಹಳೆ ಯಜಮಾನ.

೯ ಜಯಾಪಜಯುಗಳು.

ನ್ಯೂಸ್ ಏಜಂಟನು ನನ್ನ 'ಪಂಚ ಕೇಸರಿ' ಪತ್ರಿಕೆಯನ್ನು ಆ ವಾರ ಕೊಡಲು ಮರೆತನು. "ಪಂಚ ಕೇಸರಿ" ಎಂದರೆ ನನ್ನ ಮೆಚ್ಚಿನ ಪತ್ರಿಕೆ. ಐದು ಸಿಂಹಗಳ ಚಿತ್ರ; ಸಿಂಹಗಳಂತಹ ಐವರು ಧೀರ ಮನುಷ್ಯರು ಅದರಲ್ಲಿ ಕುಳಿತು ಸಿಕ್ಕ ಸಿಕ್ಕವರ ಚರ್ಮ ಹರಿದು ನೆತ್ತರು ಕುಡಿಯುತಿದ್ದರು. "ಪಂಚ ಕೇಸರಿ" ಹೆಸರೆತ್ತುತ್ತಲೇ ಎಲ್ಲರಿಗೆ ಭಯ, ಅದನ್ನು ಕೊಂಡು ಕೊಳ್ಳುವವ ನಾನೊಬ್ಬ.

ದಾರಿಯಲ್ಲಿ ಬರುವಾಗ ಕೀಣು ಸಿಕ್ಕಿದನು. ಅವನ ಕೈಯಲ್ಲಿ "ಶ್ರೀಮನ್ನಾರಾಯಣ" ಎಂಬ ಹೆಸರಿನ ಪತ್ರಿಕೆ ಇತ್ತು. ನನಗೆ "ಪಂಚ ಕೇಸರಿ" ದೊರೆಯದಿದ್ದರೆ ಬೇರೇನಾದರೂ ಬೇಕೇ ಬೇಕು!

"ಶ್ರೀಮನ್ನಾರಾಯಣ ಎಂಬ ಹೆಸರಿನ ಪತ್ರಿಕೆಯೂ ಇರುವುದೇ" ಎಂದು ಕೇಳಿದೆ.

"ಇದ್ದರೇನಾಯಿತು? ಸ್ವಪ್ನತರಂಗ, ಕೊಲೆಗಾರ, ಪಕ್ಷಪಾತಿ, ಮುಷ್ಕರ ಮೊದಲಾದ ಹೆಸರಿನ ಪತ್ರಿಕೆಗಳಿರಬಹುದೇ? ಅವುಗಳಿಗೇನು ಅರ್ಥ?" ಎಂದು ಕೀಣುವಿನ ಪ್ರಶ್ನೆ.

ಬೆಳಿಗ್ಗೆ ಜಗಳಕ್ಕೆ ಹೊರಟವನಂತೆ ಕಂಡಿತು. "ಬೇಸರವಿಲ್ಲ. ಆದರೆ, ನನಗೊಂದು ಪತ್ರಿಕೆ ಈಗ ಬೇಕು. ಏನಾಗಬಹುದು?" ಎಂದು ಕೇಳಿದೆ.

ಕೀಣು ದೊಡ್ಡ ಮನುಷ್ಯ. ಹೊಳಪಿನ ಕನ್ನಡಕವಿಟ್ಟು, ಆಲೋಚಿಸಿ, ಉತ್ತರ ಕೊಡುವವನು. ಮೂರು ನಿಮಿಷ, ಕನ್ನಡಕದೊಳಗೆ ರೆಪ್ಪೆ ಮುಚ್ಚಿ, ಮತ್ತೆ ತೆರೆದು ಹೀಗೆಂದನು:

"ಎಲ್ಲ ನಿನ್ನ ಅಭಿರುಚಿ. ಸ್ಪೈನಿನಲ್ಲಿ ದಂಗೆಖೋರರಿಗೆ ಜಯವನ್ನ ಪೇಕ್ಷಿಸುವೆಯೋ ಸರಕಾರಕ್ಕೋ? ದಂಗೆಖೋರರ ಜಯವನ್ನೋದುವಿಯಾ ದರೆ "ಕಲ್ಯಾಣ" ಪತ್ರಿಕೆ ನೋಡಬೇಕು; ಸ್ಪೈನ್ ಯುದ್ಧವಾರಂಭವಾ ದಂದಿನಿಂದ ಆ ಪತ್ರಿಕೆಗೆ ದಂಗೆಖೋರರೇ ಜಯಹೊಂದಿದ ಸುದ್ದಿ ಬರಹತ್ತಿದೆ. ಸರಕಾರವು ಗೆದ್ದ ವಾರ್ತೆ ಬೇಕಾದರೆ "ದಾಸ್ಯಭಂಜನ"

ವನ್ನೋದಬೇಕು, ಸರಕಾರವು ಒಂದೇ ಸವನೆ ಮುಂದುವರಿಯುತ್ತಿದೆಯೆಂದು ಹಾಸ್ಯಭಂಜನವೆನ್ನುವಾಗ, ಆ ಪತ್ರಿಕೆ ಬರೆದಷ್ಟೆ ಮುಂದಕ್ಕೆ ಸರಕಾರದ ಸೈನ್ಯಗಳು ಕ್ರಮಿಸಿದ್ದುದಾದರೆ ಇಷ್ಟರೊಳಗೆ ಸಮುದ್ರದಲ್ಲಿ ಮುಳುಗಿ ಸಾಯಬೇಕಿತ್ತು.''

ನನಗೆ ಸ್ಪೈನಿನ ವಿಷಯ ತಿಳಿದುಕೊಳ್ಳುವ ಕುತೂಹಲವಿಲ್ಲವೆಂದೆ.

ಕೀಣು ಹೇಳಿದ: "ನೀನೊಬ್ಬನೇ ಅಲ್ಲ. ನನ್ನ ಹಲವು ಸ್ನೇಹಿತರು ಈಗ ಚೀನಕ್ಕೆ ವರ್ಗಾಯಿಸಿಕೊಂಡಿದ್ದಾರೆ. ನಿನಗೆ ಯಾರು ಗೆದ್ದ ವಾರ್ತೆ ಬೇಕು, ಚೀನೀಯರೇ ಜಾಪಾನಿಯರೇ? ಭಾಸ್ಕರ ಪತ್ರಿಕೆಯಲ್ಲಿ ಜಾಪಾನು ಗೆದ್ದಿದೆ, ಅಶೋಕ ಪತ್ರಿಕೆಯಲ್ಲಿ ಚೀನ ಗೆದ್ದಿದೆ; ಸತ್ಯ ದರ್ಪಣದಲ್ಲಿ ಎರಡೂ ಸಮಬಲಿಗಳಾಗಿ ನಿಂತಲ್ಲೇ ನಿಂತು ಕಾದಾಡುತ್ತಿವೆ; ಜಗನ್ಮಾಯೆಯಲ್ಲಿ ಸೋಲು ಗೆಲವುಗಳ ಸುದ್ದಿಗಳೇನೂ ಇಲ್ಲದೆ "ಜಾಪಾನು ಗೆದ್ದರೇನಾಗುವುದು?" ಎಂಬ ಶಿರೋನಾಮೆಯ ಕೆಳಗೆ 'ಸೂಪಿ' ಎಂಬವರ ವಿವೇಚನಾತ್ಮಕ ಲೇಖಗಳಿವೆ. ''ರಾಧಾಬಾಯಿ''ಗಿಂತ ''ಲೀಲಾವತಿ''ಯಲ್ಲಿ ಹೆಚ್ಚು ಚೀನೀ ವಿಮಾನಗಳೊಡೆದಿವೆ........!

"ನನಗೆ ಜಪಾನ್ ಜಯದ ಮೇಲೆ ವಿಶೇಷ ಆಸಕ್ತಿಯಿಲ್ಲ"ವೆಂದೆ.

"ಹಾಗಾದರೆ ನಿನಗೆ ಪ್ರಳಯಾಗ್ನಿಯೇ ಯೋಗ್ಯ. ಪ್ರಳಯಾಗ್ನಿಯಲ್ಲಿ ಜಪಾನು ಸೋಲುತ್ತಾ ಇದೆ. ಜಪಾನ್ ಸೈನ್ಯದಲ್ಲಿ ದಂಗೆಯೇಳುವುದೆಂದೂ ಬಂದೂಕು—ಕೋವಿ ಮದ್ದು—ದುಡ್ಡು ಎಲ್ಲವೂ ಮುಗಿದಿದೆಯೆಂದೂ ಗಾಬರಿಪಟ್ಟ ಪಂಕ್ತಿಗಳೇ ಹೆಚ್ಚು. ನಿನಗೆ ಚೀನದ ವಿಷಯ ಸ್ವಲ್ಪ ಸುಖ ಸಿಗಬೇಕಾದರೆ ಪ್ರಳಯಾಗ್ನಿಗೆ ಮನಸ್ಸು ಮಾಡಬಹುದು."

''ಪ್ರಳಯಾಗ್ನಿ ಆರುವಂತೆ ದೇವರಲ್ಲಿ ಪ್ರಾರ್ಥನೆ."

ಕೀಣುವಿಗೇನೂ ದುಃಖವಾಗಲಿಲ್ಲ. ''ರುಧಿರೋದ್ಗಾರ'' ಪತ್ರಿಕೆಯನ್ನು ನೀನು ಖಂಡಿತ ಮೆಚ್ಚಬೇಕು. ಈ ಪತ್ರಿಕೆ ಎರಡೂ ಕಡೆಗಳವರನ್ನು ಚೆನ್ನಾಗಿ ಟೀಕಿಸುತ್ತ, ಎರಡೂ ಕಡೆಗಳವರು ಬಂಡವಾಳಶಾಹಿ ಪದ್ಧತಿಯನ್ನು ಬಿಡದೆ ಮೋಕ್ಷವಿಲ್ಲವೆನ್ನುತ್ತದೆ. ರುಧಿರೋದ್ಗಾರಿಯ ವರದಿಯಂತೆ, ಚೀನ ಗೆದ್ದುದಿಲ್ಲ. ಜಪಾನ್ ಸೈನ್ಯದ ಹತ್ತರಲ್ಲಿ ಒಂಭತ್ತಂಶ ಕಾಣೆ!"

ಕೀಣು ಉಸಿರಿಗಾಗಿ ತಡೆದನು ಎರಡೂ ಕಡೆಯುವರು ನನ್ನ ಮೇಲೆ ಪರಿಣಾಮ ಮಾಡಿಲ್ಲವೆಂದೆ. "ಕ್ರಿಕೆಟ್ ಸುದ್ದಿ ಎಲ್ಲಿದೆ? ಮೊನ್ನೆ ಗಾರ್ನೆಟ್ ಶಾಯರು ವೆಸೆಕ್ಸ್ ಹನ್ನೊಂದನ್ನು ಸೋಲಿಸಿತೇ? ಎಂದು ಕೇಳಿದೆ.

ಕೀಣುವಿನ ಮುಖ ಕಂದಿತು. "ಎಲ್ಲ ಪತ್ರಿಕೆಗಳಲ್ಲಿ ಗಾರ್ನೆಟ್ ಶಾಯರು ಸೋತಿತೆಂದು ನನಗೆ ಸಂದೇಹ. ಅದು ಗೆದ್ದಿತೆಂದು ಪ್ರಕಟಿಸುವ ಔದಾರ್ಯ ಯಾರಲ್ಲಿಯೂ ಬರಲಿಲ್ಲ. ಬರುವ ವರುಷ ಪತ್ರಿಕೆಗಳವರು, ಸ್ಪರ್ಧಾಬುದ್ಧಿಯಿಂದ ಕ್ರಿಕೆಟ್ ಸುದ್ದಿಗಳನ್ನು ಪ್ರಕಟಿಸುವರೆಂದು ನನ್ನ ಭರವಸೆ. ಅದರ ಲಕ್ಷಣಗಳೀಗಲೇ ಕಾಣುತ್ತಿವೆ. ಒಂದು ಪತ್ರಿಕೆಯ ವರದಿಯಂತೆ ಮೊನ್ನೆ ಮಣ್ಣಗುಡ್ಡೆಯಲ್ಲಿ ತೆಂಗಿನಮರ ಬಿದ್ದ ವಾರ್ತೆಯಲ್ಲಿ ಮರವೇರಿದವನು ಆಸ್ಪತ್ರೆಗೊಯ್ಯಲ್ಪಟ್ಟಿದ್ದಾನೆ. ಮತ್ತೊಂದು ಪತ್ರಿಕೆಯಲ್ಲಾತನು ಮೋದಂಡಾವಸ್ಥೆಯಲ್ಲಿದ್ದಾನೆ; ಮೂರನೆ ಪತ್ರಿಕೆಯಲ್ಲಿ ಮರಣಹೊಂದಿದ್ದಾನೆ; ನಾಲ್ಕನೆ ಪತ್ರಿಕೆಯಲ್ಲಿ ಮರದ ಮೇಲೇ ಅವನು ಸತ್ತಿದ್ದಾನೆ; ಐದನೇ ಪತ್ರಿಕೆಯಲ್ಲಿ ಅವನು ಮರವೇರಲೂ ಇಲ್ಲ—ಸಾಯಲೂ ಇಲ್ಲ."

ತಲೆ ತಿರುಗಿ ನಾನು "ಸರಿ ಯಾವುದು?" ಎಂದು ಕೇಳಿದೆ.

"ಸರಿಯೆಂದರೆ,—(೧) ಮರವು ಮನುಷ್ಯನ ಮೇಲೆ ಬಿದ್ದರೆ ಸಾಯುತ್ತಾನೆ; ಸತ್ತರೆ ಹೂಳುತ್ತಾರೆ ಅಥವಾ ಸುಡುತ್ತಾರೆ" ಎಂದ.

---

೧೦. ಮದರಾಸಿನಲ್ಲಿ ಕಾಫಿ

ಬೊಂಬಾಯಿಯಲ್ಲಿ ಪ್ರತಿಯೊಂದೂ ಚಹಕ್ಕಾಗಿ ನಿಲ್ಲುವುದಾದರೆ, ಮದರಾಸಿನಲ್ಲಿ ಪ್ರತಿಯೊಂದೂ ಕಾಫಿಯಿಂದ ಆರಂಭವಾಗುತ್ತದೆ. ಪ್ರತಿಯೊಬ್ಬರಿಗೆ ಇಂಗ್ಲಿಷು ಬರುತ್ತದೆ. ತಮಿಳು ತಿಳಿಯದವರು ಇಂಗ್ಲಿಷಿನಲ್ಲಿ ಮಾತಾಡಿದರೆ, ಮದರಾಸಿಗಳಿಗೆ ತಿಳಿಯುತ್ತದೆ; ತಮಿಳಿನಲ್ಲಿ ಉತ್ತರಕೊಡುತ್ತಾರೆ. ಅಂದರೆ, ನೀವು ನಿಮಗೆ ತಮಿಳು ತಿಳಿಯದಿದ್ದರೆ, ತಮಿಳರೊಡನೆ ಇಂಗ್ಲಿಷಿನಲ್ಲಿ ನಿಮ್ಮ ಅಭಿಪ್ರಾಯಗಳನ್ನು ತಿಳಿಸಬಹುದು, ಒಮ್ಮೆ ಮಾತ್ರ ತಿಳಿಸಬಹುದು; ಅನಂತರ ಅವರು ಕೊಟ್ಟ ಉತ್ತರದ ಶಬ್ದ ಮಾತ್ರ ಕೇಳ

ಬಹುದು. ಈ ಪರಮಾನಂದಕರ ಸ್ಥಿತಿಯಲ್ಲಿ ಅವರು ತೃಪ್ತರಾಗಿರುವರು. ಈ ಸ್ಥಿತಿಯಿಂದ ಕದಲುವ ಯೋಚನೆಯಿಲ್ಲದೆ ಕೆಲವರು ಹಿಂದಿ ವಿರೋಧ ಚಳವಳವನ್ನೂ ನಡೆಸುತ್ತಿರುವರೆಂದು ಪತ್ರಿಕೆಗಳು ಹೇಳುತ್ತಿವೆ.

ಮದರಾಸಿನಲ್ಲಿ ನಮ್ಮ ಸಂಸ್ಥೆಯ ೩೦ ಗಿರಾಕಿಗಳಿರುವರು. ಎಲ್ಲ ಗಿರಾಕಿಗಳನ್ನು 'ಮೊಖತಃ' ಕಾಣಬೇಕೆಂದು ಆಸೆ. ಹತ್ತು ದಿನ ನಿಲ್ಲ ಬಹುದು ಎಂದು ಹೇಳಿದ್ದಕ್ಕೆ ಹೆಂಡತಿಯೂ ಬರುವೆನೆಂದಳು. ಆಕೆಗೆ ಮದರಾಸಿನ ಆಕಾರ ದೊಡ್ಡದಿದ್ದಂತೆ—ಪ್ರಯಾಣದ ವಿಕಾರಗಳೂ ಇದೆ ಯೆಂದರೆ ಕೇಳಲಿಲ್ಲ. ನೀವು ವಿವಾಹವಾಗುವಾಗ, ಮುಂದೆ ಬರಬಹು ದಾದ ಹಲವು ಕಿರುಕುಳಗಳನ್ನೂ ಆಗಾಗ್ಗೆ ವಿವಾಹವಾಗುವ ನಿರ್ಧಾರ ಮಾಡಬೇಕು. ಆಗಬಹುದೆಂದೆ. ಹೆಂಡತಿ ಹೊರಟಳು; ನಾನೂ ಹೊರಟೆ.

ಮದರಾಸಿನಲ್ಲಿ ಕೋದಂಡ ಇದ್ದಾನೆ. ಕೋದಂಡನು ನನಗೇನೋ ರೀತಿಯಲ್ಲಿ ಆಗಬೇಕು. ಕೋದಂಡನನ್ನು ಕಂಡರೆ ನನಗಾಗದಿದ್ದರೂ, ಮದರಾಸಿನಲ್ಲಿ ಹಲವು ವರುಷ ಇದ್ದವನೆಂದು ಈಗ ಬೇಕಾದನು. ರೈಲು ಬಂಡಿಯು, ಕೆಲಕಡೆಗಳಲ್ಲಿ ಘಂಟೆಗೆ ೩೦ ಮೈಲುಗಳ ವೇಗದಲ್ಲಿಯೂ ಕೆಲಕಡೆಗಳಲ್ಲಿ ಫರ್ಲಾಂಗ್ ವೇಗದಲ್ಲಿಯೂ ಓಡುತ್ತ (ಈ ವೇಗವು ಹವೆ, ಸ್ಥಳ, ರಸ್ತೆಯ ದುರುಸ್ತಿ ಯಾ ನಾದುರುಸ್ತಿ ಇವೇ ಮೊದಲಾದುವನ್ನು ಹೊಂದಿಕೊಂಡಿದೆ) ಮರುದಿನ ಬೆಳಿಗ್ಗೆ ಮದರಾಸಿಗೆ ತಲಪಲು, ನಾವು ಕೋದಂಡನನ್ನು ಭೇಟಿಯಾಗಿ, ಅವನ ಮನೆಗೆ ಹೋದೆವು.

ಹೋದ ಕೂಡಲೇ ನಾನು, ಆ ದಿನ ಕಾಣಬೇಕಾದ ಮೂವತ್ತು ಗಿರಾಕಿಗಳ ಪಟ್ಟಿಯನ್ನು ತೆಗೆದು ನೋಡಿದೆ. ಈ ಮೂವತ್ತು ಮಂದಿ ಯನ್ನು ಕಾಣುತ್ತಲೇ ಔಪಚಾರಿಕವಾಗಿ ಹೇಳಬೇಕಾದ "ಹೇಗಿರುವಿರಿ?"— "ಆರೋಗ್ಯವೇ?"—"ನಿಮ್ಮ ಅಂಗಡಿ ಎಷ್ಟು ವಿಶಾಲವಾಗಿದೆ!"—"ಎಷ್ಟು ತಂಪು!"—"ತಮ್ಮಂತಹ ಪ್ರಸಿದ್ಧ ಮನುಷ್ಯರನ್ನು ಕಾಣುವ ಸುಯೋಗಕ್ಕೆ ಆನಂದವಾಗಿದೆ"—ಇಷ್ಟನ್ನೆಲ್ಲ ಕೋದಂಡನ ಸಹಾಯದಿಂದ ತಮಿಳಿನಲ್ಲಿ ಬಾಯಿಪಾಟಮಾಡಿಕೊಂಡೆ. ಬಾಯಿಪಾಟಕ್ಕೆ ಒಂದು ದಿನ ಬೇಕಾದ ಕಾರಣ, ಗಿರಾಕಿಗಳನ್ನು ಮರುದಿನ ಕಾಣುವುದೆಂದು ನಿರ್ಧಾರಮಾಡಿದೆ.

ಮರುದಿನ, ಹೊರಡುವ ಮೊದಲು ನಮಗೆ ಮನೆಯಲ್ಲೇ ಕಾಫಿಯಾಯಿತು. ಗಿರಾಕಿಗಳು ವೀಳ್ಯದೆಲೆ ಕೊಡುವರೆಂದು (ತಮಿಳರಿಗೆ ವೀಳ್ಯದ ಅಭ್ಯಾಸ ಹೆಚ್ಚು)—ಮನೆಯಲ್ಲಿ ಅಭ್ಯಾಸಕ್ಕಾಗಿ ತಾಂಬೂಲ ಹಾಕಿಕೊಂಡೆ. ಅಲ್ಲಿಂದ ನಮ್ಮ ಪ್ರಯಾಣ ಮೊದಲನೆ ಗಿರಾಕಿಯಲ್ಲಿಗೆ.

ಷಣ್ಮುಗನು (ಮೊದಲನೆ ಗಿರಾಕಿ) ಕುಶಲ ವಾರ್ತೆಗೆ ಮೊದಲಾಗಿಯೇ ಒಂದು ಕಪ್ ಕಾಫಿ ಕೊಟ್ಟನು. ಇಲ್ಲಿಂದ ನಾನು ನಡೆದುದನ್ನು ನಡೆದಂತೆ ವಿವರಿಸುತ್ತೇನೆ. ನಾನೂ ಕೋದಂಡನೂ ಕೊಂಡುಡೆ ವೆಂಕಟಪ್ಪ ಚೆಟ್ಟಿಯಾರರಲ್ಲಿಗೂ, ಮುರಿಗಪ್ಪ ನಾದರರಲ್ಲಿಗೂ, ರಾಮಸ್ವಾಮಿ—ಸೋಮನಾದನ್ ಕಂಪೆನಿಗೂ, ಪುಣ್ಯಕೋಟಿ ಪಿಳ್ಳೈಯವರಲ್ಲಿಗೂ ಶಂಕರನ್ ಗುಣಾವಲೇದುವರಲ್ಲಿಗೂ–ಇನ್ನೂ ನಾಲ್ಕು ಕಡೆಗೂ ಹೋಗುತ್ತೇವೆ. ಎಲ್ಲ ಕಡೆಯಲ್ಲಿಯೂ ಕಾಫಿಯಿಂದ ಕೆಲಸವಾರಂಭವಾಗುತ್ತದೆ. ಸಿಂಗಾರವೇಲುರಲ್ಲಿಗೆ ಬಂದಾಗ ನನ್ನ ಹಸಿವೆಲ್ಲ ಇಂಗಿದೆ. ಅಲ್ಲಿಗೆ ಹೋದ ಕೂಡಲೇ ನಾನು ನಮಸ್ಕಾರದೊಂದಿಗೇ ಕಾಫಿ ಬೇಡವೆನ್ನುತ್ತೇನೆ. "ನಾನು ಬಡವನೆಂನು ತಾವು ಹೀಗೆ ಕಾಫಿ ನಿರಾಕರಿಸಿದಿರಾ?" ಎಂದು ಸಿಂಗಾರವೇಲು ಕೇಳುತ್ತಾನೆ. ಅವನುಟ್ಟ ಮುಂಡಿನ ಜರತಾರಿಯೂ ನನ್ನನ್ನು ಇಣಿಕಿಣಿಕಿ ನೋಡಿ ನೊಂದಂತೆ ಕಾಣುತ್ತಿದೆ. ನಾನು ಕೋದಂಡನ ಮೂಲಕ ನನ್ನ ದೇಹಸ್ಥಿತಿಯನ್ನು ಸಿಂಗಾರವೇಲುವಿಗೆ ವರ್ಣಿಸುತ್ತೇನೆ. ಸಿಂಗಾರವೇಲುವು ಕಾಲುತಾಸಿನ ತನಕ ಒಂದು ಭಾಷಣಮಾಡುತ್ತಾನೆ. ಕೋದಂಡನು ಅದನ್ನು ಕನ್ನಡದಲ್ಲಿ ವಿವರಿಸುತ್ತಾನೆ. "ಖಾವಂದರು ಈ ಬಡವನ ಕಾಫಿಯನ್ನು ಯಾವ ಸಬಬಿನ ಮೇಲೂ ನಿರಾಕರಿಸಬಾರದು"—ಎಂಬುದು ಆ ಭಾಷಣದ ಸಾರಾಂಶವಂತೆ.

ಸಿಂಗಾರ ವೇಲುವಿನ ಅಂಗಡಿಯನ್ನು ಬಿಟ್ಟು ನಾವು ಹೊರಡುತ್ತೇವೆ. ನನ್ನ ಸೈರಣಾಶಕ್ತಿ ಈಗ ಪೂರ್ಣ ಮುಗಿದಿದೆಯೆಂದೂ, ನಾನು ಹನ್ನೊಂದು ಕಪ್ ಕಾಫಿ ಕುಡಿದಾಯಿತೆಂದೂ—ಇನ್ನು ಯಾವ ಕರುಣಾಳುವೂ ನನಗೆ ಕಾಫಿಗಾಗಿ ಒತ್ತಾಯಮಾಡಲಾರನೆಂದೂ ನಾನು ಕೋದಂಡನೊಡನೆ ಹೇಳುತ್ತೇನೆ. ಕೋದಂಡನ ಅಭಿಪ್ರಾಯವೇ ಬೇರೆಯಿದೆ. ಇಷ್ಟರೊಳಗೇ ನಾನು ಹನ್ನೊಂದು ಕಡೆಯಲ್ಲಿ ಕಾಫಿ ತೆಗೆದುಕೊಂಡಿರುವೆನೆಂಬ ವದಂತಿಯು

ನಗರದಲ್ಲೆಲ್ಲ ಹರಡಿರಬಹುದಾದ ಕಾರಣ, ಇನ್ನುಳಿದ ಗಿರಾಕಿಗಳ ಆತಿಥ್ಯ ವನ್ನು ತಿರಸ್ಕರಿಸುವುದು ಘಾತುಕತನವಾದೀತೆಂದು ಕೋದಂಡನು ನನಗೆ ಮದರಾಸ್ ಮರ್ಯಾದೆಯ ಕಿಂಚಿತ್ ಮಾಹಿತಿ ಹೇಳುತ್ತಾನೆ. ನನ್ನ ವ್ಯಾಪಾರವೆಲ್ಲ ನಾನು ಕಾಫಿ ಕುಡಿವ ಧೈರ್ಯ-ಸ್ಥೈರ್ಯಗಳ ಮೇಲೆ ಹೊಂದಿಕೊಂಡಿಹೆಯೆಂದೂ ನನಗೆ ಹಿತವಾದ ಹೇಳುತ್ತಾನೆ.

ಹಗಲು ಮುಂಪರಿದಿದೆ. ಅಪರಾಹ್ನ ಘಂಟೆ ನಾಲ್ಕಕ್ಕೆ ನಾವು ವಿನಾಯಗಂಗ್ರಮಣಿಯ ಸಂಸ್ಥೆಗೆ ಬಂದಿದ್ದೇವೆ. ಗ್ರಮಣಿಯು ನಮ್ಮ ಹಿನೇ ಗಿರಾಕಿ. ಗ್ರಮಣಿಯಲ್ಲಿಗೆ ಬರುವಷ್ಟರಲ್ಲಿ ನನ್ನೊಳಗೆ ಅಖಂಡ ವೈರಾಗ್ಯ ಹುಟ್ಟದೆ. ಇನ್ನೂ ಒಂದು ಕಪ್ ಕಾಫಿ ಕುಡಿವ ಬದಲಾಗಿ ನಾನು ನನ್ನ ವ್ಯಾಪಾರ—ನನ್ನ ಹೆಂಡತಿಮಕ್ಕಳು—ಮನೆಮಾರು—ಎಲ್ಲ ವನ್ನೂ ತ್ಯಜಿಸಲು ಸಿದ್ಧನಾಗಿದ್ದೇನೆ. ಗ್ರಮಣಿಯು ಕಾಫಿಯ ರಜತೋ ತ್ಸವಕ್ಕೆ ಹಿನೇ ಕಪ್ಪನ್ನು ತಂದಾಗ ನಾನು ವಿನಯಪೂರ್ವಕ ತಿರಸ್ಕರಿಸು ತ್ತೇನೆ. ನಾನು ಕಾಫಿ ಬೇಡವೆಂಬುದು ಗ್ರಮಣಿಗೆ ಮೊದಲು ತಮಾಷೆ ಯೆಂದು ಕಾಣುತ್ತಿದೆ; ಅನಂತರ ಆಶ್ಚರ್ಯವಾಗುತ್ತದೆ. ಕೊನೆಗೆ, ನಾನು ನನ್ನ "ದೊಡ್ಡಸ್ತಿಕೆ" ತೋರಿಸುವ ಸಲುವಾಗಿ ಹೀಗೆ ಮಾಡುತ್ತಿರುವೆನೆಂದು ಗ್ರಮಣಿಗೆ ಗ್ರಹಿಕೆಯಾಗುತ್ತದೆ. ನಾವು ಕಾಫಿಯ ವಿಷಯ ಒಂದು ತಾಸು ವಿವರಿಸಿ, ಗ್ರಮಣಿಯು ನನ್ನನ್ನು ಕಾಪಾಡದಿದ್ದರೆ ನನ್ನ ಆಸೆಯೇ ಇಲ್ಲವೆಂದು ಮಹಾ ದೈನ್ಯದಿಂದ ಕೂಗಿ, ಒಂದು ಕುರ್ಚಿಯಲ್ಲಿ ಮೋದಂಡಾ ವಸ್ಥೆಯಲ್ಲಿ ಬೀಳುತ್ತೇನೆ.

"ಗ್ರಮಣಿಯವರೆ, ಕೇಳಿರಿ! ನನಗೆ ಅಸ್ವಸ್ಥ! ಮರಣ ಸಮೀಪಿಸಿದೆ! ಕಾಫಿ ಕುಡಿಯಲಾರೆ! ಒಂದೇ ಒಂದು ಕಪ್ ಕುಡಿದರೆ, ಕೊನೆಯ ಗುಟುಕಾದೀತು!"—ಎಂದು ವಿನಂತಿಸುತ್ತೇನೆ.

ಗ್ರಮಣಿಗೆ ನನ್ನ ಮೇಲೆ ಕರುಣೆ ಹುಟ್ಟುತ್ತದೆ. ಅವನು ಮಹಾ ಕರುಣಾಳು. ನನ್ನನ್ನು ಕೊಲ್ಲಲು ಅವನು ಅಪೇಕ್ಷಿಸುವುದಿಲ್ಲ. ಆದರೂ, ಧಾರಾಳ ಮನಸ್ಸು ಆತನದು. ಕೆಲವು ನಿಮಿಷ ಆಲೋಚಿಸಿ, ಆತನು ತಮಿಳು ಭಾಷೆಯಲ್ಲೇನನ್ನೋ ನೌಕರನಿಗೆ ಆಜ್ಞಾಪಿಸುತ್ತಾನೆ. ಎರಡು ನಿಮಿಷದಲ್ಲಿ ನೌಕರನು ಬರುತ್ತಾನೆ. "ಇದು ಅನಪಾಯಕಾರಿ ವಸ್ತು"

ಎನ್ನುತ್ತ ಗ್ರಾಮಣಿಯು ನನಗೆ ದೊಡ್ಡ ತಟ್ಟೆಯಲ್ಲೇನೋ ಕೊಡುತ್ತಾನೆ. ನಾನು ನೋಡುತ್ತೇನೆ. ಎಮ್ಮೆಯ ಹಾಲು!

ನಾನು ಹರಿಹರಿ ಎನ್ನುವುದಿಲ್ಲ. ಬದಲಾಗಿ ಮನಸ್ಸಿನಲ್ಲೇ "ಉಷ್!" ಎಂದುಕೊಳ್ಳುತ್ತ ಧಾರಾಳ ಬೆವರುತ್ತೇನೆ. ಗ್ರಾಮಣಿಯ ಆತಿಥ್ಯವನ್ನು ತಿರಸ್ಕರಿಸಲಾರದವನಾಗುತ್ತೇನೆ. ಆ ದೊಡ್ಡ ತಟ್ಟೆ ತುಂಬ ಇರುವ ಮಹಿಷಿ ಕ್ಷೀರವನ್ನು ಪಾನಮಾಡುತ್ತೇನೆ. ಕಾಫಿಗೆ "ಪ್ರೊಹಿಬಿಶನ್" ಇಲ್ಲವೇಕೆಂದು ಚಿಂತಿಸುತ್ತೇನೆ. ಇನ್ನೈದು ಕಡೆಗಳಿಗೆ ಹೋಗಲೇ ಬೇಕಾಗಿದೆ. ಅಲ್ಲಿ ಕಾಫಿ ಬೇಡವೆಂದರೆ, ಕಾಫಿಯ ಎರಡು ಪಾಲು ಎಮ್ಮೆಯ ಅಥವಾ ಆಡಿನ ಹಾಲು ಕುಡಿಸಬಹುದೆಂದು ಬೆದರುತ್ತೇನೆ. ಉಳಿದ ಐದು ಮಂದಿ ಗಿರಾಕಿಗಳೊಡನೆಯೂ ಮತ್ತೆ ನಾನು ಕಾಫಿಗೇ ಒಪ್ಪುತ್ತೇನೆ.

ಹೇಗೂ ೩೦ ಗಿರಾಕಿಗಳೊಡನೆಯೂ ಮುಗಿಸುತ್ತೇನೆ. ಒಬ್ಬ ರಿಕ್ಷಾವಾಲನನ್ನು ಕರೆದು ಬಿದ್ದುಕೊಳ್ಳುತ್ತೇನೆ. ಕೋದಂಡನೂ ನನ್ನ ರಿಕ್ಷಾದಲ್ಲಿ ಕುಳಿತುಕೊಳ್ಳುತ್ತಾನೆ. ಕೋದಂಡನಿಗೆ ಮದರಾಸು ಅಭ್ಯಾಸ ಬಹಳ. ನನಗೆ ಮಾತ್ರ ಹೃದಯದ ಬಾಗಿಲೂ ಮಿದುಳಿನ ಬಾಗಿಲೂ ಮುಚ್ಚಿಕೊಂಡಿವೆ. ಮೂವತ್ತು ಕಪ್ ಕಾಫಿಯನ್ನೂ ದೊಡ್ಡ ತಟ್ಟೆ ಎಮ್ಮೆ ಹಾಲನ್ನೂ ಕುಡಿದು ಇಪ್ಪತ್ತನಾಲ್ಕು ತಾಸು ಉಳಿದವರಿರುವರೇ ಎಂದು ಒಂದೇ ಪ್ರಶ್ನೆಯನ್ನು ಮಾತ್ರ ನಾನು ಕೇಳಿಕೊಂಡು ಕಣ್ಮುಚ್ಚಿ ಗೃಹಾಭಿಮುಖವಾಗಿ ಸಾಗಿದ್ದೇನೆ.

ಬಾಗಿಲಲ್ಲಿ ಶ್ರೀಮತಿ ನಿಂತು "ಊಟಕ್ಕೆ ಬರಲಿಲ್ಲವೇನು" ಎಂದು ಕೇಳಿದಳು. ನಾನು ಉತ್ತರ ಕೊಡದೆ ಆಕೆಯನ್ನೇ ಅರೆಮುಚ್ಚಿದ ಕಣ್ಣುಗಳಿಂದ ನೋಡಿದೆ. "ಓ! ಬಹಳ ದಣಿದಿರುವಿರಿ. ಒಂದು ಕಪ್ ಕಾಫಿ ತಯಾರಿಸುತ್ತೇನೆ!" ಎನ್ನುತ್ತ ಅವಳು ಒಳಗೋಡಿದಳು. ನಾನು ಮೂರ್ಛೆ ಹೋದೆ.

೧೧. ಡೆಮೇಜಿಂಗ್ ಡಿಕ್ಟೇಟರ್

ನಾಟಕವಲ್ಲ—ನಿಜವಾಗಿ ನಡೆದುದು. ಆಫೀಸು ಯಜಮಾನನು "ಕಾಗದ ಬರಕೋ" ಎಂದು "ಡಿಕ್ಟೇಶನ್" ಹೇಳುತ್ತಿದ್ದಾನೆ, ನಾನು ಬರಕೊಳ್ಳುತ್ತಿದ್ದೇನೆ. ನನ್ನ ಕಣ್ಣುಗಳು ತೆರೆದೇ ಇವೆ. ಆದರೆ ನನಗೇನೂ ಕಾಣುತ್ತಿಲ್ಲ. ಯಜಮಾನನ ಸ್ವರ ಹಂದಿಯ ಸ್ವರದಂತೆ ಕೇಳಿಸುವುದೂ, ಅವನ ಶರ್ಟಿನೊಳಗಿಂದ ಬೆವರಿನ ದುರ್ವಾಸನೆ ಹೊರಡುತ್ತಿರುವುದೂ— ನಾನೂ ಅವನೂ ಇನ್ನೂ ಜೀವದಲ್ಲಿ ಇದ್ದೇವೆ ಎಂಬ ಅರಿವನ್ನು ಆಗಾಗ್ಗೆ ಕೊಡುತ್ತಿವೆ.

ನನಗೆ ನಿದ್ದೆ ಹತ್ತಿದೆ.

ಯಜಮಾನನಿಗೆ ನಿದ್ದೆಯಿಲ್ಲ, ಅವನು ಈಗಾಗಲೇ ನಿದ್ದೆ ಮುಗಿಸಿ ಬಂದು, ನಿದ್ದೆ ಮಾಡಲು ಆಫೀಸಿನ ದಶದಿಕ್ಕುಗಳಲ್ಲೂ ಒಂದು 'ಮರವೆ'ಯ ಸ್ಥಳದ ಬೇಟೆಮಾಡುತ್ತಿರುವ ನನ್ನನ್ನು ಕರೆದು, ವಿನಾಕಾರಣ ಬಯ್ದು, 'ಕಾಗದ ಬರಕೋ' ಎನ್ನುತ್ತಾನೆ. ಯಾರಿಗೆ, ಯಾಕೆ ಈ ಮಟಮಟ ಮಧ್ಯಾಹ್ನದಲ್ಲಿ ಪತ್ರ ಬರೆವನೋ ತಿಳಿಯದು. ಟಪ್ಪಾಲಾಫೀಸಿದೆ ಎಂಬ ಒಂದೇ ಕಾರಣ; ಕಾಗದ ಬರೆಯೋದೇ! ನನಗೆ ನಿದ್ದೆಗೆ ಎರಡು ತಾಸು ಬಿಟ್ಟರೆ ನಾನು ಎಚ್ಚತ್ತ ಅನಂತರ ಹತ್ತು ಪತ್ರ ಬರೆಯುತ್ತಿದ್ದೆ.

"ಸರಿಯಾಗಿ ಕೇಳು....ದಿ ಡೆಮೇಜಿಂಗ್ ಡಿಕ್ಟೇಟರ್...." ಯಜಮಾನ ಹೇಳುತ್ತಿದ್ದಾನೆ.

ಸರಿಯಾಗಿ ಕೇಳುತ್ತಿದೆ—"ಡೆಮೆಜಿಂಗ್ ಡಿಕ್ಟೇಟರ್...." ಇವರಿಗೆ ನಾನು ಪತ್ರ ಬರೆಯಬೇಕು.

"ಏನು ಬರೆದೆ?....ಪುನಃ ಓದಿ ಹೇಳು...." ಯಜಮಾನನನ್ನುತ್ತಾನೆ.

ಸರಿ ಓದಿದೆ—"ದಿ ಡೆಮೆಜಿಂಗ್ ಡಿಕ್ಟೇಟರ್,...........ಕಂಪೆನಿ, ಲಿಮಿಟೆಡ್—ಇವರಿಗೆ ಭೀಕ್‌ಚಂದ್ ಭೂಕ್‌ಬಂದ್ ಇವರ ನಮಸ್ಕಾರ."

"ನಿನಗೆ ಜೀವವಿಲ್ಲ...." ಯಜಮಾನನನ್ನುತ್ತಾನೆ.

ಆದರೆ, ಯಜಮಾನನ ಶರ್ಟಿನ ಬೆವರಿನ ವಾಸನೆ ಬರುತ್ತಲೇ ಇದೆ;

ಹಂದಿಯಾಕಾರದ ಒಂದು ದೇಹವಿದ್ದ ಹಾಗೆ ಅಸ್ಪಷ್ಟವಾಗಿ ಕಾಣುತ್ತಿದೆ; ಹಂದಿಯ ಸ್ವರ ಕೇಳುತ್ತಿದೆ. ನಾನೂ ಯಜಮಾನನೂ ಜೀವಂತ ಇದ್ದೇವೆ.

"ಡಿಮೇಜಿಂಗ್ ಡಿಕ್ಟೇಟರ್ ಅಲ್ಲ...." ಯಜಮಾನನನ್ನುತ್ತಾನೆ.

ನಿಜವಾಗಿಯೂ ಅಲ್ಲ. ನಾನು ತಿದ್ದುಪಡಿ ಮಾಡಿದೆ.

"ಪುನಃ ಓದಿ ಹೇಳು—"ಯಜಮಾನನಂದನು.

ನಾನು ಓದಿದೆ: "ಡಿಮೇಜಿಂಗ್ ಡಿಕ್ಟೇಟರ್...."

"ನಿನ್ನ ತಲೆ!"—ಯಜಮಾನನು ಹಾರಾಡಿದನು.

ನಾನು ಕಣ್ಣು ಬಿಟ್ಟು ನೋಡಿದೆ. "ಡಿಮೇಜಿಂಗ್ ಡಿಕ್ಟೇಟರ್" ಎಂದೇ ಇದೆ. "ಪುನಃ ಓದಲೇ?" ಎಂದು ವಿನಮ್ರವಾಗಿ ಕೇಳಿದೆ.

ಯಜಮಾನನು ಉಸಿರು ತಡೆದು, ಕೋಪ ನುಂಗಿ, "ಓದು ಓದು" ಎಂದನು.

ನಾನು ಪುನಃ ಓದಿದೆ; "ದಿ ಡಿಮೇಜಿಂಗ್ ಡಿಕ್ಟೇಟರ್!"

"ಸಪ್ತ ಆಕಾಶಗಳೂ ನಿನ್ನ ತಲೆ ಮೇಲೆ ಬೀಳಲಿ! ನೀನು ಹಾಳಾಗಿ ಹೋಗು!" ಎನ್ನುತ್ತ ಯಜಮಾನನು ಕುರ್ಚಿಯಿಂದ ಎರಡನೆ ಬಾರಿ ಹಾರಿ, ಉಸಿರುಕಟ್ಟಿ ಕುರ್ಚಿಯ ಮೇಲೆ ಬಿದ್ದು, ಬುಸುಗುಟ್ಟುತ್ತ ನಿದ್ದೆಹೋಗಿ, ಗೊರಕೆ ಹೊಡೆಯಲಾರಂಭ.

ನಾನು ಆಕಳಿಸುತ್ತ, ಬರೆದುದನ್ನು ಪುನಃ ಓದಿದೆ. "ಡಿಮೇಜಿಂಗ್ ಡಿಕ್ಟೇಟರ್" ಎಂದೇ ಇತ್ತು. ನಾಲ್ಕು ನಾಲ್ಕು ಬಾರಿ ನೋಡಿದರೂ,— ಡಿಮೇಜಿಂಗ್ ಡಿಕ್ಟೇಟರ್!

ಅರ್ಧ ತಾಸಿನಲ್ಲಿ ಯಜಮಾನನೆದ್ದನು. ನನ್ನನ್ನು ನೋಡುತ್ತ "ನೀನು ಸಾಯಲಿಲ್ಲವೆ? ನಿನ್ನ ಹೆಣ ನೋಡಲಾರೆನೆ?" ಎಂದನು.

ತಿಂಗಳಿಗೆ ಹನ್ನೆರಡು ರೂಪಾಯಿ ಸಂಬಳ ಕೊಡುವವರಿಗೆ, ಆ ಹನ್ನೆರಡು ರೂಪಾಯಿ ಪಡೆವ ನೌಕರರು ಸತ್ತು ತಮ್ಮ ಹೆಣ ತೋರಿಸಬೇಕೆ? ನೌಕರಿ "ಐಟಮು"ಗಳಲ್ಲಿ ಇದೂ ಇರಬಲ್ಲುದೆ?

"ಇಲ್ಲ—ನಾನು ಸತ್ತಿಲ್ಲ; ಆದರೆ, ಸಾಯುವ ಮೊದಲೇ ಹೆಣ" ಎನ್ನುತ್ತ ಒಮ್ಮೆ ವಿಶಾಲವಾಗಿ ಬಾಯಿ ತೆರೆದು, ಬಂದೂಕು ಹೊಡೆದಂತೆ

ಶ್ವಾಸಬಿಟ್ಟು, ಬಾಯಿಮುಚ್ಚಿ ಮುಂದಿನ ಅಪ್ಪಣೆ ಕಾಯುತ್ತ ನಿಂತೆ. ಈ ಹಾಳು ನಿದ್ದೆ!

"ನಿನಗೆ ಸಂಬಳವೆಷ್ಟು?" ಯಜಮಾನನು ಕೇಳಿದನು.

"ಹನ್ನೆರಡು ರೂಪಾಯಿ!"

"ಕಳೆದ ತಿಂಗಳಲ್ಲಾದ ಜುರುಮಾನೆ ಎಷ್ಟು?"

"ಹದಿಮೂರು ರೂಪಾಯಿ ನಾಕಾಣೆ!"

"ಹಾಗಾದರೆ, ಒಂದೂ ಕಾಲು ಇಲ್ಲಿಟ್ಟು ಹೋಗು!"––ಯಜಮಾನನೆಂದನು.

ನೆರೆಕರೆಯವರೊಬ್ಬರು ಕಾಲು ಮುಡಿ ಅಕ್ಕಿ ತರಬೇಕೆಂದು ಒಂದೂ ಕಾಲು ರೂಪಾಯಿ ಕೊಟ್ಟಿದ್ದರು. ಅದನ್ನು ಯಜಮಾನನ ಮುಂದಿಟ್ಟು, ಮುಜುರೆಮಾಡಿ ಹೊರಟೆ. ಆಕಳಿಸುತ್ತ ಬರುವಾಗ, ಮೈದಾನು ಕಂಡಿತು. ಬದಿಯ ಒಂದು ಮರದಡಿ ಮಲಗಿ ನಿದ್ದೆ ಹೋದೆ.

ಸಾಯಂಕಾಲ ಏಳು ಘಂಟೆಗೆ ಎದ್ದು, ಕಿಸೆಗೆ ಕೈಹಾಕಿ, ಆಫೀಸಿನಲ್ಲಿ ಬರೆದ ಪತ್ರ ತೆಗೆದು ಓದಿದೆ: "ದಿ ಮೆನೇಜಿಂಗ್ ಡೈರೆಕ್ಟರ್...." ಎಂದಿತ್ತು. ಅದನ್ನು "ದಿ ಡೆಮೋಜಿಂಗ್ ಡಿಕ್ಟೇಟರ್" ಎಂದೇ ಪದೇ ಪದೇ ಓದಿದ ನೆನಪು! ನನಗೆ ಕಂಡದ್ದೂ ಹಾಗೇ! ಕೆಲಸ ಹೋದುದೂ ಅದರಿಂದಲೇ! ನನಗೆ ಸೆಖೆಗಾಲದ ನಿದ್ದೆ ಬಂದಿತ್ತು. ಯಜಮಾನನಿಗೆ ಸೆಖೆಗಾಲದ ಕೋಪ ಬಂದಿತ್ತು.

ಕೆಲಸ ಹೋಗಿದೆ. ನೆರೆಕರೆಯವರಿಗೆ ಒಂದೂ ಕಾಲು ರೂಪಾಯಿ ಅಥವಾ ಕಾಲು ಮುಡಿ ಅಕ್ಕಿ ಕೊಡಬೇಕಾಗಿದೆ.

ಆಫೀಸಿಗೆ ಓಡಿಹೋದಾಗ, ಯಜಮಾನನು ಮನೆಗೆ ಹೊರಟಿದ್ದನು. 'ನಮಸ್ಕಾರ' ಎಂದೆ.

"ನೀನು ಈ ದಿನ ಬಂದಿಲ್ಲವೇಕೆ?" ಎಂದು ಕೇಳಿದನು.

"ಬಂದಿದ್ದೆ........" ಎನ್ನುತ್ತ ತಲೆ ತುರಿಸಿಕೊಂಡೆ.

ಯಜಮಾನನ ಮುಖದ ಮೇಲೆ ಜ್ಞಾನದ ಕಿರಣವೊಂದು ಬೆಳಕು ಹಾಕಿತು. "ಒಹೋ, ನಿಜ! ನೆನಪಾಯಿತು. ನಿನ್ನ ಮೇಲೆ ಏಕೊ ಕೋಪ ಮಾಡಿದ್ದೆ........ಅಹುದು........ನೀನು ಮೆನೇಜಿಂಗ್ ಡೈರೆಕ್ಟರ್

ಎನ್ನುವ ಬದಲಿಗೆ ಡಿಮೇಜಿಂಗ್ ಡಿಕ್ಟೇಟರ್ ಎಂದು ಬರಕೊಂಡೆ....... ಅಲ್ಲವೇ?"

"ಅಲ್ಲ ಸ್ವಾಮಿ, ನಾನು ಸರಿಯಾಗಿ ಬರಕೊಂಡಿದ್ದೇನೆ" ಎನ್ನುತ್ತ ಚೀಟು ತೋರಿಸಿದೆ.

ಯಜಮಾನನು ಓದಿದನು. ಮತ್ತೆ ಹೇಳಿದನು: "ಏನೋ! ಇರ ಬಹುದು. ಸೆಖೆಗಾಲ! ನನಗೇನೋ ನಿದ್ದೆ ಬಂದಿತ್ತು. ನೀನು ಬರ ಕೊಂಡದ್ದು—ಓದಿದ್ದು—ಏನೇನೊ ಕೇಳಿಸಿತು. ನಾಳೆಯಿಂದ ಪುನಃ ಕೆಲಸಕ್ಕೆ ಬಾ" ಎಂದನು.

ನಮಸ್ಕಾರ ಮಾಡುತ್ತ ನಾನು "ಒಂದೂಕಾಲು ರೂಪಾಯಿ...."ಎಂದೆ.

"ಹೊ ಹೊ ಹೊ" ಎನ್ನುತ್ತ ಯಜಮಾನನು ಒಂದೂಕಾಲು ಬದ ಲಿಗೆ ಒಂದೂವರೆ ರೂಪಾಯಿ ಕೊಟ್ಟನು! ನನಗೆ ನಿದ್ದೆ ಬಿಟ್ಟಿತ್ತು; ಯಜ ಮಾನನಿಗಿನ್ನೂ ಇತ್ತು!

ಇವನೇ ಏನೋ ಡಿಮೇಜಿಂಗ್ ಡಿಕ್ಟೇಟರ್!

ಸೆಖೆಗಾಲವು ಸುಖಕಾಲವೆಂದು ಹಾಡುವ ಕವಿಗಳಿದ್ದಾರೆ. ಅಪ ರಾಹ್ನ ಮನಸೇಚ್ಛಾ ನಿದ್ದೆ ಮಾಡುವ ಸ್ವಾತಂತ್ರ್ಯವಿದ್ದರೆ ನಾನೂ ಕವಿಯಾಗಿ ಅದೇ ರೀತಿ ಹಾಡಬಲ್ಲೆ. ಸೆಖೆಗಾಲದ ನಿದ್ರಾಸುಖವನ್ನು ಕವಿಗಳು, ಶ್ರೀಮಂತರು, ಸೋಮಾರಿಗಳು ಮತ್ತು ಎಮ್ಮೆಗಳು ಈ ಚತುರ್ವಿಧ ಜೀವಿ ಗಳು ಬಲ್ಲವು. ನೌಕರಿ ಮಾಡುವವರಿಗೆ ಇರುವ ಸುಖವು ಒಂದೇ; ದಿನವಲ್ಲಿ ಅರ್ಧ ನಿಮಿಷ ಮಾತ್ರ. ದಿನದ ಕೆಲಸ ಮುಗಿದು ಮನೆಗೆ ಹೋಗಲು ಅಪ್ಪಣೆ ದೊರೆತಾಗ, "....ಈಗ, ಈಗ, ಸ್ವಾತಂತ್ರ್ಯ ದೊರೆಯಿತು" ಎಂದು ಆ ಬಡ ಜೀವಿಯು ಅರ್ಧ ನಿಮಿಷ ಸಂತೋಷಪಡುವನಲ್ಲಾ, ಅದೇ—ಅಷ್ಟೆ—ಸುಖ. ಹೊರಡುವ ಮೊದಲು ಕೆಲಸದ ದುಃಖ; ಹೊರಟ ಅನಂತರ, "ಹೊರಟರೂ ಸುಖವೆಲ್ಲಿ?" ಎಂಬ ದುಃಖ.

ಮೂರು ವರ್ಷ ಮೂವತ್ತು ಸಾವಿರ ವೆಚ್ಚಮಾಡಿದರೂ ನಿದ್ದೆ ಬರ ಲೊಲ್ಲದ ಮಾರವಾಡಿಯೊಬ್ಬನು ಬಂಗಾಳದಲ್ಲಿದ್ದನಂತೆ! ಸಂಬಳವನ್ನೆಲ್ಲ ಜುರುಮಾನೆಗೆ ವಜಾಮಾಡಿ, ಆ ಮೇಲೆ ಒಂದೂಕಾಲು ರೂಪಾಯಿ ದಂಡ ತೆತ್ತು ನಾನು ಹಗಲಲ್ಲಿಯೂ ನಿದ್ದೆಮಾಡಬಲ್ಲೆ.

೧೨. ಯುದ್ಧಕಾಲದ ವೃತ್ತಿಗಳು

'ನ್ಯೂಸ್ ಬಾಯ್' (ವೃತ್ತ ಪತ್ರಿಕೆ ಮಾರುವವನ ಇಂಗ್ಲಿಷ್ ಹೆಸರು) ಚಲೋ ಕತೆ ಹೇಳುತ್ತಾನೆ: "ಬಿಸಿ ಬಿಸಿ ವಾರ್ತೆಯ ಹೊಸ ಪೇಪರನ್ನೊಯ್ದರೆ, ಅದಕ್ಕಿಂತ ಹೆಚ್ಚು ಕ್ರಯಕ್ಕೆ ಅಷ್ಟೇ ದಪ್ಪದ ಹಳೇ ಪೇಪರು ಕೇಳುತ್ತಾರೆ ಸ್ವಾಮಿ"— ಎಂತ! ಹೊಸ ಪೇಪರಿಗೂ ಹಳೇ ಪೇಪರಿಗೂ ಭೇದವೇನೆಂದರೆ, ಹೊಸ ಪೇಪರನ್ನು ಕೊಂಡುಕೊಂಡರೆ ಓದಬೇಕಾಗುತ್ತದೆ, ಹಳೇ ಪೇಪರನ್ನು ಓದುವ ರಗಳೆಯಿಲ್ಲದೆ ನೇರಾಗಿ ಬೆಲ್ಲವನ್ನೋ ಕೊತ್ತಂಬರಿಯನ್ನೋ ಕಟ್ಟಿಕೊಡಬಹುದು.

"ತರ್ಕ" ಚೆನ್ನಾಗಿದೆ.

ಹನ್ನೊಂದನೇ ತಾರೀಕಿನ ಒಂದು ಪೇಪರು ಒಯ್ದಾಗ ಒಬ್ಬ "ಗಿರಾಕಿ"ಯು ('ಗಿರಾಕಿ' ಅಂದರೆ ಸದಾ ತಲೆತಿರಿಗಿಯೇ ಇರುವವರು!) "ಇದು ಹನ್ನೊಂದನೆ ತಾರೀಕಿನ ಪೇಪರೇ? ಇದರಲ್ಲಿರುವ ವರ್ತಮಾನವನ್ನು ನಾನು ಕಳೆದ ತಿಂಗಳ ೨೮ನೇ ತಾರೀಕಿನ ಇಂಗ್ಲಿಷ್ ಪೇಪರಿನಲ್ಲೋದಿರುತ್ತೇನೆ" ಎಂದುದಿದೆ.

"ಚೆಂಬರ್ಲೇನರು ಯುದ್ಧವನ್ನು ಸಾರುವರೆ?" ಎಂದು ನಿನ್ನೆಯ ಪತ್ರಿಕೆಯ ಶಿರೋನಾಮೆ! ಅಂದೇ ರೇಡಿಯೋದಲ್ಲಿ ಡೆನ್ಮಾರ್ಕನ್ನು ಜರ್ಮನಿಯು ಆಕ್ರಮಿಸಿದ ಸುದ್ದಿ ಬಂದಿದೆ. "ಯುರೋಪಿನಲ್ಲಿ ಯುದ್ಧದ ಮೋಡಗಳು" ಎಂಬ ವಾರ್ತೆ ಬರುವಾಗ, "ಯುದ್ಧ ನಿಂತಿತು. ಶಾಂತಿಯ ಸೂರ್ಯೋದಯವಾಯಿತು" ಎಂದು ರೇಡಿಯೋ ಸಾರಬಹುದು. ವೇಗವಾಗಿ ವಾರ್ತೆ ಪ್ರಕಟಿಸುವ ಪತ್ರಿಕೆಗಳು ನಮಗೆ "ಎಕ್ಸ್‌ಪ್ರೆಸ್" ಎಂಬ ವಿಡಂಬನಾತ್ಮಕ ಹೆಸರಿನ ಧೂಮ್ರ ಯಾ ಪೆಟ್ರೋಲ್ ಶಕಟಗಳಲ್ಲಿ ನೂರಾರು ತಾಸುಗಳೊಳಗೆ ಕರತಲಾಮಲಕವಾಗುವುವು.

ವೃತ್ತಪತ್ರಿಕೆ ಮಾಡುವವರಿಗೆ (ಅಥವಾ ಬರೆವವರಿಗೆ)—ಹಿತವಾದ ವೊಂದು: ನಾಳೆಯ ತಾರೀಕನ್ನು ಪ್ರಕಟಿಸಿ ನಿನೆ ಪತ್ರಿಕೆಯನ್ನು ಹೊರಡಿ

ಸುವ ಬದಲು ಕಳೆದ ತಿಂಗಳ ಹದಿನೈದನೇ ತಾರೀಕನ್ನು ಪ್ರಕಟಿಸಿ ಈ ತಿಂಗಳ ೨೦ರಲ್ಲಿ ಮಾರಾಟಕ್ಕಿಡಬಾರದೇಕೆ?

*　　*　　*　　*　　*

ಶೀನು ಒಬ್ಬ ಮನುಷ್ಯ. ೧೯೩೯ನೇ ಸಪ್ಟಂಬರದ ಮೊದಲು, ಅವನು ಚೆನ್ನಾಗಿ "ಪೊಲಿಶ್" ಮಾಡಿದ ಗೆರಟೆಗಳನ್ನು ಹಿಡಿದು "ಈ ಗೆರಟೆಯಲ್ಲೋ ಆ ಗೆರಟೆಯಲ್ಲೋ?" ಎಂದು ಕೇಳಿಯೇ ದಿನಕ್ಕೆ ಹತ್ತಾಣೆ ದುಡಿಯುತ್ತಿದ್ದನು. ಸಪ್ಟಂಬರದಲ್ಲಿ ಪೋಲರ ಸೋಲು ಬಂತು. ಪೊಲಿಶ್ ಜನರ ವಿಪತ್ತಿನೊಂದಿಗೆ ಶೀನುವಿನ 'ಪೊಲಿಶ್' ಮಾಡಿದ ಗೆರಟೆಗಳ ಇಂದ್ರಜಾಲ ಶಕ್ತಿ ಮಾಯವಾಯಿತು. ಒಬ್ಬನು ಮಾತ್ರ ಅವನ ಗೆರಟೆಯಾಟ ನೋಡಲು ನಿಂತರೆ ಶೀನುವು ಅದನ್ನು ಮಹಾಸಭೆ ಎಂದು ಕರೆಯಲಾರನು. ಒಬ್ಬನು ಮಾತ್ರ ಇರುವ ಮಹಾಸಭೆಯು ಶೀನುವಿಗೆ ಎಷ್ಟು ಹಣ ಮಂಜೂರು ಮಾಡಲು ಶಕ್ತವಿದೆ? ಶೀನುವು ಮಿದುಳಿನ ಮನುಷ್ಯ. ಅವನ ಮಿದುಳುಗಳು ಕೈಯಲ್ಲೆ ಇವೆ. ಕರಾವಳಿ ಸ್ಟೀಮರುಗಳು ಚಲಾವಣೆಯಲ್ಲಿಲ್ಲದುದು ಅವನಿಗೆ ಗೊತ್ತು. ನೇರಾಗಿ ಮೋಟಾರ್ ಸ್ಟ್ಯಾಂಡಿಗೆ ಹೋಗಿ, ಮಿದುಳು ಇರುವ ಎರಡು ಕೈಗಳಿಂದ ಪ್ರಯಾಣಿಕರ ಸಾಮಾನನ್ನು ನೆಲದಿಂದ ಬಸ್ಸಿನ ತಲೆಗೆ ಎಂಟಡಿ ಎತ್ತಿ, ಘಂಟೆಗೆ ಹನ್ನೆರಡಾಣೆ ಸಂಪಾದಿಸುತ್ತಾನೆ. ಟ್ರಂಕು ಎತ್ತಿದರೆ ಒಂದಾಣೆ, ಹಾಸಿಗೆ ಎತ್ತಿದರೆ ಒಂಭತ್ತು ಪೈ, ಪಾತ್ರೆಗಳ ಗೋಣಿ ಚೀಲವೆತ್ತಿದರೆ ಒಂದೂ ಕಾಲಾಣೆ, ಏನೂ ಎತ್ತದೆ "ಏನು ಸ್ವಾಮೀ" ಎಂದು ಸಂಬೋಧಿಸಿದರೆ ಅರ್ಧಾಣೆ—ಈ ರೀತಿ ಅವನ ಚಾರ್ಜು ಇರುತ್ತದೆ. (ಮತ್ತೆ ಕೆಲವು ಪ್ರಯಾಣಿಕರಿಗೆ, ಬಸ್ಸು ಹತ್ತಿ ನಾಲ್ಕೆಂಟು ಮೈಲು ಹೋದ ನಂತರ, 'ಈ ಗೆರಟೆಯಲ್ಲೋ ಆ ಗೆರಟೆಯಲ್ಲೋ' ಎಂಬುದರ ಬದಲಿಗೆ 'ಈ ಕಿಸೆಯಲ್ಲೊ ಆ ಕಿಸೆಯಲ್ಲೊ' ಎಂದೆನಿಸುವುದೂ ಇದೆ.)

*　　*　　*　　*　　*

"ಬೇಕ್ರೈ" ಎಂದರೊಂದು ಹೆಸರು. ಮಹಾ ವಿದ್ವಾಂಸ. ಅಂದರೆ, ಚಿತ್ರಕಲೆಯಲ್ಲಿ ವಿದ್ವಾಂಸ. ದಂತ ವೈದ್ಯ ವಿಶ್ವನಾಥರಾಯರಲ್ಲಿ, ಬಾಯೊಳಗೆ "ತೀಳಿಲೆ" ಎಂಬ—ಎಲೆಯೆಂದು ಕೇಳಿಸುವ—ಆದರೆ ನಿಜವಾಗಿ "ಎಳ್ಳುಂಡೆ'' ಎಂಬ ಅರ್ಥವುಳ್ಳ ಲಾಡುಗಳನ್ನಿಟ್ಟುಕೊಂಡವರಂತೆ ತೋರುವ

ಜನರು ಸಾಲಾಗಿ ಕುಳಿತು, "ಉಂಡೆ"ಯು ಸವಿಯಿಂದ "ಸ್ss" ಎಂಬ ಶಬ್ದ ಮಾಡುತ್ತ ಒಬ್ಬೊಬ್ಬರಾಗಿಯೇ ಒಳಗಿನ ಕೋಣೆಗೆ ಹೋಗಿ—"ಹೊ—ಹೊ ಹ್ಹೊ ಹ್ಹೊ" ಎಂಬ ಉದ್ಗಾರಗಳಿಂದ ಕೆಲವು ನಿಮಿಷ ನಾಟಕವಾಡಿ, ಹೊರಬರುವಾಗ ಕಣ್ಣಾಲಿಗಳನ್ನು ತಿರುಗಿಸದೆ ನೇರಾಗಿ ಬಂದು, ಬಾಣ ಹೊಡೆದಂತೆ ಓಡುವ ಪದ್ಧತಿ ಇತ್ತು. ಎಳ್ಳುಂಡೆಗಲ್ಲದವರು ಒಬ್ಬರಿನ್ನೊಬ್ಬರನ್ನು ನೋಡದೆ ಎಲ್ಲರೂ ಬಂದು ಅಗಾಧ ದುಃಖ ಅಥವಾ ಕೋಪದಲ್ಲಿದ್ದವರಂತಿರುವ ರೂಢಿ ಇತ್ತು. ಕಾರಣವೂ ಇಲ್ಲದಿರಲಿಲ್ಲ. ವಿಶ್ವನಾಥರಾಯರು, ಎಳ್ಳುಂಡೆ ಗಲ್ಲದವರು ಕುಳಿತುಕೊಳ್ಳುವ ಕೊಠಡಿಯಲ್ಲಿ ಕುರ್ಚಿಗಳಿಗೆ ಮೆತ್ತನೆ ಹಾಸು ಇರಿಸಿರಲಿಲ್ಲ; ಮತ್ತು ಗೋಡೆಗಳಿಗೆ ದಂತವಕ್ರರ, ಕುದುರೆ ಮುಖದ ಗಂಧರ್ವರ, ಜಾಂಬವಂತರ, ಬಕಾಸುರರ, ಕುಂಭಕರ್ಣ—ಅತಿಕಾಯ—ವಾಲಿ—ಅಂಗದರೇ ಮೊದಲಾದವರ ಪಟಗಳನ್ನಿರಿಸಿದ್ದರು. ಆ ಪಟಗಳಲ್ಲಿನ ಕರಾಳ ವ್ಯಕ್ತಿಗಳಲ್ಲಿ, ಒಬ್ಬರಿಗೆ ಹಲ್ಲು ಇರಲಿಲ್ಲ, ಮತ್ತೊಬ್ಬರಿಗೆ ಎರಡು ಹಲ್ಲುಗಳು ಮಾತ್ರ ಇದ್ದು, ಆ ಎರಡೂ ಹಲ್ಲುಗಳೂ ಕೊಳೆತಿದ್ದುವು; ಮತ್ತೆ ಕೆಲವರಿಗೆ ಸುಮಾರು ೪೦ ಹಲ್ಲುಗಳು (ಮಾನವನ ಹಕ್ಕಿನ ೩೨ನ್ನು ಮೀರಿ ಮತ್ತೆ ಎಂಟು!) ಇದ್ದುವು; ಬೇರೆ ಕೆಲವರಿಗೆ ಎಲ್ಲಾ ಹಲ್ಲುಗಳೂ ಒಂದೊಂದು ಇಂಚು ಹೊರಗೆ ಬಂದು ಪುನಃ ಒಳಗೆ ಹೋಗಲು ಕೇಳದಂತೆ ವಸಡುಗಳು ಬೊಂಬಾಯಿ ಚರಂಡಿಯ ಬಣ್ಣ ತಾಳಿದ್ದುವು. ಇವೆಲ್ಲವನ್ನೂ ಮೀರಿಸುವ ವಿಶ್ವರೂಪವೊಂದೂ ಅಲ್ಲಿದ್ದು, ಇತರ ಚಿತ್ರಗಳನ್ನು ನೋಡಿ ನಗುವನ್ನು ತ್ಯಜಿಸಲಾರದವರಿಗೆ ತಾನೊಂದೇ ಸಾಕು ಎಂಬ ಗರ್ವದಿಂದ ಪ್ರತಿಭಟಿಸುವಂತಿತ್ತು. ಆ ವಿಶ್ವರೂಪದಲ್ಲಿ ಮೈಯನ್ನೆಲ್ಲ ಸೀಳಿದ ಮಾನವನೊಬ್ಬ; ಅವನು ಹಲ್ಲು ತೊಳೆಯದ ಒಂದೇ ಕಾರಣದಿಂದ ಜಗತ್ತಿನ ಎಲ್ಲ ಕೆಟ್ಟ ರೋಗಗಳೂ (ಎಪೆಂಡಿಸೈಟಿಸ್ ಮೊದಲಾದುವು ಕೂಡ) ಅವನಿಗೆ ಬಂದು, ಕೆಲವು ವರ್ಷಗಳಾಗಿದ್ದುವು. (ಆ ರೋಗಗಳು ಬಂದ ನಂತರ ಪಟದವನು ಸ್ನಾನ ಮಾಡಿದುದೂ ಇಲ್ಲ; ಅವನ ಮೇಲೆ ಕುಳಿತ ಧೂಳಿಯೇ ಸಾಕ್ಷಿ!) ಇದನ್ನೆಲ್ಲ ನೋಡಿದ ಎಳ್ಳುಂಡೆಯವರು ಹೇಗೆ ನಗಲಾಪರು? ಅವರನ್ನು ನಗಿಸಲು "ಜೇಕೃ" ಎಂಬ ಮಹಾಶಯನು ಬಂದನು. "ಜೇಕೃ" ಎಂದರೆ ಬೇಪರಕಾಡು ಕೃಷ್ಣರಾಯರು. ಚಿತ್ರಕಲಾ ನಿಪುಣ. ಹೆಸರನ್ನು ಕಡಿದು

"ಬೇಕ್ರ"ಎಂಬುದಕ್ಕಿಳಿಸಿ ನಿಲ್ಲಿಸಿದ್ದನು."ಬೇ"ಎಂದು ಬರೆಯಲು ಸಾಧ್ಯವಿದ್ದರೆ ಹಾಗೇ ಮಾಡುತಿದ್ದನು.ಅವನು ಹನ್ನೆರಡು ರೂಪಾಯಿಗಳೊಳಗೆ ಸುಮಾರು ಹನ್ನೆರಡು ಚಿತ್ರಗಳನ್ನು ಬರೆದು ವಿಶ್ವನಾಥರಾಯರಿಗೆ ಕೊಟ್ಟನು. ಎಲ್ಲ ಚಿತ್ರಗಳಲ್ಲಿ ವಿನೋದವಿತ್ತು. ಆ ಚಿತ್ರಗಳನ್ನಿರಿಸಿದ ದಿನದಿಂದ, ಅಲ್ಲಿ ಕುಳಿತುಕೊಂಡು ಒಳಗಿನ ಕೊಠಡಿಯ ಸ್ವರ್ಗಸುಖಕ್ಕಾಗಿ ಕಾಯುವವರು ನಗುತ್ತಿರುವರು.

* * * * *

ನಮ್ಮೂರಲ್ಲಿ ವಿನೋದ ಚಿತ್ರಗಳನ್ನು ಚಿತ್ರಿಸಲು ಅಪ್ಪಣೆ ಕೊಡುವವರು ಹಲವರಿಲ್ಲದ ಕಾರಣ "ಬೇಕ್ರ"ರವರು ಈಗ ವೃತ್ತ ಪತ್ರಿಕೆಗಳಿಗೆ ಯುರೋಪಿನ ನಕಾಶೆ ಬರೆದು ಕೊಡುತ್ತಿದ್ದಾರೆ. ದಿನಕ್ಕೊಂದು ನಕಾಶೆ ತಯಾರಾಗುತ್ತಿದೆ. ದಿನದಿನವೂ ಹಳೆ ದೇಶಗಳು ಯುರೋಪಿನಿಂದ ಮಾಯವಾಗಿ ಹೊಸ ದೇಶಗಳೇಳುತ್ತಿವೆ; ಗಡಿಗಳು ಒಂದು ದಿನ ಹಿಂದಕ್ಕೂ ಮತ್ತೊಂದು ದಿನ ಎಡಕ್ಕೂ—ಹೀಗೆ ಸಂಚರಿಸುತ್ತಲೇ ಇವೆ. ಗ್ರಾಮೋನಿಯದ ಗಡಿಯು ಸಪ್ಟಂಬರ ತಿಂಗಳಿನಿಂದ ಎಂಭತ್ತೇಳು ಬಾರಿ ಬದಲಾಯಿಸಿದೆ; "ಕಾರಿನೊಲಿಸ್ಕ" ಎಂಬ ದೇಶವು ಎರಡು ದಿನಕ್ಕೊಮ್ಮೆ ಸಂಪೂರ್ಣ ಕಾಣೆಯಾಗಿ, ಆಗಾಗ್ಗ "ಸೀಲ್" ಎಂಬ ಉತ್ತರಧ್ರುವದ ಕರಿಜೀವಿಯಂತೆ ತಲೆಯೆತ್ತುತ್ತಲೇ ಇದೆ. ಅತಿಕೆಟ್ಟ ತರಗತಿಯ ಭೂಕಂಪಗಳಿಂದಲೂ ಈ ಬಗೆಯ ಭೌಗೋಲಿಕ ಮಾರ್ಪಾಟಗಳುಂಟಾಗಲಾರವು—ಎಂದು ವಿಜ್ಞಾನಿಗಳು ಹೇಳುತ್ತಾರೆ. ಆದರೆ, ಹಿಟ್ಲರರು ಭೂಕಂಪಕ್ಕಿಂತ ದೊಡ್ಡವರು. ಪ್ರತಿದಿನದ ಯುದ್ಧ ವಾರ್ತೆಗಳನ್ನು "ಬೇಕ್ರ"ರವರು ಆಯಾ ಪತ್ರಿಕಾ ಆಫೀಸುಗಳಿಂದ ಟೆಲಿಫೊನ್ ಮೂಲಕ ಕೇಳುತ್ತಾರೆ; ಮತ್ತು ಕೂಡಲೇ ತಮ್ಮ ಮುಂದಿರುವ ಯುರೋಪಿನ ನಕಾಶೆಯಲ್ಲಿ ತಿದ್ದುಪಡಿಮಾಡುತ್ತಾರೆ. ನಿತ್ಯದ ಈ ಬದಲಾವಣೆಗಳನ್ನು ಸಹಿಸಲಾರದೆ ಒಂದು ಪತ್ರಿಕೆಯವರು "ಯುರೋಪಿನ ಈ ಅನ್ಯಾಯವು ನಿಲ್ಲಿಸಲ್ಪಡುವ ತನಕ ನಾವು ಯುರೋಪಿನ ದೇಶಗಳ ನಕಾಶೆಗಳನ್ನು ಪ್ರಕಟಿಸುವುದೇ ಇಲ್ಲ" ಎಂಬ ದೃಢಸಂಕಲ್ಪ ಮಾಡಿರುವರು. ಆದರೆ, "ಬೇಕ್ರ"ರವರಿಗೆ "ಒಂದು ತರು ಗೂಡ್ಡಾಗಲ್........" ಏನು?

* * * * *

ಸಂಡೂಕನೆಂಬವನನ್ನು ಈ ಊರಿನ ಬಕಾಸುರನೆನ್ನುತ್ತಾರೆ. ದಿನಕ್ಕೆ ನಾಲ್ಕು ಸೇರು ತುಪ್ಪವನ್ನೂ, ತುಪ್ಪದಲ್ಲಿ ಹುರಿದ ರೊಟ್ಟಿಯಾದರೆ ಎಂಟು ರಾತ್ಲನ್ನೂ, ಹಾಲು ಮೊದಲಾದ ಪದಾರ್ಥಗಳಾದರೆ ಕಾಲು ಮಣವನ್ನೂ ತಿನ್ನುವವನಂತೆ! ಅವನೆಲ್ಲಿ ಊಟ ಮಾಡುವನೆಂದು ಯಾರೂ ಅರಿಯರು. ಈ ಮನುಷ್ಯನು ('ಮನುಷ್ಯ'ನೆನ್ನಬಹುದಾದರೆ!) ಈಗ ಮಿತ ವ್ಯಯಕ್ಕೆ ಇಳಿದು, ಯುದ್ಧಕಾಲದಲ್ಲಿ ಆಹಾರ ಸಾಮುಗ್ರಿಗಳನ್ನು ಸರಕಾರದವರು ಮಿತಪಡಿಸುವ ಕಾನೂನನ್ನು ತಂದುದನ್ನು ಗಮನಿಸಿ ಅವರಿಗೆ ನೋಡ ಸಿಗದೆ, ತನ್ನ ನಿತ್ಯದ ಪಥ್ಯದಲ್ಲಿ ಬದಲಾವಣೆಗಳನ್ನು ಮಾಡಿರುವನೆನ್ನು ವರು. ಇವನೀಗ ದಿನಕ್ಕೆ ಒಂದೇ ಊಟದಲ್ಲಿ ಇರಬಲ್ಲನಂತೆ! ಆ ಊಟ ನೋಡಬಯಸುವವರು ಇವನಿಗಾಗಿ ಒಂದು ದಿನವನ್ನೂ ಒಂದು ರೂಪಾಯಿ ಯನ್ನೂ ಕೊಡಬೇಕು. "ಫನ್ ಫೇರ್"ಗಳಲ್ಲಿ ಕಂಟ್ರಾಕ್ಟ್ ವಹಿಸಿರುವನು. ಸಪ್ಟಂಬರ (೧೯೩೯) ಮೊದಲು ಇವನುಣ್ಣುವುದನ್ನು ನೋಡಲು ಒಂದು ದಿನವನ್ನೂ ಎರಡು ರೂಪಾಯಿಗಳನ್ನೂ ಇವನು ತಿನ್ನುವೆನೆಂದು ಶಪಥ ಹಾಕಿಕೊಂಡ ಆಹಾರದ ಹಣವನ್ನೂ ಕೊಡಬೇಕಾಗಿತ್ತು. ಈಗ ಟಿಕೇಟಿನ ದರವನ್ನಿಳಿಸಿರುವರು.

* * * * *

ಶಿಬ್ರೂಕನು ದೊಡ್ಡ ಟೆಲಿಫೋನ್ ಕೇಂದ್ರದಂತೆ ವಿಶಾಲ ಮನುಷ್ಯ. ಮೂರ್ತಿ ಸಣ್ಣದಾದರೂ ನಾಲಗೆ ದೊಡ್ಡದು. ಇವನು ಸತ್ತ ಅನಂತರ, ಎಲ್ಲ ಅವಯವಗಳಲ್ಲಿನ ಚೇತನವು ಸ್ತಬ್ಧವಾದರೂ ನಾಲಗೆಯು ಮಾತ್ರ ಐದು ನಿಮಿಷವಾದರೂ ಪಟಪಟನೆ ಹಾರಿ ಮಾತಾಡುವ ಸಂಭವವಿದೆಯೆಂದು ಪ್ರಸಿದ್ಧ ಡಾಕ್ಟರರೊಬ್ಬರು ಹೇಳಿರುವರು. ಈ ಕೌತುಕವನ್ನು ನೋಡಲು ನೂರಾರು ಶಾಲಾ ವಿದ್ಯಾರ್ಥಿಗಳು ಶಿಬ್ರೂಕನ ಮರಣವನ್ನು ಹಾರೈಸುತ್ತಿದ್ದಾರೆ. ಶಿಬ್ರೂಕನು ಬಾಳೆ ಮತ್ತು ಬಾಳೆಯೆಲೆ, ವೀಳ್ಯ ಮತ್ತು ಅಡಿಕೆ ಇವುಗಳನ್ನು ವಿಕ್ರಯಿಸುವ ಅಂಗಡಿಗಳಲ್ಲಿ ಕುಳಿತು, ತಾನು ಕೇಳಿದ ಯುದ್ಧ ವಾರ್ತೆಗಳನ್ನು ಅಂಗಡಿಕಾರನಿಗೂ, ಅಲ್ಲಿಗೆ ಬರುವ ಕೆಲವು ಸಪ್ತತಿವಯಸ್ಕರಿಗೂ ವಿವರಿಸಿ, ವೀಳ್ಯದೆಲೆಯ ಅವಿರಾಮಭುಂಜನ ನಡೆಸಿದ್ದಾನೆ. ನಿನ್ನೆ ಅವನು ಹೇಳಿದ ವಾರ್ತೆಯಲ್ಲಿ ಹಿಟ್ಲರನು ಇಂಗ್ಲಾಂಡನ್ನು ಪೂರ್ಣ ಗೆದ್ದು,

ತಾನು ಮರಣಹೊಂದಿರುವನು. ರೆಡಿಯೋಗಿಂತಲೂ ಇವನ ವಾರ್ತೆಯು ಬಿಸಿಬಿಸಿಯದಾಗಿರುವ ಕಾರಣ, ಇತ್ತೀಚೆಗೆ ಮುದುಕರಲ್ಲದ ಕೆಲವು ಯುವಕರೂ ಇವನ “ನ್ಯೂಸ್ ಸರ್ವಿಸಿ”ನ ಕಡೆಗೆ ಒಲಿದಿರುವರು. ಹೀಗಾಗಿ, ವೀಳ್ಯದ ಸೇವೆಯೊಂದಿಗೆ ಶಿಬ್ರೂಕನಿಗೆ ಕಾಫಿ ತಿಂಡಿಯ ಸೇವೆಯ ಸುಯೋಗವೂ ದೊರೆಯುತ್ತಿದೆ.

ಎಲ್ಲದಕ್ಕಿಂತಲೂ ಉತ್ತಮ ವೃತ್ತಿಯೆಂದರೆ ಅಂಗಡಿಕಾರರದು. ಏಕೆಂದರೆ, ಯುದ್ಧದ ದೆಸೆಯಿಂದ ಅವರು ಸಾವಿರಗಟ್ಟಲೆ ಲಾಭ ಮಾಡಿದರು ಎಂದು ಜನರಾಡಿಕೊಳ್ಳುತ್ತಿರುವಾಗ, ಯುದ್ಧ ಪೂರ್ವದ ಗಿರಾಕಿಗಳಿಗೆ ಈಗ ಮನೆಮಠಗಳೇ ಇಲ್ಲವೇ ಎಂದು ಅವರಾಶ್ಚರ್ಯಪಡುತ್ತಿದ್ದಾರೆ. ವ್ಯಾಪಾರವು ನಿಂತು ಹೋಗುವ ಸ್ಥಿತಿಯಲ್ಲಿ ವ್ಯಾಪಾರಸ್ಥರ ‘ಭರವು’ ಹೆಚ್ಚುತ್ತಿದೆ.

೧೩. ಕಥೆಯಲ್ಲಿ ಆತ್ಮಹತ್ಯೆಗಳು

ನನಗೆ ಅಭ್ಯಾಸವಾಗಿದೆ. ಕಥೆ ಓದುತ್ತೇನೆ. ಯಾವುದಾದರೂ ವಾರಪತ್ರಿಕೆ ಅಥವಾ ಮಾಸಪತ್ರಿಕೆ ತೆರೆದು, ‘ವಾರದ ಕತೆ’ ಎಂಬ ಶಿರೋನಾಮೆ ನೋಡಿ ಅಲ್ಲಿಂದ ಕೆಳಗೆ ಒಂದಕ್ಷರವೂ ಓದದೆ ನೇರಾಗಿ ಕಥೆಯ ಕೊನೆಯ ‘ಪಾರ’ ನೋಡುತ್ತೇನೆ—ನಾನೆಣಿಸಿದ್ದೇ—“ನಾಯಕಿಯು ನೀರಿಗೆ ಹಾರಿದವಳು ಮತ್ತೆ ಏಳಲೇ ಇಲ್ಲ! ಅವಳು ದುಮುಕಿದಲ್ಲಿ ಹತ್ತೆಂಟು ಗುಳ್ಳೆಗಳೆದ್ದು ಒಡೆಯುತ್ತ, ಜೀವನವೂ ಹಾಗೆಯೇ ಎಂದು ಸಾರಿದುವು!”

‘ಪ್ರಜಾಪ್ರಕೋಪ’ ಪತ್ರಿಕೆಯು (ಇದು ಕಮ್ಯೂನಿಸ್ಟ್ ಪತ್ರಿಕೆಯೆಂದು ಕೆಲವರು ಪಿಸುಮಾತಾಡಿದುದನ್ನು ಕೇಳಿದ್ದೇನೆ) ಮೊನ್ನೆ ವಾರದ ಕಥೆಯಲ್ಲಿ ಕೊನೆಯ ಪಾರಾದಲ್ಲಿ ಒಂದು ಹೊಸ ರಾಗ ನುಡಿಸಿದಂತೆ ತೋರಿತು.

“ನಳಿನಿ ಎಲ್ಲಿ ಎಂದು ಬೊಬ್ಬೆಯೆದ್ದಿತು. ಕೆರೆ, ಬಾವಿ, ನದಿನದಗಳೆಲ್ಲವನ್ನೂ ಹುಡುಕಿದರು. ಆದರೂ ನಳಿನಿಯೆಲ್ಲಿ?”...............

...............ಮುದ್ರಣ ದೋಷದಿಂದ “ಅವಳ ಶವವು ನಗ್ರಿತ್ತಾಯರ ಕೆರೆಯಲ್ಲಿ ಸಿಕ್ಕಿತು” ಎಂಬ ಪಂಕ್ತಿಯು ಕಥೆಯ ನಡುವೆ ಎಲ್ಲ್ಯಾದರೂ ಬಿಟ್ಟುಹೋಯಿತೇ ಎಂದು ಹುಡುಕಿದೆ. ಇರಲಿಲ್ಲ. ಆ ಪರಾರಿಯಾದ

ಪಂಕ್ತಿಯನ್ನು ಹುಡುಕುವ ವೃತ್ತಿಯಲ್ಲಿ ತೊಡಗಿದಾಗ ಆ ಕಥೆಯನ್ನು ಕೊನೆವರೆಗೆ ಓದುವ ಸುಯೋಗ ಲಭಿಸಿತು.

"ನಳಿನಿಯು ಬಡವಿ; ಆದರೆ, ಚೆಲುವೆ. ಅವಳ ಪ್ರತಿಯೊಂದು ಅಂಗವೂ ಯೌವನವನ್ನು ಹೊರಸೂಸುತಿತ್ತು. ಭಾಸ್ಕರನ ಮೇಲೆ ಅವಳ ಪ್ರೇಮ. ಆದರೆ, ಭಾಸ್ಕರನು ಕೋಟ್ಯಾಧಿಪತಿಯ ಏಕಮಾತ್ರ ಪುತ್ರನಾದ ಕಾರಣ ಅವಳಿಗೆ ದುರ್ಲಭನು. ಭೀಮನ ಗುಡ್ಡದಲ್ಲಿ ಅವರು, ಒಂದು ಗೋಳಿಮರದ ಬುಡದಲ್ಲಿ, ಭಗವಾನ್ ಭಾಸ್ಕರನು ಪಶ್ಚಿಮಾಂಬುಧಿಯಲ್ಲಿ ಮುಳುಗುವಾಗ ಸೇರುತಿದ್ದರು. ಭಾಸ್ಕರನ ಸ್ವರ್ಣ ಕಿರಣಗಳು ಭಾಸ್ಕರ-ನಳಿನಿಯರ ಮೇಲೆ ಬಿದ್ದು, ಅವರ ಪ್ರೇಮಕಾಂತಿಯ ಮುಖಗಳನ್ನು ಬೆಳಗಿಸಿರಲು................"

ಮುಂದೆ ಹೀಗಿದೆ: "ನಳಿನಿಗೆ ಒಂದು ವಿಧದ ಆಲಸ್ಯ. ಯಾವ ಆಹಾರವೂ ಸೇರದು. ನೀರುಳ್ಳಿಯ ಹೆಸರೆತ್ತಿದರೆ ವಾಂತಿಮಾಡುವಳು. ಬೆಳಗ್ಗೆ ಮುಖ ತೊಳೆವಾಗ ಅರ್ಧರ್ಧ ಸೇರು ಮಸಿಯನ್ನು ಜಗಿದು ನುಂಗುವಳು............"

ಮೂರನೇ ಅಧ್ಯಾಯದಲ್ಲಿ ಗಲಭೆಯೆದ್ದಿದೆ: "ನೆರೆಕರೆಯ ನಾಗಕ್ಕನು ಸೀತಕ್ಕನೊಡನೆ ಎಂದಳು: 'ಸೀತು, ನಳಿನಿಯ ವಿಚಾರ ತಿಳಿಯಿತಲ್ಲವೆ?'

....

"ನಳಿನಿಯ ತಾಯಿಯೊಡನೆ ಸೀತಕ್ಕ ಎಂದಳು: 'ಏನಮ್ಮಾ, ಈಗಿನ ಹುಡುಗಿಯರು....'........"

ನಾಲ್ಕನೆಯ ಅಧ್ಯಾಯವನ್ನು ತೆರೆವಾಗ ವಾಚಕನಿಗೆ ಕಣ್ಣೀರು ಆರಂಭವಾಗುತ್ತದೆ. ಕಥೆಯ ಕೊನೆಯ ಪಂಕ್ತಿಯನ್ನೋದುವಾಗ ಮೂರ್ಛೆ ಬರುತ್ತದೆ: "ಹಾಯ್! ವಿಧಾತನು........"

ಕೊನೆಯ ಪಂಕ್ತಿಗಳೇನೆಂದು ಈ ಮೊದಲೇ ಹೇಳಿರುವೆನಷ್ಟೆ.

'ಶುಕವಾಣಿಯಲ್ಲಿ 'ಪಿಕ' ಎಂಬ ಗುಪ್ತನಾಮಿಯೊಬ್ಬರ ಕತೆಗಳು ಅತ್ಯಂತ ಪ್ರಸಿದ್ಧಿ ಪಡೆದಿವೆ. ಅವರ ಎಲ್ಲ ಕಥೆಗಳನ್ನೋದಿದ್ದೇನೆ. ನನಗೆ ನೆನಪಿದ್ದುದರ ಮಟ್ಟಿಗೆ ಕೆಲವು ಕಥೆಗಳ ಅಂತ್ಯ ಹೀಗಿದೆ:

(೧) "ದೇವ! ಹೆಣ್ಣುಜನ್ಮ ಕೊಡಬೇಡ!"

(೨) "ಆ ಮನೆಯಲ್ಲಿ ಈಗಲೂ ವಿಲಾಸಿನಿಯು ಮಹಡಿಯ ಮೆಟ್ಟಲುಗಳನ್ನಿಳಿದು ಪುನಃ ಮೇಲಕ್ಕೆ ಹತ್ತಿದಂತೆ ಶಬ್ದವಾಗುತ್ತಿದೆಯೆನ್ನುವರು."

(೩) "ಅವಳ ಪ್ರೀತಿಯ ಆ ಚಿಕ್ಕಿನ ಮರಿಯನ್ನು ಹೂತಲ್ಲೇ ಮಾಲತಿಯ ಪ್ರೇತವು ಬಂದು ಕುಳಿತು ಕಣ್ಣೀರು ಸುರಿಸುತ್ತಿದೆ."

(೪) "ಸಾಗರದ ಘೋರ್ಗರೆವ ಅಲೆಗಳು ಅವಳನ್ನು ಸ್ವಾಗತೀಕರಿಸಿದುವು. ಮಿಂಚಿಲಿಯು ಅದರಲ್ಲಿಳಿದು ಹೋದಳು. ವಾಯುದೇವನು ಘೋ ಘೋ ಘೋ ಎಂದನು. ಒಮ್ಮಿಂದೊಮ್ಮೆ ಗಾಳಿ ನಿಂತಿತು; ಅಲೆಗಳೂ ನಿಂತುವು. ಎಲ್ಲೆಲ್ಲಿಯೂ ಪರಮ ಶಾಂತಿ!"

(೫) "ಅವರು ಚಿಕ್ಕಂದಿನಿಂದಲೂ ಕುಳಿತು ತೂಗುತ್ತಿದ್ದ ಆ ಉಯ್ಯಾಲೆಯ ಎಡಬದಿಯ ಹಗ್ಗವು. ಅಷ್ಟು ವರ್ಷಗಳಿಂದಲೂ ಆಕೆಯ ಪ್ರೇಮಪೂರಿತ ಎಡಕೈಯ ಸ್ಪರ್ಶದಿಂದ ತಾನೂ ಪ್ರೇಮವನ್ನು ಕಲಿಯದೆ ಹೋಯಿತೇ? ಯಾವಾಕೆಯ ಹೃದಯಕ್ಕೆ ಆ ಉಯ್ಯಾಲೆಯ ಹುರಿಹಗ್ಗವು ಆನಂದವನ್ನೀಯುತ್ತ ಯಾವ ಕಂಠದಿಂದ ಶುಕವಾಣಿಯನ್ನು ಹೊರಡಿಸುತಿತ್ತೋ ಆ ಕಂಠವನ್ನು ನಿಷ್ಠೂರವಾಗಿ ಆ ಹಗ್ಗವು..........."

ಅಹುದು, ಅವರೆಲ್ಲರೂ ಸಾಯುವರು! ಯಾರ ಬಗ್ಗೆ ಬದುಕಲಿ? ಅವರು ಬದುಕಿದರೆ, ಆ 'ಕ್ರೂರ ಸಮಾಜ'ಕ್ಕೆ ಬುದ್ಧಿ ಬರಬೇಡವೆ?

ಓರ್ವ ತರುಣ ಕತೆಗಾರನು, ಕೋಪ-ದುಃಖಗಳನ್ನು ತಡೆಯಲಾರದೆ, ತನ್ನ ನಾಯಕಿಯನ್ನು ಕೊಂದ ಅನಂತರ ನಾಲ್ಕು ಚುಕ್ಕಿಗಳನ್ನು ಬರೆದು, ಅದರ ನಂತರ ಹೀಗೆ ಪ್ರಶ್ನಿಸಿರುವನು.

"ಮಾತಾಪಿತೃಗಳೇ! ನಿಮಗೆ ಹೃದಯವಿದ್ದರೆ ಈಗ ಒಡೆಯದೆ ಇದ್ದಂತೇ ಇದೆಯೇ? ಇದ್ದವಳೊಬ್ಬಳೇ ಮಗಳು. ಈ ತನಕ ನೀವು ಬದುಕಿದುದು ಅವಳಿಗಾಗಿ. ಈಗ ಅವಳು ನಿಮ್ಮ ಕ್ರೌರ್ಯದಿಂದ ಇಹವನ್ನು ತ್ಯಜಿಸಿರಲು, ನೀವೂ ಅವಳನ್ನು ಹಿಂಬಾಲಿಸದೆ ಹೇಗೆ ಇರುವಿರಿ?.... ಆದರೆ, ಬೇಡ, ಬೇಡ. ನೀವು ಅಲ್ಲಿಗೂ ಹೋಗಬೇಡಿ. ಅಲ್ಲಾದರೂ ಅವಳು ನೆಮ್ಮದಿಯಿಂದಿರಲಿ! ಅವಳ ಪವಿತ್ರ ಆತ್ಮವು........!"

.........ಬಹುಶಃ ಇಲ್ಲಿ ಆ ಲೇಖಕನು ದುಃಖ ತಡೆಯಲಾರದೆ ಕಣ್ಣೀರು ಸುರಿಸಿರಬೇಕು. ಮೂಲಪ್ರತಿಯಲ್ಲಿ ನೀರಿನ ತಟಕುಗಳು ಬಿದ್ದ ಗುರು

ತಿತ್ತೆಂದು ಸಂಪಾದಕರು ನನ್ನ ಗೆಳೆಯ ಕೀಣುವಿನೊಡನೆ ಹೇಳುತ್ತಿದ್ದರಂತೆ. ಭಾವಪ್ರೇರಿತನಾಗಿ ಬರೆದಿದ್ದನು.

ಒಂದು ದಿನ ಕೀಣುವಿನೊಡನೆ ಹೇಳಿದೆ: "ಕೀಣು, ನಮ್ಮ ಕಥಾ ಸಾಹಿತ್ಯವು ಬೆಳೆದುಬರುವ ರೀತಿ ನೋಡಿ ಎಷ್ಟು ಸಂತೋಷ! ಇತ್ತೀಚೆಗಿನ ಸಣ್ಣ ಕಥೆಗಳನ್ನು ಓದಿರುವಿಯಾ?"

ಕೀಣು ಎಲ್ಲಿಯೋ ದೃಷ್ಟಿ ನೆಟ್ಟು ಉತ್ತರವಿತ್ತನು: "ಓದಿದ್ದೇನೆ. ನಾಯಕಿ ಸಾಯುತ್ತಾಳೆ!"

"ನಿಜ! ಎಷ್ಟು ಸೊಗಸು ನೋಡು! ಆ ನಾಯಕಿಗಳು ಬದುಕಿದ್ದರೆ ಸಮಾಜಕ್ಕೆ ಬುದ್ಧಿ ಬರುತಿತ್ತೇ?"

"ಅದೆಲ್ಲ ತರ್ಕದ ವಿಷಯ. ಈಗ ನೀನು ಇದಕ್ಕೇನನ್ನುತ್ತಿ?"— ಕೇಳಿದ ನನ್ನ ಮಿತ್ರ ಸರ್ವಜ್ಞ.

"ಯಾವುದಕ್ಕೆ?"

"ಸಮಾಜಕ್ಕೆ ಒಮ್ಮೆಗೇ ಫಕ್ಕನೆ ಬುದ್ಧಿ ಬರಲೆಂದು ಮೊನ್ನೆ ಒಬ್ಬ ಕತೆಗಾರನು, ನಾಯಕಿ—ಅವಳ ತಂದೆ—ತಾಯಿ—ಪ್ರಿಯತಮೆ—ಪ್ರಿಯತಮನ ತಾಯ್ತಂದೆಗಳು—ಮನೆಯ ಮೂವರು ಸೇವಕರು—ಹಟ್ಟಿಯಲ್ಲಿದ್ದ ಎರಡು ದನಗಳು—ಕಾವಲಿನ ನಾಯಿ—ನೆರೆಕರೆಯವರಿಬ್ಬರು ಇಷ್ಟು ಮಂದಿಯನ್ನು ಮೂರು ತಾಂವಿನ ಒಂದೇ ಕಥೆಯಲ್ಲಿ ಕೊಂದು ಸ್ವಸ್ಥ ಕುಳಿತಿದ್ದಾನೆ!" (ಕೀಣು, ಉಸಿರಿಗಾಗಿ ತಡೆದು, ನನ್ನನ್ನೆ ನೋಡಿದನು.)

"ಅಷ್ಟು ಮಂದಿಯೂ ಸತ್ತರೇ?"

"ಅವರಾಗಿ ಸತ್ತುದಲ್ಲ—ಕಥೆ ಬರೆದ ಮಾರಾಯ ಕೊಂದುದು!"

"ಆ ಕಥೆ ಓದಿದ ಪತ್ರಿಕಾ ಸಂಪಾದಕರು ಇನ್ನು ಮುಂದೆ ಇಂತಹ ಕಥೆಗಳನ್ನೋದಲಾರೆನೆಂದೂ ಪ್ರಕಟಿಸಲಾರೆನೆಂದೂ ಶಪಥಹಾಕಿಕೊಂಡು 'ನಾರದ ಕಥೆ' ಎಂಬ ಪುಟದಲ್ಲಿ "ರಷ್ಯದಿಂದ ನಮಗೆ ಬಂದ ಪತ್ರ" ಎಂದು ಪ್ರಕಟಿಸುತ್ತಿದ್ದಾರೆ.

"ಆ ಕಥೆಯ ಸುಳ್ಳಿಗಿಂತ ಈ ಸುಳ್ಳು ಲೇಸೆಂದು ಅವರನ್ನುತ್ತಾರೆ. ನಾನೂ ಒಪ್ಪುತ್ತೇನೆ" ಎಂದ ಕೀಣು.

"ಮಾರಾಯಾ, ಕಥೆಯಲ್ಲಿ ಕೆಲ ಮಂದಿ ಸತ್ತರೆ ಆ ಸಂಪಾದಕರಿಗೇನಂತೆ?"

"ಕೊಲೆಗಳಿಗೂ ಆತ್ಮಹತ್ಯಗಳಿಗೂ ಮಿತಿಬೇಡವೇ?"-ಕೀಣುವಿನ ಪ್ರಶ್ನೆ.

"ಮಿತಿಯನ್ನಿರಿಸುವವರು ಯಾರಂತೆ? ಒಂದು ಕಥೆಯಲ್ಲಿ ಹೆಚ್ಚಾದರೆ ಎಷ್ಟು ಮಂದಿ ಸಾಯಬಹುದಂತೆ?"

"ಒಬ್ಬನೇ ಯಾರಾದರೂ ಸಾಯುವುದೊಳ್ಳಿತು. ಫಕ್ಕನೆ ಕತೆಗಾರನ ಲೇಖನಿಯು ವಿಶೇಷ ಚೂಪಾಗಿದ್ದರೆ ಅವನು, ಹೆಚ್ಚೆಂದರೆ ಮೂವರನ್ನು (ನಾಯಕಿ—ನಾಯಕ—ನಾಯಕಿಯ ತಾಯಿ) ಕೊಲ್ಲಲಿ. ಇದನ್ನು ಬಿಟ್ಟು ಹದಿನೈದು ಮಂದಿಯನ್ನು ಕೊಲ್ಲುವುದೆಂದರೇನು! ಹಟ್ಟಿಯ ದನಗಳೂ ಕಾವಲಿನ ನಾಯಿಯೂ, ನೆರೆಕರೆಯ ಇಬ್ಬರೂ ಇವರೆಲ್ಲ ಸಾಯುವುದೇಕಂತೆ? ಆ ನಾಯಕಿಯ ಪ್ರೇಮಭಂಗವು ಮಹಾಮಾರಿ ರೋಗಕ್ಕಿಂತಲೂ ಭಯಂಕರವೇ........"

ಕೀಣು ಮುಂದೇನು ಮಾತಾಡಿದನೋ ನಾನು ಕೇಳಲಿಲ್ಲ. ಅವ ಭಾರೀ ಬುದ್ಧಿವಂತ ಮನುಷ್ಯ. ಕಥೆ ವಿಷಯದಲ್ಲಿ ಮಾತ್ರ ನನಗೂ ಅವನಿಗೂ ಅಭಿಪ್ರಾಯಭೇದ. ನಾನು ಮಾತಾಡದೆ, ನಾಳೆ ಸಿಗುವೆನೆನ್ನುತ್ತ ಹೋದೆ.

---

೧೪. ಹೇ ನಾರಿ! ಪುರುಷನನ್ನು ದೂರಬೇಡ!

ಹೇ ನಾರಿ!

ಬಹುಕಾಲದಿಂದ ಒತ್ತಿಟ್ಟ ಉಸಿರು—ತಡೆಯಲಾರದೆ ಜ್ವಾಲಾಮುಖಿಯಂತೆ ಹೊರಬಿದ್ದಿದೆ. ಓದಿ ಸಿಟ್ಟಾಗಬೇಡ.

ಮುನಿಸಿಪಲ್ ಕೌನ್ಸಿಲಿನಲ್ಲಿ, ಜಿಲ್ಲಾ ಬೋರ್ಡಿನಲ್ಲಿ, ಎಸೆಂಬ್ಲಿಯಲ್ಲಿ, ಯುದ್ಧ ಇಲಾಖೆಯಲ್ಲಿ ಎಲ್ಲೆಲ್ಲೂ ನಿನಗೆ ಸ್ಥಾನ ಬೇಕೆಂದೆ. ಕೊಡದಿದ್ದರೂ ಕಸಿದುಕೊಂಡೆ. 'ಸಮಾನಹಕ್ಕು' ಎಂದು ಹೇಳಿದೆ; ಪೂರ್ಣ ಹಕ್ಕನ್ನು ಇಟ್ಟುಕೊಂಡೆ. ಜಗತ್ತಿನ ಎಲ್ಲ ಉತ್ತಮ ವಸ್ತುಗಳು ನಿನಗೆಂದೆ; ಕಿತ್ತು

ಕೊಂಡೆ. ಇನ್ನೂ ಪುರುಷನು ಕ್ರೂರ—ಒರಟು—ಹೇಡಿ ಎನ್ನುತ್ತಿರುವೆ. ಸಹಿಸಲಾರದೆ ಎರಡು ಪಂಕ್ತಿ ಬರೆದಿದ್ದೇನೆ.

ಪುರುಷನದೇನು ಕ್ರೌರ್ಯ? ಚಿಕ್ಕ ಮಗುವಾಗಿದ್ದ ಕಾಲದಿಂದ ಪುರುಷನು ನಿನಗಾಗಿ ದಣಿದನು. ನೀನು ಹುಟ್ಟಿದ ನಿಮಿಷದಿಂದ ನಿನ್ನ ಭಾವೀ ಕಲ್ಯಾಣದ ಚಿಂತೆಯಿಂದ ಕೊರಗಿದನು. ಚಿಕ್ಕಮ್ಮಣ್ಣಿಯು ಚಿಕ್ಕಮ್ಮನಾಗಿ ಬೆಳೆದು ಅಮ್ಮನಾಗುವ ತನಕ ನಿನ್ನ ಅಲಂಕಾರ—ನಿನ್ನ ಪಾಲನೆ—ನಿನ್ನ ಮೇಲ್ಮೆಗಾಗಿಯೇ ಜೀವನ ಸವೆಯಿಸಿದನು. ಅದನ್ನು ತಿರುಗುಮುರುಗಾಗಿ ಮಾಡಿ, "ಬಾಲ್ಯದಲ್ಲಿ ತಂದೆಯ ದಾಸಿಯಾಗಿ, ಯೌವನದಲ್ಲಿ ಗಂಡನ ದಾಸಿಯಾಗಿ, ವೃದ್ಧಾಪ್ಯದಲ್ಲಿ ಮಗನ ದಾಸಿಯಾಗುತಿದ್ದೇನೆ ಎಂದು ದೂರಿಡುವೆ; ಗೋಳಿಡುವೆ. ಶಬ್ದಶಕ್ತಿ ಸಾಲದೆ ಪುರುಷನು ಅಸಹಾಯನಾಗಿ ನೋಡಿ, ಕೇಳಿ, ಕಳವಳಿಸುತಿದ್ದಾನೆ. ದೂರಬೇಡ ಪುರುಷನನ್ನು!

ರಸ್ತೆಯಲ್ಲಿ ನಡೆವಾಗ ನಿನಗೆ ದಾರಿಕೊಡಲು ಸರಿದು ನಿಲ್ಲುವವನು ನಾನೇ; ಸರಿದುಕೊಳ್ಳದೆ ನೇರಾಗಿ ಹರಿದುಹೋಗುವವಳು ನೀನೇ. ಪ್ರಮಾದವಶಾತ್ ನನ್ನ ಭುಜವು ನಿನ್ನ ಭುಜಕ್ಕೆ ತಗಲಿತೆಂದರೆ ಲೋಕದ ಕ್ರೋಧಾವೇಶಕ್ಕೀಡಾಗುವವನು ನಾನು—ಯತ್ನದಿಂದ ಭುಜಹೊಡೆದೂ ಗೆಲ್ಲುವವಳು ನೀನು! ಬಸ್ಸಿನಲ್ಲಿ ನಿನಗೆ ಸ್ಥಳ ಕೊಟ್ಟು ಕುಳ್ಳಿರಿಸಿ, ದೂರದಲ್ಲಿ ಬಾಗಿನಿಂತು ತಲೆಯನ್ನು ಮೇಲ್ಮಾಡಿನೊಡನೆ ಚೆಂಡಾಟಕ್ಕೆ ಬಿಟ್ಟು—ಅಳು ಬಂದರೂ ಕಣ್ಣೀರಿಳಿಸದೆ ಸಹಿಸಿ ನಗುವವನು ನಾನು! ಕುಳಿತು ಆನಂದದಿಂದ ಪುರುಷವರ್ಗದ ಮಂಗತನವನ್ನು ನೋಡಿ ನಸುನಗುವ ನೀರೆ ನೀನು! ನಿನ್ನ ಕರವಸ್ತ್ರ ಬಿದ್ದರೆ, ನಾಗರಿಕ ಪದ್ಧತಿಯಂತೆ ಹೆಕ್ಕಿಕೊಟ್ಟು ಜತೆಗೆ ವಂದನೆಯನ್ನು ಹೇಳುವವನು ನಾನು—ನನ್ನ ಕರವಸ್ತ್ರ ಬಿದ್ದರೆ ಪಾದಧೂಳಿಯಿಂದ ಪಾವನಮಾಡಿ ಮುನ್ನಡೆವವಳು ನೀನು! ನಿನ್ನನ್ನು ಸಂಬೋಧಿಸಬೇಕಾದರೆ 'ಅಮ್ಮಾ' ಎನ್ನುತಿದ್ದೇನೆ. ನೀನು ನನ್ನನ್ನು ಸಂಬೋಧಿಸುವಾಗ—ನಾನು ಯಾವ ಲಿಂಗಕ್ಕೂ ಸೇರದವನಂತೆ 'ಏಯ್' ಎನ್ನುವೆ. ಸಿನೆಮ, ನಾಟಕಗಳಲ್ಲಿ ನಿನ್ನ ಹೆಸರಲ್ಲಿ 'ಸ್ತ್ರೀಯರಿಗೆ ಪ್ರತ್ಯೇಕ'ವೆಂದು ಮರ್ಯಾದಾಪೂರ್ವಕವಾಗಿ ಸ್ಥಳವನ್ನು ಪ್ರತ್ಯೇಕಿಸಿ, ನೀನು ಸಿಟ್ಟೇರಬಾರದೆಂದು 'ಕುಲೀನ' ಎಂದೂ ಸೇರಿಸುತಿದ್ದೇನೆ. ಇಂಗ್ಲಿಷಿನಲ್ಲಿ ಸಂಬೋಧಿಸು

ಹಾಗ 'ಲೇಡಿ' ಎನ್ನುತಿದ್ದೇನೆ. ನೀನು "ದೇಟ್ ಫೆಲ್ಲೋ" ಎನ್ನುತ್ತಿ! ಪುರುಷನನ್ನು ದೂರಬೇಡ!

ನಿನ್ನನ್ನು 'ಅಬಲೆ'ಯೆನ್ನುತಿದ್ದೇನೆ, ನಿಜ. ಆದರೆ, ರಾಜ್ಯವನ್ನೆ ನುಂಗಿ ನೀರು ಕುಡಿವ ನಿನ್ನ ಶಕ್ತಿ ತಿಳಿಯದೆ ಅಲ್ಲ. ನಾನು ಅಬಲನೆಂಬು ದನ್ನು ಮರೆಯಲೋಸುಗ ಸ್ವವಂಚನೆಗಾಗಿ ನಿನ್ನನ್ನು ಅಬಲೆಯೆನ್ನುತಿದ್ದೇನೆ. ನನ್ನನ್ನೆ ನಾನು 'ಪುರುಷಸಿಂಹ'ನೆಂದು ಹೇಳಿಕೊಂಡು ಕೊಂಚ ಆನಂದ ಪಟ್ಟರೆ ನೀನು ಮತ್ಸರಿಸಬಾರದು. ಲಿಂಗಧರ್ಮದಿಂದಲೂ ಹಾಗೆಂದು ಕೊಳ್ಳುತಿದ್ದೇನೆ. ನಿನಗೆ ನವಶಕ್ತಿಯ ಸಾಮ್ಯ ಕೊಟ್ಟಿದ್ದೇನೆ. ನನ್ನ ಶಕ್ತಿ ಒಂದು ಅಥವಾ ಸೊನ್ನೆ. ನಿನ್ನ ಶಕ್ತಿ ಒಂಭತ್ತು ಅಥವಾ ಹೆಚ್ಚು. ಪುರುಷ ನನ್ನು ದೂರಬೇಡ!

ನಾರಿ! ಕುಶಲ ಕರ್ಮಚಾರಿಗಳಿರುವುದು ಯಾರಿಗಾಗಿ? ನಿನಗಾಗಿ. ಬಂಗಾರ ಅಗೆವುದಾರಿಗಾಗಿ? ನಿನಗಾಗಿ. ಒಳ್ಳೊಳ್ಳೆ ಆಭರಣಗಾರರು ನಿನ್ನಿಂದ ಜೀವಿಸಿರುವರು; ಬಟ್ಟೆ ಗಿರಣಿಗಳು ನಿನಗಾಗಿರುವುವು; ಒಳ್ಳೊಳ್ಳೆ ತರಗತಿಯ ಬಟ್ಟೆ ತಯಾರಿಸುವ ವಿಚಕ್ಷಣರು ಜನ್ಮಕ್ಕೆ ಬರುವುದು ನಿನ ಗಾಗಿ; ಬಣ್ಣಗಾರರು ನಿನಗಾಗಿ. ಹೂಗಳು ನಿನಗಾಗಿ; ಕೊನೆಗೆ ಆನೆಗಳು ಹುಟ್ಟುವುದೂ---ತಮ್ಮ ದಂತದ ದಾನಮಾಡಲೆಂದು—ನಿನಗಾಗಿ! ಅದೆಲ್ಲ ವನ್ನೂ ನಿನಗಾಗಿ ದೊರಕಿಸಿಕೊಡಲು ಪುರುಷನು ಒಂದು ಯಂತ್ರ; ಅಥವಾ ಒಬ್ಬ ಸೇವಕ. ಇಂತಹ ದೀನ ಪ್ರಾಣಿಯನ್ನು ದೂರಬೇಡ!

ನಾರಿ! ನೀನು ಹೇಳಿದಂತೆ ಕುಣಿಯದಿದ್ದರೆ ನಿನ್ನಿಂದ 'ಪತ್ನಿಪೀಡಕ' ನೆಂಬ ಸಂಭಾವನೆ! ಕುಣಿದರೆ, ಹೊರಗಿನಿಂದ 'ಪತ್ನಿದಾಸ'ನೆಂಬ ಬಿರುದು! ಪುರುಷನನ್ನು ದೂರಬೇಡ!

ನಾರಿ! ಮದುವೆಯಾಗುವ ತನಕ ಮಾತ್ರ ನಿನ್ನನ್ನು 'ಚಿನ್ನ-ಮುದ್ದು' ಎಂದು ಕರೆದು, ಮತ್ತೆ ಮರೆವೆನೆನ್ನುವೆ. ಹೀಗೂ ಕೇಳಬೇಕಾಯಿತು! ನಾರಿ! ಮದುವೆಯಾದ ಅನಂತರ ಪುರುಷನ ಸಂಗ್ರಾಮ ಯಾರಿಗಾಗಿ? ಒಂದು ತಿಂಗಳು ನಿನಗೆ ಕಂಠಿಸರ; ಇನ್ನೊಂದು ತಿಂಗಳು ಮಣಿಸರ; ಮೂರನೆ ತಿಂಗಳು ಮುತ್ತಿನಸರ; ನಾಲ್ಕನೇ ತಿಂಗಳು ನವೀನ ನಗವೊಂದು; ಮತ್ತೆ 'ಎಸ್' ಬಳೆ—'ಜಿ' ಸರ—'ಝಡ್' ಬೆಂಡೋಲೆ—'ಡಬ್ಲ್ಯು'

ಕಡಗ—'ಎವರ್' ಪದಕ—ಈ ವರ್ಣಮಾಲೆಯಲ್ಲಿ ಹೋಯಿತು ನನ್ನ ಜನ್ಮ! ಜಗತ್ತಿಗೆಲ್ಲ ಟೊಪ್ಪಿ ತಿರುಗಿಸಿ ನಿನ್ನ ಬಳಿಗೆ ಓಡಿಬರುತಿದ್ದೇನೆ. ಜಗತ್ತಿನ ಎಲ್ಲ ಲತ್ತೆಗಳನ್ನು ತಿಂದು ನಿನ್ನೊಬ್ಬಳಿಗಾದರೂ ರಾಜನಾಗುವೆನೆಂದು ಆಶಿಸುತಿದ್ದೇನೆ. ಆದರೆ, ನೀನು ರಾಣಿಯುಹುದು; ನಾನು ಮಾತ್ರ ಯಾವ ಕಾಲಕ್ಕೂ ರಾಜನಲ್ಲ! ದೂರಬೇಡ.

ನಾರಿ! ಪುರುಷನು ನಿನ್ನನ್ನು ಭೋಗವಸ್ತುವೆಂದು ತಿಳಿದು, ಮೂಲೆಗೆ ತಳ್ಳುವನೆನ್ನುವೆ. ಮದುವೆಯಾಗಬೇಕಾದರೆ ನಿನ್ನನ್ನು ನೋಡಲು ಬಂದು, ಸರಕು ನೋಡಿದಂತೆ ನೋಡಿ, ತಿರಸ್ಕರಿಸಿ ಹೋಗುವುದಿದೆನ್ನುವೆ. ನಿನ್ನನ್ನು ಹಾಡಿಸಿ, ನಗಿಸಿ, ನಡೆಸಿ, ಮತ್ತೆ ಒಲ್ಲೆನೆಂದು ಹೊರಟುಹೋಗುವೆನೆನ್ನುವೆ. ನಾರಿ! ನಿಜ. ನಿನ್ನ ದಾಸನಾಗಲು ಮಾಡಿದ ಯತ್ನವದು. ನಾನು ತಿರಸ್ಕರಿಸಿದರೆ ನೀನು ಗೆದ್ದಿಯೆಂದರ್ಥ. ತಿರಸ್ಕರಿಸದಿದ್ದರಂತೂ ನೀನೇ ರಾಣಿ, ನಾನು ನಿನ್ನ ಸೇವೆಮಾಡುವ ದೀನ ಪ್ರಾಣಿ. ನೀನು ಅಂಗಡಿಯ ಸರಕಿನಂತಾದೆ ಎಂದು ತಿಳಿಯಬೇಡ. ಮದ್ಯಪಾನ ಮಾಡುವವನೂ ಈ ಮದ್ಯ ಒಳ್ಳೆಯದು—ಆ ಮದ್ಯ ಕೆಟ್ಟದ್ದು ಎಂದು ನೋಡುವುದಿದೆ. ನೀನು ಮದ್ಯ. ಬಾಟಲಿ ನೋಡಿ, ಕೀರ್ತಿ ಕೇಳಿ, ಬಣ್ಣ ಕಂಡು, ಮತ್ತೆ ಕುಡಿದು, ಮುಂದೆ ಅದರ ದಾಸಾನುದಾಸನಾಗಿರುವಂತೆ, ನಿನ್ನನ್ನು ನಿಟ್ಟಿಸಿ, ನಿಲ್ಲಿಸಿ, ನಗಿಸಿ, ನಲಿಸಿ, ನುಡಿಸಿ, ನೆಚ್ಚಿ, ಮತ್ತೆ ಒಲಿಸಿ—ಅನಂತರ ಎಂದೆಂದೂ ನಿನ್ನ ಕೈಗೊಂಬೆಯಾಗಿ ನಾನೇ ನಿಟ್ಟಿಸಲ್ಪಟ್ಟು, ನಿಲ್ಲಿಸಲ್ಪಟ್ಟು, ನಗಿಸಲ್ಪಟ್ಟು, ನಲಿಸಲ್ಪಟ್ಟು, ನುಡಿಸಲ್ಪಟ್ಟು,—ನಿನ್ನ ಆನಂದಕ್ಕಾಗಿಯೇ ಭಾಷೆ ತೊಟ್ಟು ಹೊರ ಜಗತ್ತಿಗೆ ಇಲ್ಲದಾಗುವೆನು. ದೂರುವೆಯಾ!

ನಾರಿ! ಮದುವೆಯಾಗುವ ತನಕ ಅಪ್ಪ ಅಮ್ಮ ಅಣ್ಣ ಯಾರೂ ನನ್ನನ್ನು ಬಂಧಿಸಿರದಷ್ಟು ಚೆನ್ನಾಗಿ ನೀನು ಬಂಧಿಸಿರುವೆ. ಹಾಸಿಗೆಯಿಂದೇಳಲು ಹೊತ್ತಾದರೆ, 'ಮಗೂ ಏಳು!' ಎಂದು ಅಕ್ಕರೆಯಿಂದ ಅಮ್ಮ ಅಮೃತ ಸುರಿಸುತಿದ್ದಳು. ನೀನು, 'ಇಸ್ಸೀ-ಇನ್ನೂ ನಿದ್ದೆ' ಎಂದು ಬುಸ್ಸೆನ್ನುತ್ತಿರುವೆ. ಬೇಗ ಎದ್ದರೆ 'ಈ ದಿನ ಏನು, ಕಾಗೆಯಂತೆ ಬೇಗ ಎದ್ದಿರಿ?' ಎಂದು ಪ್ರಶ್ನಿಸುವೆ. ಹೊರಗೆ ಹೋಗಿ ಯಾರಿಗಾದರೂ ಟೊಪ್ಪಿ ತಿರುಗಿಸಲು ಸ್ವಲ್ಪ ಕಷ್ಟವಾಗಿ ಮನೆಗೆ ಹಿಂದಿರುಗಲು ತಡವಾದರೆ ಹೊರ

ಬಾಗಿಲಲ್ಲಿ ಮಿಲಿಟರಿ ಕಾವಲಿನಂತೆ ನಿಂತು ನನಗೆ ಸವಾಲು—ಪಾಟಿ ಸವಾಲು—ಮರುಸವಾಲು—ಹಾಕಿಯೇ ಮತ್ತೆ ಪ್ರವೇಶ ಕೊಡುವೆ. ರಾತ್ರಿಯೂಟವಾಗಿ ಎರಡು ತಾಸು ನಾಟಕವೋ ಸಿನೆಮವೋ ಮತ್ತಾವ ವಿನೋದವೋ ನೋಡಿ ಜಗತ್ತಿನ ದುಃಖವನ್ನು ಮರೆಯೋಣವೆಂದರೆ ನಿನ್ನಿಂದ 'ಪಾಸ್‌ಪೋರ್ಟು' ಸಿಗಲು ಅರ್ಧ ತಾಸು ತನಕ, ಸರಕಾರಕ್ಕಿಂತ ಕಠಿನ ತರದ ಪ್ರಶ್ನೆಗಳಿಗೆ ಉತ್ತರಕೊಡಬೇಕು. ನೀನು ಹೊರಹೊರಟರೆ, ಪ್ರಶ್ನಿಸಲೇ ಆರೆ. ಒಂದೊಮ್ಮೆ ಪ್ರಶ್ನಿಸಿದರೆ, 'ಹೇಡಿತನ'—'ಅಬಲೆಯ ಮೇಲೆ ಕ್ರೌರ್ಯ'—'ಅನಾಗರಿಕತನ'—'ನಿರ್ಬಂಧ'-'ದಬ್ಬಾಳಿಕೆ'—ಮುಂತಾದ ಎಲ್ಲ ಆಪಾದನೆಗಳಿಗೆ ಗುರಿಯಾಗುತಿದ್ದೇನೆ. ಮತ್ತೂ ದೂರುವೆಯಾ!

ನಾರಿ! ನೀರಿನಲ್ಲಿರುವ ಮೀನಿನ ಕಣ್ಣು ನಿನ್ನದು—ನೀರ್ಕುದುರೆಯ ಸಾಮ್ಯ ನನ್ನದು!

ಘರ ಘರ ಶಬ್ದ ಮಾಡುವ—ಪರ ಪರ ಪರಚುವ—ಕರಕರ ಕಚ್ಚುವ—ಎಲ್ಲ ಕೆಟ್ಟ ಪ್ರಾಣಿಗಳಿಗೆ ನನ್ನನ್ನು ನಾನೇ ಹೋಲಿಸಿಕೊಳ್ಳುತಿದ್ದೇನೆ. ಅನ ಪಾಯಕಾರಿಯಾದ ಸುಂದರ ಜಿಂಕೆ ಕಂಡರೆ ನಿನಗೆ ಹೋಲಿಸುತ್ತೇನೆ. ಮೊಲ ಕಂಡರೂ ನಿನ್ನ ನೆನಪು. ನವಿಲು ಕಂಡರೂ ನಿನ್ನ ನೆನಪು. ಹುಲಿ-ಕರಡಿ-ಸಿಂಹಗಳು ನನಗೆ! ಜಿಂಕೆ—ಮೊಲ—ನವಿಲುಗಳು ನಿನಗೆ! ಮೈನಾ ನೀನು—ಮಂಡೂಕ ನಾನು! ಕೋಕಿಲ ನೀನು—ಕಾಗೆ ನಾನು! ಮದಗಜ ನೀನು—ಮಂಗರಾಜ ನಾನು! ಸುಸ್ವರ ನಿನಗೆ—ಅಪಸ್ವರ ನನಗೆ! ನಯ ವಿನಯ ನಿನಗೆ—ದೊರಗು ಕರ್ಕಶ ನನಗೆ!

ನಾರಿ! ಕಲ್ಪವೃಕ್ಷದಂತೆ ಸರ್ವೋಪಯೋಗಿ—ಸರ್ವಾವತಾರಿಣಿ ನೀನೆ! ಕಾರ್ಯದಲ್ಲಿ ಮಂತ್ರಿ, ಗೃಹದಲ್ಲಿ ರಾಣಿ, ಪಾಲನೆಯಲ್ಲಿ ತಾಯಿ, ಶಯ್ಯೆಯಲ್ಲಿ ಭಾರ್ಯೆ—ಒಂದೇ ದೇಹದಲ್ಲಿ ಹೀಗೆ ನಾನಾ ಅವತಾರಗಳನ್ನು ತಾಳ ಬಲ್ಲ ಸರ್ವಶಕ್ತೆ ನೀನೆ. ಪುರುಷನನ್ನು ಒಮ್ಮೊಮ್ಮೆ ಬಾಯಿತಪ್ಪಿ 'ಮಣ್ಣಿನಲ್ಲಿನ ಹೊನ್ನು' ಎಂದು ಹೆಸರಿಸಿದರೂ....ನಾರಿ! ಆ ಹೊನ್ನು, ವಿವಾಹವಿಧಾನದಿಂದ ಸ್ವಚ್ಛಪಡಿಸಿದಾಗ ನಿನ್ನದೇ ಆಗುವುದು. ಆ 'ಹೊನ್ನು' ತಾನು ಬಯಸುವುದೂ ಹೆಮ್ಮೆಪಡುವುದೂ ಇಷ್ಟನ್ನೆ: "ನಾನು ಸ್ವಚ್ಛವಾದರೂ ಹೆಣ್ಣಿನ ಕೊರಳಲ್ಲಿ ಶೋಭಿಸುವೆನು!"

ನಾರಿ! ಎಲ್ಲ ಸುಂದರ ಪ್ರಾಣಿಗಳನ್ನು ಭಗವಂತನು ನಿನ್ನ ಬಗ್ಗೆ ಉಪಮೆಗಾಗಿ, ಉಪಾಹಾರಕ್ಕಾಗಿ, ಉಪಾಸನೆಗಾಗಿ ರಚಿಸಿದನು. ಎಲ್ಲ ಸುಂದರ ವಸ್ತುಗಳು ನಿನ್ನ ಉಪಭೋಗಕ್ಕಾಗಿ ರಚಿತವಾದುವು.

ಸುವಾಸಿನಿ! ಗಿಡದಲ್ಲಿ ಬೆಳೆದು ಅರಳಿ ನಲಿದು ಎಲ್ಲರಿಗೂ ಸಂತೋಷ ಕೊಡುವ ಸುವಾಸಿಕ ಪುಷ್ಪವು ನಿನಗಾಗಿ ಕೊಯ್ಯಲ್ಪಡುತ್ತಿದೆ. ಸುವಾಸನಾ ದ್ರವ್ಯಗಳು ನಿನಗೆಂದೇ ತಯಾರಾಗುತ್ತಿವೆ.

‘ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೆ ತತ್ರ ದೇವತಾ’ ಎಂದು ನಿನ್ನನ್ನು ಮೊದಲಿಂದಲೂ ಪೂಜಿಸಿ ದಾಸಾನುದಾಸನಾದ ಪುರುಷನು, ಹಾಗೆ ಪೂಜಿಸಿದ ತನ್ನ ಕೃತಿಯನ್ನು ಹೊಗಳುವವರಾರೂ ಕಾಣದೆ–ತನ್ನನ್ನು ತಾನೇ ಮೆಚ್ಚಲು ಹಾಗೆ ಬರೆದು ಪ್ರಚುರಿಸಿದನು. ಸಾಲದೆ? ನಿನ್ನ ಮಹಿಮೆಯನ್ನು ತಿಳಿಯಲಾರದೆ :‘ಮತ್ಸ್ಯಪಾದೋ ಜಲದೃಷ್ಟ್ವಾ....ನಾರೀಚಿತ್ತಂ ನ ಪಶ್ಯತಿ’ ಎಂದನು. ತಪ್ಪೇ? ನಿನ್ನ ದಾಸನಾಗಲು ವಿಳಂಬವಿರಬಾರದೆಂದು “ಅಷ್ಟವರ್ಷೇ ಭವೇತ್ ಕನ್ಯಾ” ಎಂದು ಅವಸರ ಮಾಡಿದನು. ಪಾಪವೇ? ನಿನ್ನ ಸೇವೆಗಾಗಿ ದಾಸಕುಲವು ಬೆಳೆಯಲೆಂದು “ಅಷ್ಟಪುತ್ರೋಭವ” ಎಂದಾಶಿಸಿದನು. ಹೆಚ್ಚಾಯಿತೇ? ಎಂಟಲ್ಲದಿದ್ದರೆ ಒಂದಾದರೂ ಇರಲೆಂದು ‘ಅಪುತ್ರಸ್ಯ ಗತಿರ್ನಾಸ್ತಿ’ ಎಂದನು. ಪ್ರಮಾದವಾಯಿತೇ? ನಾರಿ! ನಿನ್ನನ್ನು ಹೊಗಳಿದ ಪ್ರತಿಯೊಂದು ಸೊಲ್ಲು ನನ್ನ ಗುಲಾಮಗಿರಿಯನ್ನು ಬಲಪಡಿಸಲೆಂದೇ ಇದೆ. ಮತ್ತೂ ದೂರುವೆಯಾ!

ನೀನು ಅತ್ತರೆ ನನ್ನ ಎದೆಯೊಡೆಯಿತು. ನಕ್ಕರೂ ಒಡೆಯಿತು! ನೀನು ಮೌನವಾಗಿದ್ದರೆ ಸೋತೆ; ಬಾಯಿ ಬಿಟ್ಟರೂ ಸೋತೆ! ನೀನು ಆಶಿಸಿದ್ದನ್ನೆಲ್ಲ ಕೊಡದಿದ್ದರೆ ನಿನ್ನ ದೃಷ್ಟಿಯಲ್ಲಿ ಕ್ರೂರನು, ಕೊಟ್ಟರೆ ಲೋಕದ ದೃಷ್ಟಿಯಲ್ಲಿ ಹೇಡಿ!

ರಣಾಂಗಣದಲ್ಲಿ ಹೊಕ್ಕು ಅರಿಗಳ ಶಿರಗಳನ್ನು ತರಿದಾಡಿ ಬರುವ—ಮಹಾರಣ್ಯಗಳಲ್ಲಿ ಪ್ರವೇಶಿಸಿ ಕ್ರೂರ ಮೃಗಗಳಿಗೆ ಹೆದರದೆ—ಹುಲಿಪೊದರನ್ನಾದರೂ ಹೊಕ್ಕಿ ಮರಳಿ ಬರುವ—ಸಪ್ತ ಸಮುದ್ರಗಳಲ್ಲೂ ಪ್ರವಾಸ ಮಾಡಿ ಪ್ರಯಾಸಗೊಳ್ಳದೆ ತಿರಿಗಿ ಬರುವ—ಭೀಕರ ಪರ್ವತಪ್ರಾಂತ್ಯಗಳನ್ನು ಸುತ್ತಾಡಿ ಹಿಂದಿರುಗುವ ಪುರುಷಸಿಂಹನು ನಿನ್ನ ಬಳಿಗೆ ಬಂದಾಗ ಒಂದು

ಆಡಿನ ಮರಿಯಂತೆ, ಒಂದು ಮೊಲದಂತೆ, ಒಂದು ಹಕ್ಕಿಯಂತೆ, ಒಂದು ಮರಿಜಿಂಕೆಯಂತೆ! ಇನ್ನೂ ದೂರುವೆಯಾ!

ನಾರಿ! ಬಂಗಾರದಂತಹ ಎಷ್ಟು ವೀರರು ಕೇವಲ ನಿನಗಾಗಿ ಬಲಿದಾನ ಅರ್ಪಿಸಿಕೊಳ್ಳಲಿಲ್ಲ! ಎಷ್ಟು ಮಂದಿ ನಿನಗಾಗಿ ಆತ್ಮಹತ್ಯ ಮಾಡಿಕೊಂಡಿಲ್ಲ! ಎಷ್ಟು ಮಂದಿ ನಿನಗಾಗಿ ಅಪ್ಪ—ಅಮ್ಮಗಳನ್ನು ಬಿಟ್ಟುಬಂದಿಲ್ಲ! ಎಷ್ಟು ಮಂದಿ ನಿನಗಾಗಿ ಸ್ವಾತಂತ್ರ್ಯಕ್ಕೆ ತಿಲಾಂಜಲಿ ಕೊಡಲಿಲ್ಲ! ನೀನೆಷ್ಟು ಕಿರೀಟಗಳನ್ನು ಉರುಳಿಸಿಲ್ಲ! ಎಷ್ಟು ಮನೆಗಳನ್ನು ಮೈದಾನು ಮಾಡಿಲ್ಲ! ಎಷ್ಟು ಮೈದಾನುಗಳಲ್ಲಿ ನೆತ್ತರಿನ ಕಾಲುವೆ ಹರಿಸಿಲ್ಲ!

ಪುರಾಣಗಳಲ್ಲಿ, ಕಣ್ಣಿನಿಂದ ಪುರುಷರನ್ನು ಸುಟ್ಟಿರುವೆ; ಸುಡದವನಿಗೆ ಮೈಗೆಲ್ಲ ಕಣ್ಣು ಕೊಟ್ಟಿರುವೆ; ಭಸ್ಮಾಸುರನನ್ನು ಕೊಲ್ಲಬೇಕಾದರೆ ಈಶ್ವರನು ನಿನ್ನ ರೂಪವನ್ನು ತಾಳಬೇಕಾಯಿತು; ತ್ರಿಮೂರ್ತಿಗಳ 'ಸೈಜ'ನ್ನು ಕಡಿದು ಮಕ್ಕಳಾಗಿ ಮಾಡಿ ತೊಟ್ಟಿಲಲ್ಲಿ ಹಾಕಿರುವೆ; ನೀನು ವನಕ್ಕೆ ಹೋಗುವ ಪೂರ್ವ ಪೀಠಿಕೆಯಾಗಿ ದಶರಥನು ಪ್ರಾಣತ್ಯಾಗ ಮಾಡಿದನು; ನಿನ್ನನ್ನು ಅಶೋಕ ವನಕ್ಕೊಯ್ದು ದಶಕಂಠನು ಶೋಕಗೊಂಡನು, ಕೋಶ ಕಳಕೊಂಡನು, ಕೊನೆಗೆ ತಾನೇ ಹೋದನು; ಅರಸನ ನೆತ್ತರಿಂದ ತಲೆ ಬಾಚಿಕೊಂಡಿರುವೆ. ಪರಮಾತ್ಮನಿಗೆ ಎಂಜಲು ತಿನ್ನಿಸಿರುವೆ; ಭಾರತಯುದ್ಧವನ್ನು ಗೆದ್ದ ಅರ್ಜುನನು ನಿನ್ನಲ್ಲಿ ಸೋತಿದ್ದಾನೆ; ಭಾರತ ವರ್ಷಕ್ಕೆ ಹೆಸರಿತ್ತ ಭರತನು ಜನಿಸಲು ಪಿಂಡದಾನಮಾಡಿದ ದುಷ್ಯಂತನು ನಿನ್ನಲ್ಲಿ ಸೋತಿದ್ದಾನೆ....ಕನ್ನಡಿಯಲ್ಲಿ ಛಾಯೆತೋರಿದ ಮಾತ್ರಕ್ಕೆ ಸಾವಿರಾರು ಮಂದಿಯ ನೆತ್ತರು ಹರಿಸಿರುವೆ; ಅಭಯಚಂದ—ಉಭಯಚಂದರಿಗೆ ನೂರಾರು ಯೋದ್ಧರ ನಡುವೆ ಹಾದು ಹೋಗುವ ಶಕ್ತಿ ದಾನಮಾಡಿರುವೆ; ಕತ್ತಿ ಮುಟ್ಟದೆ ವಿಜಯನಗರ ಸಾಮ್ರಾಜ್ಯವನ್ನು ಇಸ್ಪೀಟು ಎಲೆಗಳನ್ನುರುಳಾಡಿಸಿ ಬಿಟ್ಟಂತೆ ಸ್ವಚ್ಛ ಮಾಡಿರುವೆ; ನಿನ್ನ ಹೆಸರಿದ್ದರೆ ಚಲಚ್ಚಿತ್ರ ನಡೆಯುತ್ತಿದೆ, ನಿನ್ನ ರೂಪವೊತ್ತಿದರೆ, ಮಣ್ಣಿಗೆ ಹೊನ್ನಿನ ಬೆಲೆ ಬರುತ್ತದೆ. ನೀನಿದ್ದರೆ ಯುದ್ಧ ಮಾಡಲು ಬರುತ್ತಿದೆ. ಇಂದು ಸಿಗರೇಟು ಬೀಡಿಗಳನ್ನು ಕೊಂಡುಕೊಳ್ಳುವದಕ್ಕೂ ನಿನ್ನ ಚಿತ್ರ ನೋಡಿಯೇ ಕೊಂಡುಕೊಳ್ಳುವಂತಹ ಸ್ಥಿತಿಯೊದಗಿದೆ!

ನೀನಿದ್ದರೆ ಪುರುಷ, ನೀನಿದ್ದರೆ ಹರುಷ, ಇಲ್ಲವಿದರೆ ನೀರಸ, ವಿರಸ.

ಕಾರ್ಖಾನೆಗಳನ್ನೂ, ಕಚೇರಿಗಳನ್ನೂ, ಕೋರ್ಟುಗಳನ್ನೂ, ಕಾರ್ಯ (ರಾಜ) ನಿರ್ವಹಣವನ್ನೂ, ನೀನೇ ಪೂರ್ಣವಾಗಿ ನಡೆಸುವ ದಿನವನ್ನು ನಾವು ಎದುರು ನೋಡುತ್ತಿದ್ದೇವೆ. ಕೆಲಸಕ್ಕೂ ಸಹಾಯಕ್ಕೂ ಜನಸಿಗದ ಈ ದಿನಗಳಲ್ಲಿ ನಮಗೆ ಅನೇಕ ಕೆಲಸಗಳು ತಿಳಿಯುತ್ತ ಬಂದಿವೆ. ಗರ್ಭಧಾರಣೆಯೊಂದನ್ನು ಬಿಟ್ಟು ಮಿಕ್ಕುಳಿದ ಗೃಹಕಾರ್ಯಗಳನ್ನು ನಾವು ಈಗಲೇ ಕಲಿಯತೊಡಗಿದ್ದೇವೆ. ಈ ಯುದ್ಧ ಮುಗಿಯುವುದರೊಳಗೆ ಗಂಡು ಜಾತಿಯು ಪೂರ್ಣ ನಿರ್ನಾಮವಾಗದಿದ್ದರೆ, ಯುದ್ಧಾನಂತರದ ಪುನರ್ವ್ಯವಸ್ಥೆಯಲ್ಲಿ ಸರ್ವವೂ ನಿನ್ನದಾಗುವುದು; ಗಂಡು ಜಾತಿ ಅಳಿದು ಹೋದರಂತೂ—ಅದು ಪುನಃ ಬೇಕೇ ಎಂದು ಚೆನ್ನಾಗಿ ಆಲೋಚಿಸಿ ಅಪ್ಪಣೆಕೊಡುವುದು ನಿನ್ನದೇ ಕೆಲಸ.

ಸಾರಾಂಶವಾಗಿ ಇಷ್ಟೆ: ನಾವು ನಾವಲ್ಲ; ನೀನು ಮಾತ್ರ ನೀನು. ನೀನು ದೂರಿದರೆ ನನ್ನ ಇಯತ್ತೆ ಕಡಿಮೆಯಾದೀತೆಂದಲ್ಲ; ಆದರೆ, ಚೂರಾದವನನ್ನು ದೂರಿ ಫಲವೇನು! ನಿನ್ನನ್ನು ನೋಡಿದರೆ ನನಗಾಗುವಷ್ಟು ಸಂತೋಷವು, ನನ್ನನ್ನು ನೋಡಿದರೆ ನಿನಗಾಗುತ್ತಿದೆಯೋ ಎಂದಾಲೋಚಿಸು. ಆಗುತ್ತಿದೆಯಾದರೆ, ನನ್ನನ್ನು ನೀನು ಗೌರವಿಸುವುದು ಬೇಡ, ಅಗೌರವದಿಂದ ಮಾತ್ರ ಕಾಣದಿರು; ದೂರದಿರು!

೧೫. ಕಲ್ಕಿಸಂತೆಯ ಕಳ್ಳ

('ಕಳ್ಳಸಂತೆಯ ಕಲ್ಕಿ' ಎಂದು ತಿದ್ದಿ ಓದಬೇಕಾಗಿ ವಿನಂತಿ.)

ಯುದ್ಧಕಾಲದ ಆಹಾರಗಳನ್ನು ಚಿಂತಿಸುತ್ತ,—ಇತ್ತೀಚೆಗೆ ಹೊಟೇಲುಗಳಲ್ಲಿ ಬಿಸ್ಕೂಟ್ ರೊಟ್ಟಿಯನ್ನು ಜೇಡಿಮಣ್ಣಿನಿಂದ ಮಾಡುವರೋ ಹಿಟ್ಟಿನಿಂದಲೋ ಎಂದು ಆಲೋಚಿಸುತ್ತಿರುವಾಗ ಕಲ್ಕಿ ಬಂದು, "ನಮಸ್ಕಾರಗಳಿಗೆ ಸ್ವಾಮಿ!" ಎಂದು ನನ್ನನ್ನು ಹೌಹಾರಿಸಿದನು. ತಿರಿಗಿ ನೋಡಿ, ನಕ್ಕು, ನಾನು "ಸ್ವಾಮಿಗಳಿಗೆ ನಮಸ್ಕಾರ" ಎಂದು ಅವನನ್ನು ತಿದ್ದಿ, ಸಮಾಚಾರ ಕೇಳಿದೆ.

"ನಿಮಗೆ ಮೂರೇ ನಿಮಿಷ ಕೊಡಬಲ್ಲೆ, ಹೆಚ್ಚು ಪುರುಸೊತ್ತಿಲ್ಲ. ಮೈಸೂರಿಗೆ ಹೋಗಿದ್ದೆ. ಬೆಂಗಳೂರು, ಮದರಾಸು ಎಲ್ಲ ತಿರುಗಿದೆ. ಭಾರೀ ವ್ಯಾಪಾರ ಈಗ. ಹಣಕ್ಕೆ ನನ್ನ ಲೆಕ್ಕವೇ ಇಲ್ಲ" ಎಂದನು.

"ವಿಶೇಷ?"

"ವಿಶೇಷ ಒಟ್ಟೊಟ್ಟಿಗೇ ಇಲ್ಲ. 'ವಿ' ಬ್ರಿಟಿಷರಿಗೆ; ಶೇಷ ನಮಗೆ. ವ್ಯಾಪಾರ ಮಾಡುತಿದ್ದೇನೆ."

"ಎಂಥ ವ್ಯಾಪಾರ?"

"ಎಲ್ಲ! ಬೊಂಬಾಯಿ ಗೋದಿಹಿಟ್ಟು—ಸಕ್ಕರೆ--ಉದ್ದು--ಅವಲಕ್ಕಿ-- ಕಲ್ಲುಸಕ್ಕರೆ—ಮೋಟಾರ್ ಟಾಯರ್—ಕುಟಿಕುರಾ ಪೌಡರ್—ಎಲ್ಲವೂ ನನ್ನನ್ನು ಸಪ್ಲಾಯ್ ಮಾಡುತ್ತಿದೆ."

"ಲೈಸೆನ್ಸ್ ಇದೆಯೋ?"

"ಲೈಸೆನ್ಸ್ ಇಲ್ಲ; ಸೆನ್ಸ್ ಇದೆ. ಬೊಂಬಾಯಿ ಗೋದಿಹಿಟ್ಟು ಬೇಕಾದರೆ ರಾತ್ತಿಗೆ ೧—೬—೩; ತಂದುಕೊಟ್ಟ ಮಜೂರಿ ೦—೯—೯.. ಅವಲಕ್ಕಿ ಬೇಕಾದರೆ ಸೇರಿಗೆ ಒಂದು ರೂಪಾಯಿ, ಕಮಿಶನ್ ೦—೮—೦; ಕುಟಿಕೂರಾ ಬೇಕಾದರೆ ಕರಡಿಗೆಗೆ ೪—೦—೦, ಕಮಿಶನ್ ೧—೦—೦. ನಾಳೆ ಶರ್ತ; ಕಡ ನಗದಿ."

"ಅದರಲ್ಲಿ ಯಾವುದಾದರೂ ಅವಶ್ಯವಿದ್ದರೆ, ನಗದಿ ಕಡಮಾಡಿಯೇ ಕೊಂಡುಕೊಳ್ಳಬಹುದು. ಅದು ಬಿಡು. ಮೈಸೂರಲ್ಲಿಯೂ ಇದೇ ವ್ಯಾಪಾರವೆ?"

"ಮೈಸೂರಲ್ಲಿ? ಅಲ್ಲಿ ನಾನು ಸಂಗೀತ ಮೇಷ್ಟ್ರು. ನಾನು ಮಂಗಳೂರಲ್ಲಿದ್ದಾಗ ಸಂಗೀತಕ್ಕೆ ನಾನು ಎಷ್ಟು ಬರುತಿದ್ದೆನೆಂದು ನಿನಗೆ ತಿಳಿದಿರಬಹುದು-- ನನ್ನ ಸಂಗೀತ ನಿನ್ನನ್ನು ಕೇಳಿರಬಹುದು."

"ಕೇಳಿದ್ದೇನೆ. ಚಲೋ ಕಂಠ! ಈಗ ನೀನು ಮೊದಲಿನಂತೇ ಕುಡಿಯುತ್ತಿರುವೆಯಾ?"

"ಅಪರೂಪವಾಗಿ ದಿನಕ್ಕೊಮ್ಮೆ—ಮಾತ್ರ. ಬೆಳಿಗ್ಗೆ ಕುಡಿಯುವುದಿಲ್ಲ. ಈಗ ಕುಡಿದಿಲ್ಲ. ಐದು ರೂಪಾಯಿಯೊಡನೆ ನೀವಿದ್ದೀರೇ?"

"ಇಲ್ಲ."

"ಚಿಂತಿಲ್ಲ. ನಮಸ್ತೇ. ಇರಲಿಕ್ಕಿಲ್ಲ—ಅಥವಾ ಇದ್ದರೂ ಕೊಡಲಿಕ್ಕಿಲ್ಲ—ಇಲ್ಲವೆ ನೀವು ಕೊಟ್ಟರೂ ನಾನದನ್ನು ಉಪಯೋಗಿಸಲಿಕ್ಕಿಲ್ಲ— ಹೀಗೇ ಏನೊ ಒಂದು. ನೀವು ಕೊಟ್ಟಿಲ್ಲವೆಂದು ದುಃಖಕ್ಕೆ ನಾನಿಲ್ಲ."

"ಅದೇನು?"

"ಹಳೇ ಸಾಲಗಾರನೊಬ್ಬ ನನ್ನ ಹೊರಗೆ ನಿಲ್ಲಿಸಿ ಬಂದಿದ್ದೇನೆ. ಕಾಡಿದನು, ನಿಲ್ಲಿಸಿದೆ. ನಿಮ್ಮೊಡನೆ ಹೋಗಿ ತರುವೆನೆಂದೆ. ಮೂರು ನಿಮಿಷದೊಳಗೆ ನಾನು ಹಿಂದಿರುಗಿ ಬಾರದಿದ್ದರೆ ನನಗೆ ಹಣ ಸಿಕ್ಕಿಲ್ಲವೆಂದು ಲೆಕ್ಕ ಹಾಕು ಎಂದು ಹೇಳಿದ್ದೇನೆ. ಮೂರು ನಿಮಿಷವಾಯಿತು. ಇನ್ನವನು ಹೋಗುವನು. ನಿನ್ನ ಹಣವನ್ನು ಪಡೆದು ಅವನಿಗಿತ್ತರೆ ನನಗೆ ಪ್ರಯೋಜನ ವೇನು?....ಅದೃಷ್ಟಕ್ಕೆ ನಾನು ಚೆನ್ನಾಗಿಲ್ಲ."

"ಆದರೆ, ಸಾಲಕೊಟ್ಟವರಿಗೆ ತಿರಿಗಿ ಹೇಗಾದರೂ ಕೊಡಬಾರದೆಂದು ಅಭಿಮತವೆ?"

"ಸಾಲ? ಭೂಪಾಲನಿಂದ ಗೋಪಾಲನ ವರೆಗಿದೆ. ಸರಕಾರವೇ ಸಾಲವೆತ್ತುತ್ತಿದೆ...."

"ಅದು ಪ್ರಜಾಸುಖಕ್ಕಾಗಿ...."

"ನಾನೂ ಒಬ್ಬ ಪ್ರಜೆ....ಅದನ್ನು ಬಿಡು. ನನ್ನ ವ್ಯಾಪಾರಗಳ ವಿಷಯ ನಿನ್ನ ಅಭಿಪ್ರಾಯವೇನು?"

"ನೀನೇ ಹೇಳು."

"ನಾನೇ? ದೊಡ್ಡವರು ಮಾಡಿದ್ದನ್ನೆ ನಾನು ಮಾಡಿದೆ, ಅಷ್ಟೆ—ರಾಜಾ ಪ್ರಜಾ ಯಥಾ ತಥಾ—ಮಗನಂತೆ ತಂದೆ—ಇತ್ಯಾದಿ."

"ನೀನು ಕೊಂಚ ದಣಿದಿರುವಂತೆ ತೋರುವೆ. ಸ್ವಲ್ಪ ಕಾಫಿ ಕೊಡಲೇ?"

"ಬೇಡ. ನಿನ್ನಂತಹ ಒಬ್ಬ ಸ್ನೇಹಿತನಲ್ಲಿ ಹೋಗಿದ್ದೆ. ಅಲ್ಲಿ ಅನನಾಸು ಕಡಿಯುತಿದ್ದರು. ಒತ್ತಾಯಮಾಡಿದರು. ಅನನಾಸು ನನ್ನನ್ನು ತಿಂದಿತು."

"ಹಾಗಾದರೆ........ನನಗೆ ಮೂರೇ ನಿಮಿಷ ಕೊಡುವೆನೆಂದಿದ್ದೆ. ನನಗೆ ಬೇರೆ ಕೆಲಸವಿದೆ."

"ಗೊತ್ತಿದೆ. ನಾನು ಬರುವಾಗ ಭಾರೀ ಕೆಲಸದಲ್ಲಿದ್ದೆ. ಹೇಗಿದ್ದರೂ ನಿನಗೆ ಮೂವತ್ತು ನಿಮಿಷಗಳನ್ನು ಕೊಡಬೇಕೆಂದಿದ್ದೇನೆ. ದೇಹಪ್ರಕೃತಿಗೆ ನೀನು ಹೇಗಿರುವೆ?"

"ಎಲ್ಲ ಸರಿ. ನನ್ನ ಚಿಂತೆ ಬಿಟ್ಟು ನಿನ್ನದನ್ನೆ ಹೇಳು."

"ನನ್ನದೇನು? ಹೇಳಿದೆಯಲ್ಲವೆ? ನನಗೆ ಪುರುಸೊತ್ತೆ ಸಿಗುವುದಿಲ್ಲ. ಬೆಳಗ್ಗಿನಿಂದ ಸಾಯಂಕಾಲದ ತನಕ ವ್ಯಾಪಾರ. ಎಲ್ಲಿಗೆ ಹೋದರೂ ನನ್ನ ಉಪಯೋಗವಿದ್ದೇ ಇದೆ. ಮೈಸೂರಿಗೆ ಹೋದರೆ ಸಂಗೀತ ಕಲಿಸುತ್ತೇನೆ. ಮಡಿಕೇರಿಗೆ ಹೋದರೆ ಚಿಪ್ಪು ಎಣ್ಣೆ ಮಾರುತ್ತೇನೆ. ಇಲ್ಲಿಗೆ ಬಂದರೆ ಎಲ್ಲ ವ್ಯಾಪಾರ ಮಾಡುತ್ತೇನೆ. ಮುಂಬಯಿಗೆ ಹೋದರೆ ನನ್ನನ್ನು ಮಾರಾಟಮಾಡದ ವಸ್ತುವೇ ಇಲ್ಲ."

"ಹಾಗೆ, ಎಲ್ಲ ಸರಕುಗಳಿಗೂ ಎಲ್ಲ ಕಾಲಕ್ಕೂ ಬೇಡಿಕೆಯಿದೆಯೆ?"

"ಖಂಡಿತ ಇಲ್ಲ. ಈ ಕಾಲದಲ್ಲಿ ಮಾತ್ರ ಎಲ್ಲದಕ್ಕೆ ಇದೆ. ಕೇಳು: (೧) ಕೆಂಪುಮಣ್ಣಿಗೆ ಬುಟ್ಟಿಗೆ ಒಂದೂಕಾಲು ರೂಪಾಯಿ; ಎಲ್ಲರಿಗೂ ಬೇಕು. (೨) ಖಾಲಿ ಬಾಳೆಗೊನೆಗೆ ಒಂದಾಣೆ; ಎಲ್ಲರಿಗೂ ಬೇಕು; ಉಪಯೋಗ ತಿಳಿದಿಲ್ಲ. (೩) ಹರಿದು ಮುರಿದು ಬಿದ್ದ ಡಬ್ಬಿಚೂರುಗಳಿಗೆ ಸೇರಿಗೆ ಎಂಟಾಣೆ; ಎಲ್ಲರಿಗೂ ಬೇಕು; ಉಪಯೋಗ ತಿಳಿದಿಲ್ಲ. (೪) ಒಡಕು ಸ್ಲೇಟುಗಳಿಗೆ ಎರಡಾಣೆ; ಎಲ್ಲರಿಗೂ ಬೇಕು; ಉಪಯೋಗ ತಿಳಿದಿಲ್ಲ; ಕಟ್ಟಿಗೆಯಂತೆ ತೋರುವ ಕಡ್ಡಿಗೂ ಗಿರಾಕಿಯಿದೆ; ಜನರೊಡನೆ ಹಣವಿದೆ; ನಮಗೆ ಬುದ್ಧಿ ಇದೆ. ಅಥವಾ ಬುದ್ಧಿಯಿಲ್ಲದಿದ್ದರೂ ಚಿಂತಿಲ್ಲ. ಯುದ್ಧಕ್ಕೂ ಬುದ್ಧಿಗೂ ಗಂಟಿಲ್ಲ. ಯುದ್ಧ ನಡೆವಾಗ 'ಶನಿವಾರ ಸಿಕ್ಕಿದ್ದೇ ಎಣ್ಣೆ."

"ನೀನು ಮಣ್ಣು ಮಾರಿದರೆ ದುಃಖವಿಲ್ಲ. ಅದು ಕೊಂಡುಕೊಳ್ಳುವವರ ಹುಚ್ಚು. ಆದರೆ, ಕಾಳಸಂತೆ........"

"ಅದೂ ಕೊಂಡುಕೊಳ್ಳುವವರ ಹುಚ್ಚು! ಕೊಂಡುಕೊಳ್ಳುವವರಿಲ್ಲದಿದ್ದರೆ ಕೊಡುವವರೇನು ಮಾಡುವರು! ಅಕ್ಬರನು ಬೀರಬಲನಿಗೆ ಹೇಳಲಿಲ್ಲವೆ? ಕಿವಿ ಕತ್ತರಿಸುವವರ ಜಾಡಿ ಕೇಳಬೇಕೆಂದು."

"ಹಾಗಾದರೆ, ಕಳ್ಳಸಂತೆಯಲ್ಲಿ ಕೊಂಡುಕೊಳ್ಳುವವರಿಗೆ ದಂಡಿಸಬೇಕೆಂದು ನಿನ್ನ ಅಭಿಮತವೆ?"

"ಸಂದೇಹವೇನು? ನಾಳೆ, ಅಧಿಕಾರಿಗಳು, 'ಕಳ್ಳಸಂತೆಯಲ್ಲಿ ಎಷ್ಟನ್ನಾದರೂ ಕೊಂಡುಕೊಳ್ಳುವವರನ್ನು ದಂಡಿಸಲಾದೀತು' ಎಂದು ಪ್ರಕಟಿಸಲಿ. ಮತ್ತೆ ನೋಡು— ಕೃಷ್ಣಪ್ಪ ಮಾರ್ಕೆಟು ಕಾಣೆ. ಕಳ್ಳಸಂತೆಯೂ ವ್ಯಾಪಾರಕ್ಕೆ ನನ್ನನ್ನು ಬಿಡುವುದು."

"ಹಾಗೆಂದರೆ?"

"ತಪ್ಪಿದೆ. ನನಗೆ ಲಾಭದ ಅವಸರದಲ್ಲಿ ಇತ್ತೀಚೆಗೆ ಮಾತೇ ತಪ್ಪುತ್ತಿದೆ. ನಾನೂ ಕಳ್ಳಸಂತೆಯ ವ್ಯಾಪಾರ ಬಿಡುವೆನು ಎನ್ನಹೋಗಿದ್ದೆ."

"ಅಹುದು. ನೀನು ಒಂದೊಂದು ಶಬ್ದವನ್ನು ತಿರುಗುಮುರುಗಾಗಿ ಹೇಳುತ್ತಿ, ಹಾಗೇಕೆ ಮಾತಾಡುವೆ?"

"ಅದೇ, ಹೇಳಿದೆನಲ್ಲ! ಲಾಭದಿಂದ ಎದೆ ಹಗುರವಾಗಿದೆ; ಮಿದುಳಿನ ವೇಗ ಹೆಚ್ಚಿದೆ. ನಿನ್ನೆ ದೊಡ್ಡ ಸಾಹುಕಾರರು ಹಾಗೆ ಮಾತಾಡುತಿದ್ದರು; ಇಂದು ನನ್ನಂಥ ಮರಿಸಾಹುಕಾರರು ಮಾತಾಡುವರು; ನಾಳೆ ಮಜೂರರೂ, ಮುಂದೆ ಎಲ್ಲರೂ ಹೀಗೇ ಮಾತಾಡುವರು. ಭಾಷೆ, ನಿಘಂಟು, ಕಥೆ, ಕವನ, ರೀತಿ, ನೀತಿ, ರಸ್ತೆ, ಕಟ್ಟೋಣ, ಶಿಕ್ಷಣ, ಆಹಾರ, ಅರಸರು— ಎಲ್ಲವೂ ಬದಲಾಗುತ್ತಿದೆ. ಹೊಸ ವ್ಯವಸ್ಥೆ! ಬರುತ್ತೇನೆ. ನಿಮ್ಮ ಬೇಸರಿಕೆ ಸಮಯ ಹಾಳುಮಾಡಿದ್ದಕ್ಕೆ ಬೇಡಿರಿ" ಎಂದು ಕೊನೆಗೂ ಉಲ್ಟಿ ಮಾತು ಹಾರಿಸಿಯೇ ನಡೆದನು.

ನನ್ನ ಚಿಕ್ಕ ಮಗು ಅಂಬೆಗಾಲಿಕ್ಕುತ್ತ ಜಗಲಿಯ ಕೊನೆಗೆ ಬಂತು. "ಮಗೂ, ಜೋಕೆ—ಅಂಗಳ ನಿನ್ನ ಮೇಲೆ ಬಿದ್ದೀತು!" ಎಂದು ಕೂಗಿದವನೇ—ಕಲ್ಕಿಯ ಭಾಷೆ ನನಗೂ ಫಕ್ಕನೆ ಬಂದುದನ್ನು ಕಂಡು ಬೆರಗಾಗಿ, "ಎಲಾ, ಕಲ್ಕಿಸಂತೆಯ ಕಳ್ಳನೇ" ಎಂದು ಗಟ್ಟಿಯಾಗಿ ಉಚ್ಚರಿಸಿ ಮತ್ತೊಮ್ಮೆ ತಪ್ಪಿದುದಕ್ಕಾಗಿ ಬೊಟ್ಟುಕಚ್ಚಿ, ಇನ್ನೊಂದು ದಿನ ಮಾತನ್ನೆ ಆಡದೆ, ಮೌನಧರಿಸಿ ತಿದ್ದಿಕೊಳ್ಳಬೇಕೆಂದು ಶಪಥಮಾಡಿದೆ.

---

೧೬. ಗ್ಲುಕೋಸ್

[ನಿನ್ನೆ ಹುಟ್ಟಿದ, ಇಂದು ಹುಟ್ಟಿದ, ನಾಳೆ ಹುಟ್ಟುವ ಮಕ್ಕಳಿಗೆ ಒಂದು ಬಹಿರಂಗ ಪತ್ರ.]

ಮಗು,

ನಿನಗೆ ಅಕ್ಷರ ಬಾರದೆಂದು ಬಲ್ಲೆ. ಭಾಷೆಯೂ ಸರಿಯಾಗಿ ಬಾರದು. ಆದರೆ ಇಂಗ್ಲಿಷ್ ರೋಗಗಳ ಹೆಸರುಗಳನ್ನೂ ಮದ್ದುಗಳ ಹೆಸರುಗಳನ್ನೂ

ನೀನು ಬಲ್ಲೆ; ಇಂಗ್ಲಿಷ್ ಮದ್ದುಗಳೇ ಬೇಕೆಂದು ಹಟಮಾಡುತ್ತಿರುವೆ. ನಿನ್ನ ಪಪ್ಪ—ಮಮ್ಮಗಳಾದರೂ ಇದನ್ನೋದಿ ಹೇಳಲೆಂದು ಬರೆದಿದ್ದೇನೆ.

ಪೂರ್ವಕಾಲದಲ್ಲಿ ನೀನು ಭೂಗತವಾದ ಕೂಡಲೇ "ಅಯ್ಯೋ, ಈ ನರಕದಲ್ಲಿ ಹುಟ್ಟಿಬಂದೆಯಲ್ಲ" ಎಂದು ಕೂಗುತಿದ್ದಿಯಂತೆ. ಆಗ ಕತ್ತಲಕೋಣೆ, ಕಕ್ಕಡ ದೀಪ, ಕರಿ ಬೆಲ್ಲದ ನೀರು, ಕಟು ಕಷಾಯಗಳು ಇದ್ದುವು. ಈಗ ವಿಜ್ಞಾನವು ಈ ನರಕವನ್ನು ಸ್ವರ್ಗವನ್ನಾಗಿ ಮಾರ್ಪಡಿಸಿದೆ. ಆದರೂ ನೀನಳುವೆ."ಹುಟ್ಟಿಬಂದೆನಲ್ಲ"ಎಂದಲ್ಲ; "ಗ್ಲುಕೋಸ್! ಗ್ಲುಕೋಸ್"ಎಂದು. ಭಾಷೆ ಬಾರದಿದ್ದರೂ ಅಕ್ಷರ ಬಾರದಿದ್ದರೂ ಗ್ಲುಕೋಸ್ ನಿನಗೆ ತಿಳಿದಿದೆ.

ಉಂಟುಮಾಡಿದವನು ಊಟಕ್ಕೆ ಕೊಡಲಾರನೇ ಎಂದು ನಿನಗೆ ಗೊತ್ತೇ ಇದೆ. ನಿನ್ನ ಪಪ್ಪನು ಅಂಗಡಿಯಿಂದ ಅಂಗಡಿಗೆ, ಕೇರಿಯಿಂದ ಕೇರಿಗೆ, ಊರಿಂದ ಊರಿಗೆ ಓಡಿ, ಹನುಮಂತನು ಸಂಜೀವಿನಿ ಹುಡುಕಿದಂತೆ ಸಂಕಟಪಡುತಿದ್ದಾನೆ. ಆದರೆ ಹನುಮಂತನು ಚಂದ್ರದ್ರೋಣವನ್ನೆತ್ತಿ ತಂದಂತೆ ಪಪ್ಪನಿಗೆ ಒಂದು ದೊಡ್ಡ ಅಂಗಡಿಯನ್ನು ಕಿತ್ತು ತರಲಾಗುವುದಿಲ್ಲ. ಅಂಗಡಿಯ ಮುಂಬಾಗಿಲಿನಿಂದ ಹೋದರೆ ಸಿಗದೆಂದರಿತಲ್ಲಿ ಹಿಂಬಾಗಿಲಿನಿಂದ ಹೋಗುತ್ತಾನೆ. ಹಗಲಲ್ಲಿ ಸಿಗದೆಂದರೆ ನಡುರಾತ್ರಿ ಹೋಗುತ್ತಾನೆ. ಏಳೂವರೆ ಆಣೆಯ ಆ ಚಿಕ್ಕ ಪೆಕೇಟಿಗೆ, ಏಳೂವರೆಯ ಆ ಏಳನೇ ಮಹಾರಾಯನು ಹಿಡಿದಂತೆ ಸುತ್ತಾಡಿ, ಎಪ್ಪತ್ತು ಮಂದಿಯೊಡನಾದರೂ ಜಗಳವಾಡಿ, ಮತ್ತೆ ಅಷ್ಟೆ ಮಂದಿಗೆ ಹಿಂದೂ--ಕ್ರೈಸ್ತ—ಮುಸಲ್ಮಾನ ಈ ಮೂರೂ ಬಗೆಯ ಪ್ರಣಾಮಗಳನ್ನು ಸಲಿಸಿ, ಬೇಡಲಾಗದ ಬೇಡಿಕೆಯಿಂದ-ಆಡಲಾಗದ ಮಾತಿನಿಂದ—ಮಾಡಬಾರದ ಕೃತಿಯಿಂದಾದರೂ ದೊರೆಯಲಾರದ ಆ ಪೆಕೆಟನ್ನು ದೊರಕಿಸಿ, ಎತ್ತಿಕೊಂಡು ತರುತ್ತಾನೆ. ಶ್ವಾಸವಾಡಿಸಿ ಬಿದ್ದುಕೊಂಡು ನಗುತ್ತಿರುವ ನೀನು ಈ ಸಂಗ್ರಾಮವನ್ನೇನು ಬಲ್ಲೆ!

ನಿನ್ನ ಪಪ್ಪನೂ ಮಮ್ಮಿಯೂ ಗ್ಲುಕೋಸ್ ತಿಂದು ಬೆಳೆದವರಲ್ಲ ನಿಜ. ಆದರೆ, ತಮಗೆ ದೊರಕದಿರುವ ಆ ಸುಖವನ್ನು ನಿನಗೆ ಕೊಡಲೇಬೇಕು. ನೀನು ಗ್ಲುಕೋಸ್ ತಿಂದರೆ ಭೀಮಸಂತೆದ್ದು ಕುಳಿತು, ಹಾರುವಿಯೆಂದೇನೂ ಅಲ್ಲ. ಹಾಗೆ ನಿನ್ನ ಪಪ್ಪ—ಮಮ್ಮಿ ನಿರೀಕ್ಷಿಸಿಲ್ಲ. ಆದರೆ, ಅದನ್ನು ನೀನು ತಿನ್ನದಿದ್ದರೆ ಏನಾದೀತೋ ಎಂಬ ಭಯವೊಂದಿದೆ!

ಹಿಂದೆ,—ಮಗು!—ನಾರಿಯೇ ಸರ್ವನಾಶಕ್ಕೆ ಕಾರಣಳಾಗುವಳು ಎಂದೊಂದು ಮಾತಿತ್ತು; ಉದಾಹರಣೆಗಳನ್ನೂ ಕೊಡುತಿದ್ದರು. ನಾರಿಯಿಂದ ಮನುಷ್ಯರು ಹೋದರು—ಮನೆಗಳು ಮಣ್ಣುಪಾಲಾದುವು-ಕಿರೀಟಗಳೇ ಉರುಳಿದುವು. ಆದರೆ, ನಾರಿಯು ಇಂದು ಆ ಗೌರವಪಡಲಾರಳು. ಆ ಮೂರನ್ನೂ 'ಗ್ಲುಕೋಸ್' ಮಾಡಲು ಶಕ್ತವಾಗಿದೆ.

ಒಂದು 'ಗ್ಲುಕೋಸ್' ಎಷ್ಟು ಮಿಲಿಯ ಪಪ್ಪಗಳನ್ನು ಬೀದಿಗಳಲ್ಲಿ ರಾತ್ರಿ ಹಗಲು ಅಲೆಯುವಂತೆ ಮಾಡುತ್ತಿಲ್ಲ! ಒಂದು ಗ್ಲುಕೋಸ್ ಎಷ್ಟು ಮಂದಿಗೆ ದಂಡ ಹೊರಿಸಿಲ್ಲ! ಒಂದು ಗ್ಲುಕೋಸ್ ಎಷ್ಟು ಜನರನ್ನು ಕಾರಾಗ್ರಹಕ್ಕೆ ತಳ್ಳಿಲ್ಲ! ಒಂದು ಗ್ಲುಕೋಸ್ ವಿವಾದಗಳಲ್ಲಿ—ನಿಘಂಟಿನಲ್ಲಿಲ್ಲದ ಎಷ್ಟು ಶಬ್ದಗಳನ್ನು ಹೊರ ಸಿಡಿಸಿಲ್ಲ! ಬಹುಶಃ ಇಂದು ಕಾರಾಗ್ರಹಕ್ಕೆ ಸೇರಿದವರಲ್ಲಿ 'ಗ್ಲುಕೋಸ್ ಕೇಝುಗಳೇ ಅಧಿಕಾಂಶ. "ಗ್ಲುಕೋಸ್ ಕೊಲೆ"ಗಳಾಗುವುದೊಂದು ಉಳಿದಿದೆ. ಅವುಗಳಾರಂಭವಾದರೆ, ಈ ಯುದ್ಧದಲ್ಲಿ ಮಡಿದವರಿಗಿಂತ ಹತ್ತುಪಾಲು ಹೆಚ್ಚು ಜನರಾದರೂ ಈ ಹೊಸ "ಗ್ಲುಕೋಸ್ ರೋಗ"ದಲ್ಲಿ ಮಡಿದು, ಸ್ವರ್ಗ ಸೇರದಿರಲಾರರು.

ಪಪ್ಪ—ಮಮ್ಮಿಗಳು ಸುಶಿಕ್ಷಿತರು. ಗ್ಲುಕೋಸ್ ಇಲ್ಲದೆ ದಿನಗಳೆಯಲೇ ಬಾರದೆಂದು ಚೆನ್ನಾಗಿ ತಿಳಿದಿರುವರು. ಗ್ಲುಕೋಸ್ ಸಿಗದೆ ಸೂರ್ಯನನ್ನು ಮುಳುಗಬಿಡಲಾರೆವೆಂದು ಹಟಹಿಡಿದ ಪಪ್ಪ-ಮಮ್ಮಿಗಳೂ ಎಷ್ಟಿಲ್ಲ!

"ಗುಟ್ಟಾಗಿ ಕೊಡಿ ಸ್ವಾಮಿ—ಯಾರೊಡನೆಯೂ ಹೇಳುವವನಲ್ಲ" ಎಂದು ಕಳ್ಳ ಮಾತುಗಳನ್ನಾಡುವ ಗೃಹಸ್ಥಪಪ್ಪಗಳಿದ್ದಾರೆ! ಹಾಗೆ ದೊರಕಿಸಿಕೊಂಡು ಮತ್ತೆ ಅಂಗಡಿಯವನು ಕಳ್ಳಸಂತೆ ನಡೆಸಿದ್ದಾನೆ ಎನ್ನುವವರೂ ಇದ್ದಾರೆ. ಕಳ್ಳತನ ಪ್ರೇರೇಪಿಸಿದ ಈ ಪಪ್ಪಗಳ ವರ್ತನೆಯಲ್ಲಿ ನಾಚಿಕೆಗೇಡಾದುದೇನೂ ಇಲ್ಲವೆ ಎಂದು ಕೇಳಬೇಡ. ನಿನಗೆ ಬೇಕು ಗ್ಲುಕೋಸ್; ಅದನ್ನು ಯಾವ ರೀತಿಯಿಂದಾದರೂ ತರುವವ ಪಪ್ಪ. 'ನಾಗರಿಕ' ವಸ್ತುಗಳನ್ನು ಗುಟ್ಟಾಗಿ ತಗೊಂಡು ಬಂದರೆ ಹೆಮ್ಮೆ; ನಾಚಿಕೆ ಎಲ್ಲಿ!

ಗ್ಲುಕೋಸ್ ಸೃಷ್ಟಿಕರ್ತರು—"ಗ್ಲುಕೋಸ್ ತಿನ್ನಿ; ಶಕ್ತಿ! ಸುಲಭ ಜೀರ್ಣ!" ಎಂದರು. ಜನರು ತಿಂದರು. ಗ್ಲುಕೋಸ್ ಮಾಡಿದವರೇ

ಅತ್ತ ಗುಂಡು ಹಾರಿಸಿಕೊಂಡರು. ಈಗ ತಿನ್ನುವುದನ್ನೂ ಬಿಡಲೇ? ಸಾಧ್ಯವಿಲ್ಲ. ತಕ್ಕೊಳ್ಳಲೇ?—ಹುಲಿಹಾಲನ್ನು ತರುವಷ್ಟು ಕಷ್ಟ. ಮಂದಾರ ಪುಷ್ಪ ತಂದ ರಾಜ ಕಿರೀಟಿ, ಐರಾವತ ತಂದ ಭೀಮಾರ್ಜುನರು—ಇಂದು ಬದುಕಿದ್ದರೆ, ಕರೆದು ಶರ್ತ ಹಾಕುತಿದ್ದೆ; "ಅದೆಲ್ಲ ತಂದಿರಲ್ಲ, ಈಗ ಒಂದು ಪೆಕೆಟ್ ಗ್ಲುಕೋಸ್ ತನ್ನಿ ನೋಡೋಣ!" ಎಂದು. ಮಗು, ವೀರರು ಈ ದಿನ ಇಲ್ಲವೆನಬೇಡ—ನಿನ್ನ ಪಪ್ಪ ಗ್ಲುಕೋಸ್ ತರುವನಾದರೆ ನಿನ್ನ ಪಪ್ಪನು ಅರ್ಜುನನಿಗೂ ಮಿಗಿಲಾದ ವೀರ.

ಮಗು! ರೋಗಿಗಳಿಗಿಂತಲೂ ಹೆಚ್ಚಾಗಿ ಇಂದು ನಿನ್ನ ದೆಸೆಯಿಂದ ಈ ಗ್ಲುಕೋಸಿಗೆ ಎಂತ ಸ್ಥಾನಮಾನ! ಎರಡೇ ಎರಡು ಪೆಕೇಟ್ ಗ್ಲುಕೋಸನ್ನು ಬಚ್ಚಿಟರೆ ಆ ವ್ಯಾಪಾರಿಯ ಹೆಮ್ಮೆಯೇನು, ತಾನೊಂದು ಮಹಾ ಮಾಡಿದೆನೆಂಬ ಅಬ್ಬರವೇನು! ಅವನೊಡನೆ ಅದಕ್ಕಾಗಿ ಬರುವ ಗಿರಾಕಿಯ ದೈನ್ಯವೆಷ್ಟು! ಹಿಂದೆ ದರ್ಪದಿಂದ ಅಂಗಡಿಕಾರನನ್ನು ಗದರಿಸಿದವನು ಗ್ಲುಕೋಸ್ ಕೇಳುವಾಗಲಿನ ಕಂಠದ ಪೀಂ ಏನು; "ಡಾಕ್ಟರರ ಚೀಟು ಎಲ್ಲಿದೆ?" ಎಂದು ಕೇಳುವ ಅಂಗಡಿಕಾರನ ಆ "ಮೆಜಿಸ್ಟ್ರೇಟ್ ಸ್ವರ"ದ ಗಾಂಭೀರ್ಯವೇನು! "ಈ ಮೊದಲು ಎಲ್ಲೆಲ್ಲೋ ವ್ಯಾಪಾರ ಮಾಡಿ, ಈ ಗ್ಲುಕೋಸ್ ಒಂದಕ್ಕೆ ಇಲ್ಲಿಗೆ ಬರುತ್ತಿಯಾ?" ಎಂದು ಜರೆವ ಠೀವಿಯೇನು! ಇಸ್ತ್ರಿ ಶರ್ಟನ್ನು ಹಾಕಿ ಕುಳಿತು, ಗಿರಾಕಿಯನ್ನು (ಗ್ಲುಕೋಸ್ ಗಿರಾಕಿಯನ್ನು!) ಮೊದಲು ಪರಮ ಶತ್ರುವಿನಂತೆಯೂ ಮತ್ತೆ ಹುಳದಂತೆಯೂ ಕಾಣುವ,—ನಗುವಿಲ್ಲದ ಮುಖದ ಆ ಮುದ್ರೆಯೇನು! ಮಗು, ಗೊತ್ತಿದೆ,—ಲಕ್ಷ್ಮಿಯು ಚಂಚಲಳೆಂದು ಆ ವ್ಯಾಪಾರಿಗೆ ಗೊತ್ತಿದೆ. ಆದರೆ, ಚಂಚಲೆ ಯಾರೋ ಅವಳ ಮೇಲೆ ಮಮತೆ ಹೆಚ್ಚು; ಅದು ಸತ್ಯ. ಅದರಂತೆ, ಲಕ್ಷ್ಮಿ ಇದ್ದಲ್ಲಿ ಸರಸ್ವತಿಯು ಇಲ್ಲವೆಂಬುದೂ ಸತ್ಯ. ಏಕೆಂದರೆ, ಸರಸ್ವತಿಯಿದ್ದಲ್ಲಿ— "ನಾವು ಯಾರೊಡನೆ ಈ ಸ್ಪರ್ಧೆ ನಡೆಸುತ್ತಿದ್ದೇವೆ? ಹಣ ತಂದವನೊಡನೆ ನಿಷ್ಠೂರವಾಗಿ ವರ್ತಿಸುತ್ತೇವೆ!" ಎಂದವರಿಗೆ ತಿಳಿಯುತಿತ್ತು.

ತಪ್ಪಾರದು? ಗ್ಲುಕೋಸ್ ಬೇಡುವವರದೇ? ಕೊಡದಿದ್ದವರದೇ? ಮಗು, ಬೀರಬಲನ ನ್ಯಾಯದಂತೆ, ಚಾಡಿ ಕೇಳಿದವನ ಕಿವಿ ಕತ್ತರಿಸಬೇಕು. ಕೊಂಡುಕೊಳ್ಳುವ ಕಳ್ಳರಿದ್ದರೆನೇ ಕಳ್ಳಸಂತೆ; ಇಲ್ಲದಿದ್ದರೆ ಒಳ್ಳೇ ಸಂತೆ.

ವ್ಯಾಪಾರಸ್ಥರನ್ನು ದಂಡಿಸುವಂತೆ, ಕೊಂಡುಕೊಂಡವನನ್ನೂ ಕೊಂಚ ಅಲು ಗಾಡಿಸಿ ಬಿಡಬಾರದೇ?

"ಗ್ಳುಕೋಸ್ ದಂಡ"—ಮತ್ತು "ಗ್ಳುಕೋಸ್ ಜೈಲು"ಗಳಾದರೇನು! "ಗ್ಳುಕೋಸ್ ಹಣ"ವೂ ಆಗುತ್ತಿದೆ. ಆ "ಗ್ಳುಕೋಸ್ ಹಣ"ವೂ, ಗ್ಳುಕೋಸಿನಷ್ಟೆ ಶಾಶ್ವತವಿದ್ದರೆ ಸಾಕಪ್ಪ!

೧೭. ಮೈನಾಥಯ್ಯರ ಮನೆಮುಂದಿ ಮೈಸೂರಿಗೆ ಹೊರಟದ್ದು

(ಮೈನಾಥಯ್ಯನವರ ಮಗಳು ಮಂದಾಕಿನಿಯ ವರದಿಯಂತೆ.)

ನಾನು ಕಲ್ಕತ್ತಾ ಗವಸು ಬೇಕೆಂದೆ. ಅಮ್ಮ ಬೆಂಗಳೂರು-ಫ್ರಾಕ್ ಮರೆಯಬೇಡ ಎಂದಳು. ಬೊಂಬಾಯಣ್ಣ ರಂಗೂನ್-ಬೂಟ್ಸ್ ಹಾಕಿ ಕೊಳ್ಳೇ ಎಂದನು. ಕಾವೂರಮ್ಮ ಮೈಸೂರ್-ಸಿಲ್ಕ್ ರಿಬ್ಬನ್ ಬಿಸಾಡಿದಿ ಯೇನೇ ಎಂದು ಗದರಿಸಿದಳು.

ಅಷ್ಟರಲ್ಲಿ ಪುಟ್ಟು ಪೂನಾ—ಬಿಸ್ಕಿಟ್ ಬೇಕೆಂದು ಕೂಗಿದನು. ರಾಜಮಹೇಂದ್ರಿ ಮಾವ ಆಗಲೇ ಬಂದವರು, ಪುಟ್ಟುವನ್ನೆತ್ತಿದರು. ಅಮ್ಮ, ಪುಟ್ಟುವನ್ನು ಹಿಡಿದ ಮಾವನ ಕೈಗೆ ಕಲ್ಲಿಕೋಟೆ-ಟುವಾಲು ಕೊಟ್ಟಳು.

ಹೊತ್ತಾಯಿತು ಎಂದು ಅವಸರದಿಂದ ಅಮ್ಮ, ತನ್ನ ಸೇಲಂ ಸೀರೆ ಎಲ್ಲಿದೆಯೆಂದು ಕೇಳಿದಳು. ಮಡಿಕೇರಿ-ರಾಧೆಯೊಡನೆ ಕೇಳೆಂದು ಅಜ್ಜಿ ಹೇಳಿದಳು.

ಆಗ್ರಾ—ಮುಳ್ಳನ್ನು ಜಡೆಗೆ ಚುಚ್ಚಿಕೊಂಡು ಅಕ್ಕ ಹೊರಗಿಣಿಕಿದಳು. ಲಂಡನ್-ಭಾವ ಬರುತಿದ್ದುದು ಕಂಡಿತೇನೊ. ಇಸ್ಸೀ, ಈ ವಾಸನೆ ಏನಪ್ಪ ಎಂದು ದೊಡ್ಡಮ್ಮ ಮೂಗು ಮುದುಡಿಸಿಕೊಳ್ಳಲು, ತ್ರಿಚಿನಾಪಳ್ಳಿ-ಚುಟ್ಟಾ ಎನ್ನುತ್ತ ದೊಡ್ಡಪ್ಪ ಕಿರುಕೋಣೆಯಿಂದ ಅಲ್ಲಿಗೆ ಬಂದು ದೊಡ್ಡಮ್ಮನ ಮುಖದ ಮೇಲೆ ಹೊಗೆಯೂದಿದರು. ಇನ್ನೂ ಹುಡುಗಾಟ ಎಂದು

ಮುನಿದು ದೊಡ್ಡಮ್ಮ ಮುಖ ತಿರುಗಿಸಲು, ಸಡಿಲಾಗಿ ನಿಂತ ಮದರಾಸು-ಬೆಂಡೋಲೆ ಕೆಳಗೆ ಬಿತ್ತು.

ಇದ್ಯಾರ ಬನಾರಸ-ಋಣ ಎಂದಾರೋ ಬಿರುಸಾಗಿ ಕೇಳಿದರು. ಯಾರದಾದರೇನು-ಮೇಲೆ ತೆಗೆದಿಡಬಾರದೇ ಎಂದು ಬಂಟ್ವಾಳತ್ತೆ ಗದರಿಸಿದಳು. ಕಾರ್ಕಳಕ್ಕ ಯಾವಾಗ ನೋಡಿದರೂ ತಡಮಾಡೋದೇ ಎಂದು ಚಿಕ್ಕಿ-ಚಿಮ್ಮ ಗೊಣಗುಟ್ಟಿದಳು.

ಕೊಚ್ಚಿ-ಚಾಪೆಯಡಿ ಏನೋ ಚಡಪಡಿಸಿದ ಹಾಗಾಯಿತು. ಎತ್ತಿ ನೋಡಿದರೆ ಕಾಸರಗೋಡು-ಕಿಟ್ಟು ಕಳಿಸಿದ ಕರಿಜೆಕ್ಕಿನ ಮರಿ! ನೀವು ಸಾಧಾರಣದ ಪ್ರಾಣಿಗಳು ಸಿಕ್ಕಿದರೆ ಕೊಲ್ಲುವಿರಿ ಎಂದು ಕರಾಚಿ-ಚಿಕ್ಕಪ್ಪ ವಿನೋದವಾಡಲು, ಕರಿಯುಮರಿ ಮೂಲ್ಕಿ-ಪತಾಸದ(ದೊಡ್ಡ ಪೆಟ್ಟಿಗೆ) ಅಡಿಗೆ ಓಡಿತು.

ಪುತ್ತೂರು-ಪದ್ಮಮ್ಮನ ಊಟ ಇನ್ನೂ ಆಗಿಲ್ಲವೇ ಎಂದಾರೋ ಪ್ರಶ್ನಿಸಿದರು. ಮೈಸೂರಿಗೆ ಹೊರಟಿರುವಿರೆಂದು ನಾನು ಊಟ ಬಿಡಬೇಕೇ-ಏನು ಅವಸರ ಎಂದು ಪದ್ಮಮ್ಮ ಮರುತ್ತರ ಕೊಟ್ಟು, ಬಿರುಸಾಗಿ ಮಜ್ಜಿಗೆಯನ್ನವನ್ನು ಸೊರ್ರೆಂದು ಬಾಯಿಗೇರಿಸಿಬಿಟ್ಟರು. ಅಷ್ಟರಲ್ಲಿ ಕಾರ್ಕಳಕ್ಕನ ಶಿದ್ದು ಚೆನ್ನಪಟ್ಣ ಗೊಂಬೆಯನ್ನು ನೆಲಕ್ಕೆಂದು ನೇರಾಗಿ ಬಡೆದನು. ತಗಲಿತು-ಹೊಸಂಗಡಿ ವಾಸಣ್ಣನ ಬೋಳು ತಲೆಗೆ.

ವಾಸಣ್ಣ ಹಾಯ್ ಎಂದು ತಲೆಗೆ ಕೈಯೆತ್ತಲು, ಶಾಲಿಗೆ ಕೈ ತಗಲಿ ಅವನ ದಯಾಳಭಾಗ-ಫೌಂಟೆನ್ ಪೆನ್ ಎದ್ದು ನೇತಾಡಿ ಕುಣಿಯಿತು. ಪುಟ್ಟು ಅದನ್ನೆಳೆದು ಕಾವೂರಮ್ಮನ ಮುಖಕ್ಕೆ ಮೋಹದ ನಗೆ ತರುವಾಗಲೇ ವಿಶಾಖಪಟ್ಣ ಡಾಕ್ಟರ ಮಾಮನ ಕಾರ್ ಬಂತು.

ಲುಧಿಯಾನಾ-ಸಿಲ್ಕಿನ ಫ್ರಾಕ್ ಹಾಕಿ ವಿಮಲೆ, ನೋಡೇ ಅಮ್ಮಾ-ಈ ನಿರಿಗೆ ಆ ಧೋಬಿ ತೆಗೆಯಲೇ ಇಲ್ಲವೆಂದು ಮುನನೊಂದು ದೂರಿಟ್ಟಳು. ತಡೆಯಲಾಗದೆ ಸಿದ್ಧಾಪುರವ್ವ ವಿಮಲೆಗೆ,-ಎಲ್ಲಿ ಹೊರಟಾಗಲೂ ಇವಳ ಕಣ್ಣೀರೊಂದು ಇದ್ದೇ ಇದೆಯಲ್ಲ ಎಂದು ಮೂದಲಿಸಲು, ವಿಮಲೆ ಮತ್ತಷ್ಟು ನೀರನ್ನು ಬಸಕ್ ಎಂದು ಇಳಿಸಿ, ಕಾಕಿನಾಡ-ಗಂಗಕ್ಕನ ಆರ್ಣಿ ಸೀರೆಗೆ ಮೂಗನ್ನಿಟ್ಟು ಎರಡು ಕರ್ಕಶ 'ರೀಡ್ಸ್'ಗಳಿಂದ ಫರಕ್ ಎಂದಳು.

ಕಣ್ಣಿಯ ಫೆರೋಜಾಬಾದ್ ಲೋಲಕದ ಒಂದು ಮಣಿ ಜಾರಿದೆ ಯೆಂದು ತಲಚೇರಿ-ಅತ್ತಿಗೆ ಕಂಡುಬಂದುದು ಆಗಲೇ. ಇದೇನೇ ಮಣಿ ಕಾಣೆ ಎಂದು ತಲಚೇರಿ ಅತ್ತೆ ಜಬರಿಸಲು, ಅದು ಮೊನ್ನೆ ಮಂಜೇಶ್ವರ ದಲ್ಲೇ ಹೋಗಿದೆ ಎಂದು ಕಣ್ಣಿ ಉತ್ತರತ್ತಳು. ಅಷ್ಟರಲ್ಲಿ, ಕುಂದಾಪುರ-ಮಲ್ಲಿಗೆಯ ಚೆಂಡನ್ನು ಬಿಡಿಸುತಿದ್ದ ಮೂಡಬಿದ್ರೆ ದೊಡ್ಡಮ್ಮನ ಬೆನ್ನಿನ ಮೇಲಕ್ಕೆ ಕಿನ್ನಿಗೋಳಿ-ನೇತ್ರಮ್ಮನ ತಂಟಲ್ಮಾರಿ ಕಿಟ್ಟು ಬಂದು ಘುರ್ಝುಕ್ ಎಂದು ಹಾರಲು,-ಪರಮಾತ್ಮ, ಕೊಡ್ಗಿರಾಯನ ಶಿಕ್ಷೆಯಪ್ಪಾ ಇದು ಎಂದು ಮೂಡಬಿದ್ರೆ-ದೊಡ್ಡಮ್ಮ ಹೂ ಚೆಂಡನ್ನು ಕೆಳಗಿಟ್ಟು ಕಿಟ್ಟುವಿನ ತೊಡೆ ಚಿವುಟಿ ಅವನಿಂದ ವಾದ್ಯ ಮೊಳಗಿಸಿ ಬಿಟ್ಟಳು.

ಅಷ್ಟರಲ್ಲಿ ವಿರಾಜಪೇಟೆಯ ವಿಟ್ನಾಯ್ಕ ಬಂದು, ಮೈಸೂರಲ್ಲಿ ಅಕ್ಕಿ ರೇಶನ್ ಬಿಗುವಾಗಿದೆಯಂತೆ–ಮೈಸೂರಿಗೆ ಹೋಗಿ ಊಟಮಾಡೋದೆಲ್ಲಿ–ಹೋಗೋದೇ ಬೇಡವೆಂದು ಠರಾವಾಗಿದೆಯೆನ್ನಲು, ಎಲ್ಲರೂ ಒಂದೇ ಬಾರಿಗೆ ಜೋಡು ಜೋಡು ಕಣ್ಣುಗಳನ್ನು ಅಗಲವಾಗಿ ತೆರೆದು ಒಬ್ಬ ವಿಟ್ನಾಯ್ಕನನ್ನು ಆ ನೂರಾರು ಕಣ್ಣುಗಳಿಂದ ತಿವಿದು, ತುಟಿಗಳನ್ನು ಸಂಕೋಚಿಸಿ ಒಳಗೆ ಉಸಿರೆಳೆದು ಒಂದು ಬಿಗಿಲೂದಿದರು. ನಾವಾರೂ ಮೈಸೂರಿಗೆ ಹೋಗಲೇ ಇಲ್ಲ—ಹೋಗುವ ಅದೃಷ್ಟ ನಮಗಿಲ್ಲವೇ ಇಲ್ಲ ಎಂದು ಬೆಂಗಳೂರಮ್ಮನ ಕೂಡೆ ಕೂಳೂರು ಸೀತಕ್ಕ ದುಃಖದಿಂದ ಹೇಳಿದಳು. ತಿಪ್ರೂರ್ರು ಮುಂಡನ್ನುಟ್ಟು, ಅಹಮದಾಬಾದ್ 'ಕೆಲಿಕೋ' ಶರ್ಟನ್ನು ತೊಟ್ಟು, ಕಣ್ಣಾನೂರ್ ಚೆಕ್ಕಿನ ಕೋಟ್ ಹಾಕಿ, ಕೌನ್ಪೂರ ಚಪ್ಪಲ್ ಧರಿಸಿ, ಅಫಘಾನ್ ಬ್ರಿಲಿಯಂಟಾಯ್ಲ್ ಲೇಪಿಸಿ, ಜೆಸ್ಸೂರ್ ಬಾಚಣಿಗೆಯಿಂದ ತಲೆ ಬಾಚಿ, ಶೆಫಿಲ್ಡ್ ಬಾಳಿನಿಂದ ಕ್ಷೌರ ಮಾಡಿದ ಮುಖಕ್ಕೆ ಮುಂಬಯಿ ಸ್ನೋ ಹಚ್ಚಿ, ಫ್ರೆಂಚ್ ಸಿಗರೇಟನ್ನು ಬಾಯಲ್ಲಿಟ್ಟು ಕಚ್ಚಿ, ಇಂಗ್ಲೆಂಡ್ ಸೈಕಲ್ ಹತ್ತಿ ಬೊಂಬಾಯಿಯಣ್ಣ ಹೊರಹೊರಟನು.

ನಾವು ಮೈಸೂರಿಗೆ ಹೋಗಲೇ ಇಲ್ಲ. ಹೋಗಿ ಬಂದುದಕ್ಕಿಂತ ಕಷ್ಟವಾಯಿತೆಂದಳು ಅಮ್ಮ. ಎಷ್ಟು ಬಸ್ಸುಗಳು ಬೇಕಾಗುತಿದ್ದುವೋ, ಮೈಸೂರಿನ ಎಷ್ಟು ಅಕ್ಕಿ-ರಾಗಿ ಖಾಲಿಯಾಗುತಿತ್ತೋ ಎಂದ ವಿಟ್ನಾಯ್ಕ. ಮೈಸೂರಿಗೆ ಹೋಗಲೆಂದು ಬಂದಿದ್ದ ಕಾವೂರಮ್ಮ, ಮಡಿಕೇರಿ ರಾಫೆ,

ಪುತ್ತೂರು ಪದ್ಮಮ್ಮ, ಕಾರ್ಕಳಕ್ಕ, ಬಂಟ್ವಾಳತ್ತೆ, ಕಾಕಿನಾಡು ಗಂಗಕ್ಕ, ಕಿನ್ನಿಗೋಳಿ ನೇತ್ರಮ್ಮ, ವಿಶಾಖಪಟ್ಣ ಡಾಕ್ಟರ ಮಾವ, ತಲಚೇರಿ ಅತ್ತೆ, ಲಂಡನ್ ಭಾವ, ಕರಾಚಿ ಚಿಕ್ಕಪ್ಪ, ಹೊಸಂಗಡಿ ವಾಸಣ್ಣ, ಮೂಡಬಿದ್ರೆ ದೊಡ್ಡಮ್ಮ, ಕೂಳೂರು ಸೀತಕ್ಕ, ಚಿಕ್ಕಿ-ಚಿಮ್ಮ, ವಿರಾಜಪೇಟೆ ವಿಟ್ಟಯ್ಯ ....ಎಲ್ಲರೂ ಅವರವರ ಊರಿಗೆ ತೆರಳಿದರು. ನಾನು ಕೂಗಿದೆ. ನಿಲ್ಲಿಸೇ ನಿನ್ನ ಲಾಲ್‌ಬಾಗ್—ಬೇಂಡ್ ಎಂದು ಅಮ್ಮ ಗದರಿಸಿದಳು. ಆಯಿತು.

---

೧೮. ಮದುವೆಗಂಡುಗಳಲ್ಲಿ ಕಳ್ಳಸಂತೆ

ವರದಕ್ಷಿಣೆ ನಿಷೇಧಕ್ಕೆ ಸೂಚನೆ

ಸರಕಾರೇತರ ಸ್ವ—ನೇಮಿತ ಸಮಿತಿಯ ಸಲಹೆಗಳು

ಸಿಂಧಪ್ರಾಂತ್ಯದಲ್ಲಿ ವರದಕ್ಷಿಣೆಗೆ ಸರಕಾರವೇ ಮಿತಿ ನಿರ್ಧರಿಸಿದೆ. ಇದರ ಫಲವಾಗಿ, ಮದುವೆ ಗಂಡುಗಳು ಮಾಯವಾಗಿ ಕಳ್ಳಸಂತೆ ಸೇರಿರುವರಾಗಿಯೂ ವರದಿಯಾಗಿದೆ. ಶಾರದಾ ಕಾನೂನು ಬಂದು ಕಳ್ಳ ಮದುವೆ; ವರದಕ್ಷಿಣೆ ಕಾನೂನು ಬಂದು, ಕಳ್ಳಸಂತೆ!

* * * *

'ಧನಿಯಿಲ್ಲದ ಧನವಾದರೂ ಆಗಬಹುದು; ಧನವಿಲ್ಲದ ಧನಿಬೇಡ' ವೆಂದು ಹುಡುಗಿಯ ಇಚ್ಛೆ. 'ಹಣವಿಲ್ಲದ ಹೆಣ್ಣಿಗಿಂತ ಹೆಣ್ಣಿಲ್ಲದ ಹಣ ವಾದರೂ ಆಗಬಹುದು' ಎಂದು ಗಂಡು ಹೇಳುತ್ತಾನೆ—ಎಂದು ಈ ಸಮಿತಿಯ ಲಕ್ಷ್ಯಕ್ಕೆ ಬಂದಿದೆ.

* * * *

ಸಿಂಧದಲ್ಲಿ ಕಳ್ಳ ಸಂತೆ. ಉಳಿದ ಕಡೆಗಳಲ್ಲಿ ದಲ್ಲಾಳಿಗಳ ಕಾಟದ ಸಂತೆ! 'ವರದಕ್ಷಿಣೆ ಪಡೆದ ಬಗ್ಗೆ ರಶೀದಿ ಕೊಟ್ಟು, ದ್ವಿಪ್ರತಿಯನ್ನಿಟ್ಟು ಕೊಂಡು, ಅಧಿಕಾರಿಗಳು ಬಂದು ಕೇಳಿದಾಗ ತೋರಿಸತಕ್ಕದ್ದೆ'ಂಬ ಕಾನೂ ನಿಲ್ಲದಿದ್ದರೂ-ಇತರ ಕಡೆಗಳಲ್ಲಿಯೂ ವರದಕ್ಷಿಣೆ ಮಟ್ಟಿಗೆ ನಡೆದುದು ಕಳ್ಳಸಂತೆಯೇ ಎನ್ನಲಾಗಿದೆ.

* * * *

ದಲ್ಲಾಳಿ ಬಂದು, ಹುಡುಗಿ ತಂದೆಯೊಡನೆ ಪಿಸು ಮಾತಾಡುತ್ತಾನೆ. ತಲೆನರಗಳು ನಿರ್ಜೀವವಾದ ಆ ತಂದೆ, ಕೇಳುತ್ತಾನೆ. ಯಾವನೋ ಪ್ರಸಿದ್ಧ ಹುಡುಗನು ಸಂತೆಯಲ್ಲಿ ಸಿದ್ಧನೆಂದೂ, ಈ ಮೊದಲೇ ಹತ್ತು ಸಾವಿರ ರೂಪಾಯಿ ಕ್ರಯವಾಗಿದೆಯೆಂದೂ ತಾತ್ಪರ್ಯ. ದಲ್ಲಾಳಿ ಸಿಂಗಳೀಕನು, ಎಂಟು ಕಡೆಗಳಲ್ಲಿ ಇದೇ ರೀತಿ ಪಿಸು ಮಾತಾಡುತ್ತಾನೆ. ಮದುವೆ ಗಂಡಿನ ಧಾರಣೆ ಇಷ್ಟರೊಳಗೆ ಇಪ್ಪತ್ತು ಸಾವಿರಕ್ಕೆ ಮುಟ್ಟಿದೆ. ತಕ್ಕಡಿಯಲ್ಲಿ, ಆ ಮದುವೆ ಗಂಡನ್ನೂ ಇಪ್ಪತ್ತು ಸಾವಿರ ರೂಪಾಯಿಗಳನ್ನೂ ಇಟ್ಟು ತೂಗಿದರೆ, ತುಲನೆಗಿಟ್ಟ ರೂಪಾಯಿಗಳಲ್ಲಿ ರೂ. ೧೯೯೯—೧೫—೯॥ ಹೆಚ್ಚೇ ಹೆಚ್ಚೆಂದೂ ಹೇಳಲಾಗಿದೆ.

* * * *

ಶಿವಮೊಗ್ಗದ ದಾರಿಯಾಗಿ ಬರುವಾಗ ಒಂದು ಹಳ್ಳಿಯ ರಸ್ತೆಯ ಮುಂದೆ "ಗಂಡುಸರು ೩೨೮, ಹೆಂಗುಸರು ೪೩೫" ಎಂದು ಬರೆದ ಹಲಗೆ ಈ ಸಮಿತಿಯ ಕಣ್ಣಿಗೆ ಬಿದ್ದಿದೆ. ಆ ಊರಿನಲ್ಲಿ ಮದುವೆಗಂಡುಗಳ ಕಳ್ಳಸಂತೆ ಎಷ್ಟಿರಬೇಕೊ ಎಂದಾಶ್ಚರ್ಯವಾಗುತ್ತಿದೆ. ಒಳ್ಳೆ ಗಂಡುಜಾತಿ ಮಕ್ಕಳನ್ನು ಹೆರುವ ನಾಲ್ಕು ಹೆಣ್ಣುಗಳನ್ನು ಈ ಊರಿನವರು ಮದುವೆಯಾಗಿಲ್ಲವೇಕೆ ಎಂದು ಚಿಂತೆಯಾಗುತ್ತದೆ. ಬೇಡಿಕೆಗಿಂತ ಪೂರೈಕೆ ಕಡಿಮೆಯಾದರೆ ಯಾವಾಗಲೂ ದರ ಹೆಚ್ಚು—ಎಂದು ಅಭಿಪ್ರಾಯ ಪಡಲಾಗಿದೆ.

* * * *

ಇತ್ತೀಚೆಗೆ ಬೊಂಬೇ ಟೊಕಿಸ್ ಗಂಡ—ಬೊಂಬೇ ಟೊಕಿಸ್ ಹೆಣ್ಣು; ನ್ಯೂ ಥಿಯೇಟರ್ಸ್ ಗಂಡ—ನ್ಯೂ ಥಿಯೇಟರ್ಸ್ ಹೆಣ್ಣು; ಶಾಲಿಮಾರ್ ಗಂಡ—ಶಾಲಿಮಾರ್ ಹೆಣ್ಣು ಈ ರೀತಿಯಾಗಿ ವರ್ಗೀಕರಣವಾದಂತೆ ವರದಿಯಿದೆ. ಸಾಮುದ್ರಿಕ ಶಾಸ್ತ್ರವನ್ನೂ ಬದಲಾಯಿಸಿ, ಹೆಣ್ಣಾದರೆ ೧. ಲೋಲಕ ೨. ವ್ಯೈಬಣ್ಣ ೩. ಸೀರೆ ಈ ಮೂರರ ಮೇಲಿಂದಲೂ, ಗಂಡುಸಾದರೆ ೧. ಕ್ರಾಪ್ ೨. ಬಿ. ಎ. ೩. ಪಾಯ್ಜಾಮಾ ಈ ಮೂರರ ಮೇಲಿಂದಲೂ ನಿರ್ಧರಿಸುವರೆಂದು ತಿಳಿಯಲಾಗಿದೆ.

* * * *

ಕಪ್ಪು, ನೀಲ, ಹಳದಿ, ಕೆಂಪು, ನೇರಳೆ ಮೊದಲಾದ ಬಣ್ಣಗಳ ಗಂಡುಸರು, ಕೇವಲ ಬಿಳಿ ಬಣ್ಣದ ವಧುಗಳನ್ನೆ ನಿರೀಕ್ಷಿಸುತ್ತಿರುವ ಕಾರಣ, ಹೆಣ್ಣುಗಳು ಅಫಘಾನ್, ತಿಬೇತ್, ಮಂಗೋಲಿಯಾ, ಮಂಚೂರಿಯಾ, ಅರಕಾನ್, ಮಲಯಾ, ಸಿಂಗಾಪುರ ಮೊದಲಾದ ಎಲ್ಲ ಜಾತಿಯ "ಸ್ನೋ" ಗಳನ್ನು ಮುಖಕ್ಕೆ ತಿಕ್ಕಿ ತಿಕ್ಕಿ ಬಿಳುಪೇರದೆ, ಕೊನೆಗೆ ಆಕಸ್ಮಿಕವಾಗಿ ಬಿಳಿಗಂಡನನ್ನು ಕಪ್ಪುಹೆಣ್ಣೂ, ಬಿಳಿಹೆಣ್ಣನ್ನು ಕೆಂಪುಗಂಡೂ, ಮದುವೆ ಯಾಗುವ ವಿಚಿತ್ರ ದೈವಲೀಲೆ ಕಂಡು ಬಂದಿದೆಯೆಂದು ಹೇಳಲಾಗಿದೆ.

* * * *

ವರದಕ್ಷಿಣೆ ಪಡೆಯದೆ ಮದುವೆಯಾಗುವ ಗಂಡು ಊರಿಗೊಂದಾದರೂ ಇದ್ದರೆ ಮತ್ತೆ ಕೇರಿಗೊಂದರಂತಾಗಿ–ಮುಂದೆ ಮನೆಗೊಂದರಂತಾಗುವ ಸಂಭವವಿದೆಯೆಂಬ ತರ್ಕವನ್ನು ಈ ಕಮಿಟಿಯು ಒಪ್ಪುವುದಿಲ್ಲ. ವರದಕ್ಷಿಣೆ ಪಡೆಯದ ಗಂಡು ಒಂದು ಊರಿನಲ್ಲಿ ಒಬ್ಬನೇ ಇದ್ದರೆ ಅವನನ್ನು ಇತರರು ಭ್ರಷ್ಟ ಕಾಗೆಯನ್ನು ಇತರ ಶುದ್ಧ ಕಾಗೆಗಳು ಕುಕ್ಕಿ ಕೊಲ್ಲುವಂತೆ ತೀರಿಸ್ಯಾರೆಂಬ ಭಯವು ಈ ಕಮಿಟಿಗಿದೆ.

* * * *

ವರದಕ್ಷಿಣೆ ಬೇಡವೆಂದು ನಿಶ್ಚಯ ಮಾಡಿಕೊಳ್ಳುವವರೇ ಇಲ್ಲವೆಂದೂ, ಹಾಗೆಲ್ಲಿಯಾದರೂ ವರದಕ್ಷಿಣೆ ನಿರಾಕರಿಸುವವರಿದ್ದರೆ— ಅಂಥವರು ಪರಜಾತಿಯ ಹೆಣ್ಣನ್ನು ಲಗ್ನವಾಗುವಾಗ ಮಾತ್ರ ಅದನ್ನು (ವರದಕ್ಷಿಣೆಯನ್ನು) ನಿರಾಕರಿಸುವರೆಂದೂ ತಿಳಿಯಲಾಗಿದೆ.

* * * *

ವರದಕ್ಷಿಣೆಯ ಪದ್ಧತಿಯನ್ನು ನಿಲ್ಲಿಸಲು ಈ ಸಮಿತಿಯು ಒಂದೇ ಒಂದು ಸಲಹೆ ಕೊಡುತ್ತದೆ: ಪ್ರತಿಯೊಂದು ಊರಿನಲ್ಲಿ ಸ್ತ್ರೀಸ್ಥಾನ ಮತ್ತು ಪುರುಷಸ್ಥಾನ ಎಂದು ಎರಡು ಸ್ಥಾನಗಳನ್ನು ರಚಿಸಿ, ನಡುವೆ ಕೊಂಕ್ರೀಟ್ ಗೋಡೆ ಕಟ್ಟಿ, "ಇಪ್ಪತ್ತು ವರ್ಷಗಳ ತನಕ ಯಾವ ಊರಿನಲ್ಲಿಯೂ ಹೆಣ್ಣು ಗಂಡನ್ನೂ ಗಂಡು ಹೆಣ್ಣನ್ನೂ ನೋಡಬಾರದು" ಎಂಬ ಶಾಸನವನ್ನು ಜ್ಯಾರಿಗೆ ತರಬೇಕು. ಇಪ್ಪತ್ತನೇ ವರ್ಷ ಕಳೆದ ಅನಂತರ ಗೋಡೆಯೊಡೆದು, ಅವರವರ ಸಂಗಾತಿಯನ್ನು ಹೆಕ್ಕಲು ಅಪ್ಪಣೆಮಾಡ

ಬೇಕು. ಮತ್ತೆ, ಇಂತಹ ಚುನಾವಣೆಯು ವರ್ಷವರ್ಷವೂ ನಡೆಯ ಬಹುದು.

* * * *

ಇಂದಿನ ಮದುವೆಗಂಡಿನ ಕುರಿತು ಈ ಸಮಿತಿಯು ಈ ಷರಾ ಬರೆದಿದೆ:

“ಎಂಟನೇ ತರಗತಿಯಲ್ಲಿ ಹೃದಯ ಅರಳಿ ಹುಡುಗಿಯರ ಮೈಮೇಲೆ ಕಾಗದದ ಚಿಕ್ಕಮಾತ್ರೆಗಳನ್ನು ಬಿಸುಡಿ, ಒಂಭತ್ತನೇ ತರಗತಿಯಲ್ಲಿ ಸೈಕಲಿನಲ್ಲಿ ಸಿಳ್ಳುಹಾಕುತ್ತಾ ಸವಾರಿಮಾಡಿ, ಹತ್ತನೇ ತರಗತಿಯಲ್ಲಿ ದೇವರಿಲ್ಲವೆಂದು ಆಣೆಹಾಕಿ ಹೇಳಿ, ಇಂಟರ್‌ಮೀಡಿಯೇಟಿನಲ್ಲಿ ಭಯಂಕರ (ಆದರೆ ನಿರಪಾಯಕಾರಿ) ಕಮ್ಯೂನಿಸ್ಟನಾಗಿ ಎಲ್ಲ ಸಂಪತ್ತಿನ (ತನ್ನದಲ್ಲ) ಪಾಲಾಗಬೇಕೆಂದು ಹೇಳಿ, ಬಿ.ಎ.ಯಲ್ಲಿ ಫಕ್ಕನೆ ಮುಗುಳ್ನಗೆ ಕಲಿತು ಮದುವೆಯಾಗಿ, ಅನಂತರ ಒಂದು ವರುಷ ಸಪತ್ನೀಕನಾಗಿ ಇಸ್ತ್ರಿಶರ್ಟು ಸಹಿತ ನಗರ ಸಂಚಾರ ಮಾಡಿ ದಣಿದು, ಮಕ್ಕಳಾದ ಮೇಲೆ ಮೈಮೇಲೆ ಕಪ್ಪೆ ಹಾರಿದರೂ ಚಕಿತನಾಗದೆ ಬಾಡಿದ ಪುಷ್ಪದಲಗಳಂತೆ ಎರಡು ಒಣಕಣ್ಣುಗಳಿಂದ ಅರ್ಥವಿಹೀನವಾಗಿ ನೋಡುವ,--ಈ ಸಪ್ತವಯೋವಸ್ಥೆಗಳನ್ನು ದಾಟುವಾತನು,-ವರದಕ್ಷಿಣೆಯನ್ನು ಹೇಗೆ ಕಾದಾಡುವನು, ಮದುವೆಗಂಡುಗಳ ಕಳ್ಳಸಂತೆಯನ್ನು ಹೇಗೆ ನಿಲ್ಲಿಸುವನು! ಇವನಿಗೆ ಯೋಗ್ಯ ಪ್ರಜೆಯಾಗೆಂದು ಕಲಿಸಿದವರಾರು! ಅಪ್ಪ—ಅಮ್ಮ ಕೇಳಲಿಲ್ಲ, ಅಧ್ಯಾಪಕ ಹೇಳಲಿಲ್ಲ, ಸುಜ್ಞಾನದಿಂದ ನೋಡಲಿಲ್ಲ, ಸ್ವತಹ ಮಾಡಲಿಲ್ಲ.--ಆದಕಾರಣ ಹುಟ್ಟಲೂ ಇಲ್ಲ ಬೆಳೆಯಲೂ ಇಲ್ಲ ಎನ್ನುವಂತಹ ವರ್ಗದ ಲಕ್ಷೋಪಲಕ್ಷ ಜೀವಿಗಳಲ್ಲಿ ಇವನೂ ಒಬ್ಬನು.”

---

೧೯. ನಾನೀ ದಿನಗಳನ್ನು ಮೆಚ್ಚುತ್ತೇನೆ!

ನ್ಯಾಯಾಧೀಶ: “ಕೈದಿಯೇ ನಿನ್ನ ಮೇಲಿನ ಆಪಾದನೆಗೇನ್ನು ಹೇಳುತ್ತಿ? ತಪ್ಪನ್ನೊಪ್ಪುವಿಯಾ?”

ಕೈದಿ: “ನನ್ನ ವಕೀಲರ ಹೇರಿಂಗ್ ಕೇಳಿ, ನಾನು ಕದಿಯಲಿಲ್ಲವೆಂದು ನನಗೆ ಖಚಿತವಾಗಿದೆ.”

ನಾನೀ ದಿನಗಳನ್ನು ಮೆಚ್ಚುತ್ತೇನೆ. ಇತ್ತೀಚೆಗೆ, ಹೊಟು ಮತ್ತು ಬೂಟಿನ ಕ್ರಯ ಕೇಳಿದಂದಿನಿಂದ ನನಗೆ ಈ ದಿನಗಳ ಮೇಲಿನ ಮೆಚ್ಚುಗೆ

ಮೂರ್ಮಡಿಯಾಗಿದೆಯಲ್ಲದೆ ಈ ಭೂಮಿಯಲ್ಲೇ ಬಹುಕಾಲ ಇರಬೇಕೆಂದೂ ಇಚ್ಛೆಯಾಗಿ, ಮಮತೆ ನೂರ್ಪಾಲಾಗಿದೆ.

ಚೀನದಲ್ಲಿ ಒಂದು ಹೇಟಿಗೆ ನಾವು ಏಳನೂರ ಐವತ್ತು ರೂಪಾಯಿ ಕೊಡಬೇಕೆಂದೂ, ಇಲ್ಲಿ ಹತ್ತೇ ರೂಪಾಯಿ ಕೊಟ್ಟರೆ ಸಾಕೆಂದೂ ನಮಗೆ ತಿಳಿಸಲಾಗಿದೆ. ಇದರಿಂದ, ನಮ್ಮ ವ್ಯಾಪಾರಿಯು ನಮಗೆ ಹತ್ತೇ ರೂಪಾಯಿಗೆ ಟೊಪ್ಪಿಯಿಡುವನು — ಚೀನದಲ್ಲಿ ಎಪ್ಪತ್ತೈದು ಪಾಲು ಹೆಚ್ಚು ಬಿರುಸಿನಿಂದ ಎಂದೂ;

ಇರಾನಿನಲ್ಲಿ ಒಂದು ಜತೆ ಬೂಟ್ಸಿಗೆ ಮುನ್ನೂರು ರೂಪಾಯಿ ಪಡೆವರು, ಇಲ್ಲಿ ಪುನಃ ಇದಕ್ಕೆ ಹತ್ತೇ ರೂಪಾಯಿ ಎಂಬುದರಿಂದ ಇಲ್ಲಿಯ ವ್ಯಾಪಾರಿ ನಮಗೆ ಹತ್ತೇ ರೂಪಾಯಿಗೆ ಪಾದರಕ್ಷೆಯ ಆನಂದ ಕೊಡುವನು—ಇರಾನಿನಲ್ಲಿ ಮೂವತ್ತು ಪಾಲು ಬಿರುಸಿನಿಂದ ಎಂದೂ:—

—ವಾಣಿಜ್ಯ ನೃಪತಿಗಳ ಬಾಯಿಂದ ಕೇಳುತ್ತಲೇ, ಯಾರಿಗೂ ಈ ದಿನಗಳೂ ಈ ಭೂಮಿಯೂ ಬೇಡವೆಂಬ ವೈರಾಗ್ಯವುಂಟಾಗುವಂತಿಲ್ಲ. ಮತ್ತೆ ನಾವು ಇಲ್ಲಿ ಒಂದು ರಾತ್ಲು ಬೆಣ್ಣೆಗೆ ನೂರಮೂವತ್ತೈದು ರೂಪಾಯಿ ಕೊಡಬೇಕಾಗಿಲ್ಲವೆಂದು ಸ್ಪಷ್ಟವಾಗಿ ತಿಳಿಸಲಾದ ಮೇಲೆ "ನಿನ್ನುದರದಲಿ ಜನಿಸುವೆ ತಾಯೆ"—"ಹರಕು ಚಿಂದಿಗಳಿರಲೆನಗೆ" ಎಂದ ಕವಿಯ ಭಾಮಿನಿ ಷಟ್ಪದಿ ನೆನಪಿಗೆ ಬಂದು, ಆ ಕವಿ ಮುಂದಾಗುವುದನ್ನು ಹೇಗೆ ತಿಳಿದನೊ ಎಂದಾಶ್ಚರ್ಯವೂ, ಅವನ ಇಚ್ಛೆಗಾಗಿ ಅಭಿಮಾನವೂ ಉಂಟಾಗಿ, 'ಜೈಭಾರತ' ಎಂಬುದಕ್ಕೆ ಹೊಸ ಅರ್ಥವೂ ಹೊಳೆದು, ಏಳನೆ ಸ್ವರ್ಗಕ್ಕೇರಿದ್ದೇನೆ. 'ಪುಡಿಯನ್ನ ಮಾತ್ರ ನನಗಿರಲಿ' ಎಂದ ಕವಿಯನ್ನು, ಹೇಟು-ಬೂಟಿನ ಸಂಖ್ಯೆ ಕೊಟ್ಟ ವಣಿಕ್-ನೃಪತಿ ಸೋಲಿಸಿ, ತೆತ್ತೀಸ ಕೋಟಿ (ಈಗ ಮೂವತ್ತೆಂಟು) ದೇವತೆಗಳಿಗೂ ಬದುಕಿರಲು ಆಶ್ವಾಸನೆಯಿತ್ತನು.

ಇಂತಹ ಸೌಭಾಗ್ಯವಿಲ್ಲಿರುವಾಗ ನಾನು ಚೀನಕ್ಕೆ ಹೋಗಬಾರದು; ಇರಾನಿಗೂ ಕೂಡದು. ಹೋದರೆ ದ್ರೋಹಿಯೂ ಆಗುವೆನು, ಮೂರ್ಖನೂ ಆಗುವೆನು. ಇಲ್ಲೇ ಇರಲು, ಇದ್ದು ಸಾಯಲು ತಿರಸ್ಕರಿಸಲು, ಸತ್ತರೂ ಪುನಃ ಇಲ್ಲೇ ತಿರಿಗಿ ಜನಿಸಲು ನಿರ್ಧಾರ ಮಾಡಿದ್ದೇನೆ.

ಕಳೆದೈದು ವರ್ಷಗಳಿಂದ ಚಿಂತಿಸುತಿದ್ದೆ; ಇಂದಿನ ಸ್ಥಿತಿಗೆ ಕಾರಣ ರಾರು ಎಂದು. ಈಗ ಅದೂ ತಿಳಿಯಿತು—ಸಾಹುಕಾರನೂ ಅಲ್ಲ, ಸರಕಾರವೂ ಅಲ್ಲ. ಮತ್ತಾರು? ಯುದ್ಧ! ಯುದ್ಧ ಮಾಡುವವರಾರು? ಸೈನಿಕರು! ಸೈನಿಕರಾರು? ಮನುಷ್ಯರು! ಯಾವ ಮನುಷ್ಯರು? ಕಾದಾಡ ಬಲ್ಲ, ಕಾದಾಡಬೇಕೆನ್ನುವ, ಕಾದಾಡುವ ಮನುಷ್ಯರು! ಕಾದಾಟವೇಕೆ? ಯಾರಾದರೊಬ್ಬರು ಸೋಲಬೇಕೆಂದು! ಒಬ್ಬರು ಸೋಲುವುದೇಕೆ? ಇನ್ನೊಬ್ಬನು ಗೆಲ್ಲುವುದಕ್ಕಾಗಿ! ಇನ್ನೊಬ್ಬನ ಗೆಲಿನಿಂದ ಪ್ರಯೋಜನವೇನು? ಮತ್ತೊಬ್ಬನು ಚೇತರಿಸಿಕೊಳ್ಳಲು ಅವಕಾಶ ದೊರೆಯುವುದು!

ಅಹುದು, ನಾನೀ ದಿನಗಳನ್ನು ಮೆಚ್ಚುತ್ತೇನೆ. ಒಂದು ಹಳೇ ಡಬ್ಬಿ ಮಾರಿದರೆ, ಯುದ್ಧಪೂರ್ವದ ಹತ್ತು ಹೊಸ ಡಬ್ಬಿಗಳ ಕ್ರಯ ಬರುತ್ತದೆ. ಈಗೊಂದು ಹೊಸ ಡಬ್ಬಿ ಸಿಗಬೇಕಾದರೆ ಮೂರು ತೊಲೆ ನೋಟು ಕೊಟ್ಟರಾಯಿತು.

ಅಸ್ವಸ್ಥ ಬಿದ್ದಾಗ, ಡಾಕ್ಟರರು ಗ್ಲುಕೋಸ್ ಬೇಕೆಂದರೆ, ಸುಲಭ ವಾಗಿ ಸಿಕ್ಕುತ್ತದೆ. ನಾನು ಡಾಕ್ಟರರ ಶಿಫಾರಸು ಪತ್ರ ಸಹಿತ 'ಸಬ್' ಒಬ್ಬರಿಗೆ ಅರ್ಜಿ ಮಾಡಬೇಕು. 'ಸಬ್ಬ'ರು 'ಡೆಪ್ಯುಟಿ'ಗೆ ಅದನ್ನು ಒಂದೇ ವಾರದೊಳಗೆ ಕಳಿಸುವರು. 'ಡೆಪ್ಯುಟಿ'ಯುವರು 'ಅಸಿಸ್ಟಾಂಟ'ರಿಗೆ ಮುಂದು ವರಿಸುವರು; 'ಅಸಿಸ್ಟಾಂಟ'ರಿಂದ 'ಎಡಿಶನಲ'ರಿಗೆ ತಲಪಲು ಹತ್ತು ದಿನ ಗಳಿಗಿಂತ ಹೆಚ್ಚು ಅವಧಿ ಅವಶ್ಯವಿಲ್ಲ. 'ಎಡಿಶನಲ'ರು 'I ಕ್ಲಾಸ'ರಿಗೆ ಅದನ್ನು ಕಳಿಸಬೇಕೆಂಬುದು ನಿಜವಾದರೂ, ಒಂದೆರಡು ವಾರಗಳು ಮಾತ್ರ ತಗಲುವುವೆಂದ ಮೇಲೆ-ಮತ್ತಾ 'I ಕ್ಲಾಸ'ರು ಅರ್ಜಿಯು ತಮ್ಮ ಕೈಸೇರಿದ ಒಂದು ಪಕ್ಷದೊಳಗೆ ಮಂಜೂರು ಮಾಡುವರೆಂಬುದು ಖಾತರಿಯೆಂದಾದ ಮೇಲೆ-ನಾನು ಅಸ್ವಸ್ಥ ಬೀಳಲೂ, ಡಾಕ್ಟರರು ಗ್ಲುಕೋಸೇ ಬೇಕೆಂದು ನಿರವಿಸಲೂ ಅಡ್ಡಿಯೇನಂತೆ!

ಒಂದು ಫೌಂಟನ್‌ಪೆನ್ ಬೇಕಾದರೆ ನಾನು ನಗರದ ಎಲ್ಲ ಅಂಗಡಿ ಗಳಲ್ಲಿ ಆರು ತಿಂಗಳ ತನಕ ಹಾಜರಿ ಹಾಕುತ್ತೇನೆ. ಏಳನೇ ತಿಂಗಳಲ್ಲಿ ನನಗೊಂದು ಪೆನ್ ಸಿಗುತ್ತದೆ. ಮೇಲಿಂದ ಶಾಯಿ ಹಾಕಿದರೆ, ಎಲ್ಲಿಯೂ ನಿಲ್ಲದೆ ಕೆಳಗಿಳಿದು ಹೋಗುತ್ತಿದೆಯೋ ಎಂದು ನೋಡದೆ ಕಿಸೆಗೆ ತುರುಕು

ತ್ತೇನೆ. "ಎರಡೇ ಬಂದಿದ್ದುವು; ಒಂದು ನಿಮಗೆ''ಂದು ವ್ಯಾಪಾರಿ ಹೇಳು ತ್ತಾನೆ. ಹಾಗಾದರೆ, ಕೆಲವು ಲಕ್ಷ ಪ್ರಜೆಗಳಲ್ಲಿ ಇಬ್ಬರು ಶ್ರೇಷ್ಟರು ಅಥವಾ ಭಾಗ್ಯಶಾಲಿಗಳು—ಅವರಲ್ಲೊಬ್ಬನು ನಾನು ಎಂಬ ಆನಂದಪಡುತ್ತೇನೆ.

ಶಾಯಿ ಹಾಕಿದರೆ ನಿಲ್ಲುವ, ನಿಂತು ಇಳಿದು ಬರಿವ, ಹೆಚ್ಚು ಮೌಲ್ಯದ ಪೆನ್ನುಗಳು ಬೇಕಾದರೆ ನಾನು ಕೇಂದ್ರ ಸರಕಾರಕ್ಕೆ ಅರ್ಜಿ ಮಾಡಬಹುದು. ಆದರೆ, ಆ ಇಲಾಖೆ, ಆ ಇಲಾಖಾಧಿಕಾರಿ, ಅವರಿಗೆ ಬೇಕಾದ ಮಾಹಿತಿ-ಈ ವಿವರ ನನಗೆ ತಿಳಿಯದ ಕಾರಣ ನಾನು ಅರ್ಜಿ ಹಾಕುವುದಿಲ್ಲ. ನನ್ನ ನೋಟುಗಳು ನನ್ನೊಡನೇ ಉಳಿಯುತ್ತವೆ. ಇಲಾಖೆ ತಿಳಿದರೆ ಬರೆಯುತ್ತೇನೆ; ಬರೆದು ಕಾಯುತ್ತೇನೆ. ನಾವು ಪ್ರೇಮಿಸುವ ಹುಡುಗಿಯಂತೆ—ಪಡೆದ ಆನಂದಕ್ಕಿಂತ ಪಡೆಯದೆ ಆಶಿಸುವ ಆನಂದವು ಹಿರಿದಾದುದರಿಂದ ನಾನು ಸದಾನಂದನಾಗಿಯೇ ಜೀವಿಸುತ್ತೇನೆ.

ನನಗೆ ರೋಗ ಬಾರದಿದ್ದರೂ ಮದ್ದು ತಿನ್ನುವ ಆಸೆ ಹೆಚ್ಚುತ್ತಿದೆ. ನಾನು ಆಶಿಸುವ ಮದ್ದು ಇಲ್ಲವೆಂದೋ ಅಥವಾ ಇದ್ದರೂ ಪಡೆಯಲು ಅರ್ಜಿ ಮಾಡಬೇಕೆಂದೋ ಆ ಆಸೆ ಹೆಚ್ಚಿದೆ. ಮದ್ದು ತಿನ್ನುವಂತಹ ಮನಸ್ಸು ತಂದುಕೊಂಡುದರಿಂದ ನಾನು ನನ್ನ ಸುಧಾರಣೆಗಾಗಿ ಗೌರವಪಡುತ್ತೇನೆ.

ಹಾಲು ಸಿಗಲು ಜನರು ಗೋಳಿಡುವಾಗ, ನಾನು, ಶಾಂತ ದಿನಕ್ಕಿಂತ ಹೆಚ್ಚು ಹಾಲು ಒದಗಿಸಿಕೊಳ್ಳಲು ಯತ್ನಿಸುತ್ತೇನೆ. ದನ ಕಡಿಮೆಯಾದರೂ ಧನ ಕಡಿಮೆಯಾಗಿರದ ಕಾರಣ ನಾನು ಗೆಲ್ಲುತ್ತೇನೆ.

ಸರಿಯಾಗಿ ಪಡೆವ ಸಕ್ಕರೆಗೆ ಮರೆಯಾಗಿ ಪಡೆದ ಸಕ್ಕರೆಯ ಸಿಹಿ ಸೇರಿಸುತ್ತೇನೆ. ನನ್ನ ಸಿಹಿ ನನಗೇ ಗೊತ್ತು. ಕದ್ದು ಪಡೆದ ಹೆಣ್ಣು ರುಚಿ; ಕದ್ದು ತಿಂದ ಹಣ್ಣು ರುಚಿ.

ನಾನು ತಲೆದಿಂಬಿಗೊರಗಿ, ದ್ರಾಕ್ಷೆಯನ್ನು ಬಾಯಿಗೆ ಹಾಕುತ್ತ ಪತ್ರಿಕೆ ತೆರೆದು, ಬಂಗಾಲ-ಬಿಜಾಪುರ-ಕೇರಳಗಳ ಮರಣಸಂಖ್ಯೆಯೋದುತ್ತೇನೆ. ಓದಿ ನನ್ನ ಸ್ನೇಹಿತನನ್ನು ಕುರಿತು, "ಈ ಸಂಖ್ಯೆ ಸುಳ್ಳು; ಇರುವೆ ಸತ್ತ ಹಾಗೆ ಸತ್ತಿದ್ದಾರೆ-ಇವರು ಬರೆಯೋದೇ ಇಲ್ಲ" ಎಂದೂ,- ನನ್ನ ನೆರೆಕರೆಯಲ್ಲಿ ಸತ್ತವನ ಕುರಿತು, "ಅವನ ದುಷ್ಕರ್ಮ ಹೆಚ್ಚಾಯಿತು, ಅವನು ಸಾಯದೆ ಉಪಾಯವೇ ಇರಲಿಲ್ಲ"ವೆಂದೂ;-ನನ್ನ

ಅದ್ಭುತ ಶೋಧವನ್ನು ಹೇಳುತ್ತೇನೆ. ನನ್ನ ಸ್ನೇಹಿತನು ಅದನ್ನು ಅಲ್ಲ ಗಳೆಯುಲಾರ; ನಾನು ಗೆದ್ದ ಆನಂದ ಅನುಭವಿಸುತ್ತೇನೆ.

ನಾನು ಸರಕಾರಿ ಅಧಿಕಾರಿಗಳನ್ನು ವಂದಿಸುತ್ತೇನೆ (ಎದುರಲ್ಲಿ); ನಿಂದಿಸುತ್ತೇನೆ (ಮರೆಯಲ್ಲಿ); ಸಂಧಿಸುತ್ತೇನೆ (ನನ್ನ ಕೆಲಸಕ್ಕಾಗಿ); ಕುಂದಿ ಸುತ್ತೇನೆ (ಮನದಲ್ಲಿ); ಬಂಧಿಸುತ್ತೇನೆ (ಕನಸಿನಲ್ಲಿ).

ಹೋಟಲಲ್ಲಿ ಬೋಂಡವು ಜೊಗರಿಯ ಆಕಾರ ತಾಳಿದ ಕರಕೌಶಲ್ಯ ವನ್ನು ಮೆಚ್ಚುತ್ತೇನೆ; ದೋಸೆಯು ಡಾಕ್ಕಾ ಮಸ್ಲಿನಪಷ್ಟು ತೆಳ್ಳಗಾದ ಅದ್ಭುತಕ್ಕೆ ವಿಸ್ಮಯಗೊಳ್ಳುತ್ತೇನೆ; ಮೈಸೂರುಪಾಕು ಹೈದರಾಬಾದ ಪಾಕಿನಂ ತಾದ 'ಟ್ರಾನ್ಸ್‌ಫರ್' ಕಾಣುತಿದ್ದೇನೆ; ಬಂಡೆಯಷ್ಟು ಗಟ್ಟಿ ಉಂಡೆ ಜಗಿಯು ತಿದ್ದೇನೆ; ರಬ್ಬರಿನ ಪುರಿಗಳನ್ನು ತಿನ್ನುತಿದ್ದೇನೆ; ಕಿಚಡಿಯಂಥ ಕೇಸರಿಬಾತ್ ನುಂಗುತಿದ್ದೇನೆ; ಒಮ್ಮೊಮ್ಮೆ ಇಷ್ಟೆಲ್ಲ ತಿನ್ನಲು ದೊರೆಯದಿದ್ದರೂ ಹೋಟ ಲಲ್ಲಿ ದಿನಕ್ಕೊಂದು ನಿಮಿಷ ಕುಳಿತು ಮಲೇರಿಯಾ ಮಿಕ್ಶ್ಚರಿನಂಥ ಕಾಫಿ ಯಾದರೂ ದೊರೆಯಲೆಂದು ಆಶಿಸುತ್ತೇನೆ; ಸ್ಥಳ ದೊರೆತರೆ, ಜೀವನ ಸಂಗ್ರಾಮದಲ್ಲಿ ಗೆದ್ದಷ್ಟು ಆನಂದ ಹೊಂದುತ್ತೇನೆ.

ನಮ್ಮ ದೇಶವು ದೊಡ್ಡದೆನ್ನುತ್ತೇನೆ; ನಾವು ಎಲ್ಲರಿಗಿಂತಲೂ ಶ್ರೇಷ್ಟ ರೆನ್ನುತ್ತೇನೆ; ನಮ್ಮ ಉದಾರತನಕ್ಕೆ ಸರಿ ಸಮಾನವಿಲ್ಲವೆನ್ನುತ್ತೇನೆ; ನನ್ನ ಹಿರಿಯರ ದಾನಧರ್ಮ ಬುದ್ಧಿಗಳನ್ನು ಇತರರಿಗೆ ಹೇಳಲು ಹೆಮ್ಮೆ ಪಡು ತ್ತೆನೆ. ನಮ್ಮ ಪುರಾತನ ಅರಸರ ಪರಾಕ್ರಮ, ನ್ಯಾಯಶೀಲತೆ, ಪರೋಪ ಕಾರ— ತ್ಯಾಗ, ಭೋಗ, ಯೋಗ, ಎಲ್ಲವನ್ನೂ ಪದೇ ಪದೇ ಹೇಳುತ್ತೇನೆ. ನಮ್ಮ ಹಿರಿಯರು ದೀರ್ಘಾಯುಗಳಾಗಿದ್ದರೆಂದೂ, ಬಲಿಷ್ಠರಾಗಿದ್ದರೆಂದೂ ಹೇಳುವಾಗ ಪುಳಕಿತನಾಗುತ್ತೇನೆ. ಕರ್ಣ, ದಧೀಚಿಗಳ ಕಥೆ ಓದುತ್ತೇನೆ; ಹೇಳುತ್ತೇನೆ; ದಾಮಾಜಿಯ ಚರಿತ್ರೆಯನ್ನು ಹೇಳುತ್ತೇನೆ; ಏಕನಾಥನ ಕಥೆ ಹೇಳುತ್ತೇನೆ;........ಇದೆಲ್ಲವನ್ನೂ ಮೊದಲಿಗಿಂತ ಈಗ ಹೆಚ್ಚೆಚ್ಚು ಹೇಳಲು ತೊಡಗಿದ್ದೇನೆ.

ಮತ್ತೆ ನಾನೂ ನನ್ನಂತೆ ನೀವೂ ಭಾರತದಲ್ಲಿ ಹುಟ್ಟಿದ ಭಾಗ್ಯಕ್ಕಾಗಿ ಕೃತಜ್ಞರಾಗಿರಲು, ಸಾಯಲೇಬಾರದೆಂದು ಸಂಕಲ್ಪಿಸಲು, ಈ ದಿನಗಳು

ಸದಾ ಇದೇ ರೀತಿಯಿರಲೆಂದು ಆಶಿಸಲು,—ಹೇಟ್, ಬೂಟ್ ಮತ್ತು ಬೆಣ್ಣೆಯ ಪಟ್ಟೆಯೊಂದಿಗೆ ಈ ಪಟ್ಟಿ ಕೊಡುತ್ತೇನೆ:

"ಇಲ್ಲಿ ನೀವು ಒಂದು ಮೊಟ್ಟೆಗೆ ಹನ್ನೆರಡಾಣೆ ಕೊಡಬೇಕಾಗಿಲ್ಲ; ಇಲ್ಲಿ ನೀವು ಒಂದು ಬಾಟ್ಲಿ ವಿಸ್ಕಿಗೆ ೭೫ ರೂಪಾಯಿ ಕೊಡಬೇಕಾಗಿಲ್ಲ; ಇಲ್ಲಿ ನೀವು ಒಂದು ಬಾಟ್ಲಿ ಬ್ರಿಲಿಯಂಟಾಯ್ನಿಗೆ ಐದು ರೂಪಾಯಿ ಕೊಡಬೇಕಾಗಿಲ್ಲ; ಇಲ್ಲಿ ನೀವು ಒಂದು ಮೋಟಾರ್ ಕಾರಿಗೆ ಮೂವತ್ತು ಸಾವಿರ ರೂಪಾಯಿ ಕೊಡಬೇಕಾಗಿಲ್ಲ; ಇಲ್ಲಿ ನೀವು ಒಂದು 'ಸೋಫ'ಕ್ಕೆ ಸಾವಿರ ರೂಪಾಯಿ ಕೊಡಬೇಕಾಗಿಲ್ಲ; ಇಲ್ಲಿ ನೀವು ಒಂದು ಪೆಕೆಟ್ ಸಿಗರೇಟಿಗೆ ಎರಡು ರೂಪಾಯಿ ಕೊಡಬೇಕಾಗಿಲ್ಲ; ಇಲ್ಲಿ ನೀವು ಒಂದು ಕುದುರೆ ಪಡೆಕೊಳ್ಳಬೇಕಾದರೆ ಸರಕಾರಕ್ಕೆ ಅರ್ಜಿ ಮಾಡಬೇಕೆಂದಿಲ್ಲ; ಇಲ್ಲಿ ನೀವು ಒಂದು ಮುಸುಂಬಿಗೆ ಒಂದು ರೂಪಾಯಿ ಕೊಡಬೇಕೆಂದಿಲ್ಲ; ಇಲ್ಲಿ ನೀವು ನಾಯಿಗೆ ಆಹಾರ ಕೊಟ್ಟರೆ ತಕ್ಷೀರಾಗುವುದಿಲ್ಲ; ಇಲ್ಲಿ ನೀವು ಯಾತ್ರೆ ಮಾಡಬೇಕಾದರೆ—ರೈಲುಬಂಡಿಗಳು ತಿಂಗಳುಗಟ್ಲೆ ಪ್ರಜೆಗಳಿಗೆ ಪ್ರಯಾಣ ರದ್ದುಮಾಡಲ್ಪಡುವುವೆಂಬ ಅಂಜಿಕೆಯಿಲ್ಲ; ಇಲ್ಲಿ ನೀವು ಬಟ್ಟೆಬರೆಗಳನ್ನು ಕೊಂಡುಕೊಳ್ಳಬೇಕಾದರೆ 'ಪರ್ಮಿಟು' ಯಾ 'ಕಾರ್ಡು' ಅವಶ್ಯವಿಲ್ಲ; ಇಲ್ಲಿ ನಿಮಗೆ ಮುಕ್ಕಾಲುವಾಸಿಯಾದರೂ ಅಕ್ಕಿ ದೊರೆಯುತ್ತದೆ; ತಿಂಗಳಿಗೊಂದು ಬಾಟಲಿಯಾದರೂ ಎಣ್ಣೆ ಸಿಗುತ್ತದೆ. ಕಾರಿಗೆ ಹತ್ತು ಗೆಲನಾದರೂ ಪೆಟ್ರೋಲ್ ಸಿಗುತ್ತದೆ...." ಇತ್ಯಾದಿ.

ಇಂದಿನ ಪರಿಸ್ಥಿತಿಗೆ ಬೇರಾರೂ ಅಲ್ಲ—ಯುದ್ಧವೇ ಕಾರಣ ಎಂಬುದಕ್ಕೆ ಈ ಸಾಮ್ಯಗಳೂ ಪುಷ್ಟಿಯಾಗಿವೆ: ಒಂದು ಶಿಶು ಜನನವಾಗಲು ದೇವರೇ ಕಾರಣ; ಒಂದು ಟ್ಯಾಂಕು ಹೊರಬೀಳಲು ಕಾರ್ಖಾನೆಯೇ ಕಾರಣ; ಮಳೆ ಸುರಿಯಲು ಘಟ್ಟವೇ ಕಾರಣ; ಕಾಡ್ಗಿಚ್ಚಿಗೆ ಹುಲ್ಲೇ ಕಾರಣ;

ಮತ್ತೆ—

ತಿಮಿಂಗಿಲವು ಇತರ ಚಿಕ್ಕ ಮೀನುಗಳನ್ನು ನುಂಗಲು ಹಸಿವೇ ಕಾರಣ.

ಅಹುದು, ನಾನೀ ದಿನಗಳನ್ನು ಮೆಚ್ಚುತ್ತೇನೆ.

೨೦. ತಾರೀಕುಗಳು

ಚರಿತ್ರೆಯ ಮೇಸ್ತ್ರು ನನಗೆ ಯಾವಾಗಲೂ ಹೇಳುತಿದ್ದರು,—"ಮೂರ್ಖ, ಚಕ್ರವರ್ತಿಗಳ ಶಿಖಾಮಣಿ! ನೀನು ಚರಿತ್ರೆಯೊಳಗಿನ ಇಸವಿಗಳನ್ನು ಮರೆಯುತ್ತಿ! ಮುಂದೆ ಜೀವನದಲ್ಲಿ ನೀನು ತಾರೀಕುಗಳ ಮರವೆಯಿಂದ ಮಹಾ ಕೀಳು ಪ್ರಾಣಿಯಾಗಿ ಜೀವನ ಕಳೆಯಲಿಕ್ಕಿದೆ!" ಅಂತ. ಆಗ ನಾನು, ಹೊರಗಿನ ಚರ್ಯೆಯಿಂದ ಒಂದು ವಿಧದ ವಿಧೇಯತ್ವ-ದುಃಖಗಳನ್ನು ಪ್ರಕಟಿಸಿದರೂ, ಮನಸ್ಸಿನಲ್ಲಿ, ಈ ಮೂರ್ಖ ಮೇಷ್ಟ್ರು ರೂಢಿಯ ಮಾತುಗಳಿಗಾಗಿ ನಗುತ್ತಿದ್ದೆ! ಈಗ, ಸಾಲೆ ಬಿಟ್ಟು ಬಹು ವರ್ಷಗಳಾದ ಅನಂತರವೂ ಹಾಗೆಯೇ! ಇಬ್ರಾಹಿಂ ಲೋಡಿಯು ಹೊಡೆದಾಡಿಕೊಂಡ ಇಸವಿ ನಮಗೆ ಮುಂದಿನ ಜೀವನದಲ್ಲಿ ಹೇಗೆ ಸಹಾಯ ಮಾಡೀತು? ದಯಾಳುವಾದ ಹೂಮಾಯೂನನ ಅಸ್ವಸ್ಥದಲ್ಲಿ ಧೀರನಾದ ಬಾಬರನು ಪ್ರದಕ್ಷಿಣೆಮಾಡಿದುದು ಯಾವ ವರ್ಷವೆಂದು ತಲೆ ಕರಡು ಮಾಡಿಕೊಳ್ಳುವುದು ಜಾಣತನವೆ? ಸುಖಾಭಿಲಾಷಿಯಾದ ಜಹಾಂಗೀರನು....ಈ ರೀತಿ ಆಲೋಚಿಸಿ ನಗುತಿದ್ದೆ!

ಮೊನ್ನೆ ಯಾರೋ ಮಾತಾಡುತಿದ್ದರು—ಹತ್ತೆಂಟು ಜನ ಕೂಡಿ; ಎಲ್ಲರೂ, ಕಳೆದುಹೋದ ಜರ್ಮನ್ ಯುದ್ಧದ ವಿಷಯವೇ ಮಾತಾಡುತಿದ್ದರು. ಎಲ್ಲರ ಮುಖದ ಮೇಲೂ ಭಾರೀ ಚಿಂತೆ. ಎಲ್ಲರೂ, ಬೇಕಾದಷ್ಟು ಪುರುಸೊತ್ತು ಇದ್ದ ಜನ. ಮಹಾ ಚಿಂತೆಯಿಂದ ಯಾವ ಅನಾಹುತವನ್ನು ಚಿಂತಿಸುತ್ತಿರುವರೋ ಎಂದೆಣಿಸಿದ್ದೆ. ಅವರು ಕುಳಿತ ಅಂಗಡಿಯವನ ಚಿಕ್ಕಪ್ಪನಿಗೆ ಸೌಖ್ಯವಿರಲಿಲ್ಲ. ಆ ಅಸ್ವಸ್ಥವು ವಿಷಮಾವಸ್ಥೆಗೆ ತಲಪಿದ ವಿಚಾರವಿರಬಹುದು—ಎಂದುಕೊಂಡೆ. ಮತ್ತೂ, ನೋಡೋಣ ಎಂಬ ಕುತೂಹಲ ಹುಟ್ಟಿತು. ಅವರಿದ್ದಲ್ಲಿ ಹೋಗಿ ನಿಂತಾಗ ಮತ್ತೆ ತಿಳಿಯಿತು,—ಬ್ರಿಟಿಷರು ಯುದ್ಧ ಆರಂಭಿಸಿದ್ದು ೧೯೩೮ರಲ್ಲಿ ಅಂತ ಒಬ್ಬ; ೧೯೩೯ರಲ್ಲಿ ಎಂದು ತನಗೆ ಸರೀ ನೆನಪಿದೆ ಅಂತ ಇನ್ನೊಬ್ಬ. ೧೯೪೦ ಅಂತ ಯಾರೂ ಹೇಳಲಿಲ್ಲ. ಮತ್ತೆ, ಸಪ್ಟಂಬರ ೨ನೇ ತಾರೀಕೋ ೩ನೇ ತಾರೀಕೋ ಎಂಬ ವಿಷಯದಲ್ಲಿ ಚರ್ಚೆ ಎದ್ದಿತು. ತಾರೀಕು ೨ ಮತ್ತು ೩ರ

ವಿಷಯ ಸರೀ ಎರಡು ಪಕ್ಷಗಳಾದುವು. "ಸಪ್ಟಂಬರ ೧ನೇ ತಾರೀಕಾಗಿ ಅಂಗೀಕರಿಸಿ; ಗೊಂದಲವೇಕೆ? ಒಂದೆರಡು ಹೆಚ್ಚು ಕಡಿಮೆಯಾದರೆ ತೊಂದರೆಯೇನು" ಎಂಬ ಹಿತವಾದ ಹೇಳಿ, 'ವ್ಯಾಜ್ಯ ಮುಗಿಸಿರಿ' ಎಂದು ಸೂಚಿಸೋಣವೇ ಅಂತ ಆಲೋಚಿಸಿದೆ. ಆದರೆ, ಎಲ್ಲರೂ ತಾಳ್ಮೆಗೆಟ್ಟು, ಹಿಂಸಾ ಸೂಚನೆ ಕೊಡುತ್ತಿದ್ದರು. ನನಗೇ, ಜರ್ಮನ್ ಯುದ್ಧದ ದಿನವೂ ತಿಂಗಳೂ ವರ್ಷವೂ ಗಲಿಬಿಲಿ ಬಿದ್ದಿತ್ತು. ಆ ರಸ್ತೆ ಬದಿಯ ಯುದ್ಧದಿಂದ ದೂರವಾಗಿರೋಣ ಅಂತ ಮುಂದರಿದೆ.

ಅದೇ ದಿನ, ನಮ್ಮ ಭಂಡಸಾಲೆ ಸಾಹುಕಾರರು, "ಕೇಂಕ್ರಪ್ಪ"— (–ಕ್ಷಮಿಸಿರಿ, ನನ್ನ ಹೆಸರು ಕೇಂಕ್ರಪ್ಪ ಅಂತ)–"ನಾವು ಔದ್ರಾಮೆ ಬ್ಯಾರಿಗೆ ಕಳೆದ ವರ್ಷ ಯಾವ ತಿಂಗಳಲ್ಲಿ ಯಾವ ದಿನ ಆ ಬಡ್ಡಿಯ ವಿಷಯ ಬರೆದದ್ದು? ಫೈಲಿನಲ್ಲಿ ಪತ್ರದ ನಕಲೇ ತೋರುವುದಿಲ್ಲ" ಎಂದು ಕೇಳಿದರು.

"ಸಪ್ಟಂಬರದಲ್ಲಿ?" ಅಂತ ಕೇಳಿದೆ.

"ನಿನ್ನ ತಲೆ!" ಅಂದರು. ಮತ್ತು ನಾನು, ಆ ಇಡೀ ತಲೆ ತೆಗೆಸಿ, ಬೇರೆ ತಲೆ ಇಡಿಸಬೇಕೆಂದೂ, ಇಲ್ಲದಿದ್ದರೆ, ಈಗಿನ ಹಳೆ ತಲೆಯ ಹೊರ ಮೈಯ ನಾಲ್ಕೈದು ತಗಡುಗಳನ್ನಾದರೂ ಒಡೆದು ತೆಗೆಸಿ ರಿಪೇರಿ ಮಾಡಬೇಕೆಂದೂ ಗಟ್ಟಿಯಾದ ಸ್ವರದಲ್ಲಿ ಸಲಹೆ ಕೊಟ್ಟರು. ಒಂದು ಅಪಾಯಕಾರಿಯಾದ, ನೋವನ್ನುಂಟುಮಾಡುವ ರೀತಿಯ ದುರಸ್ತಿ! ನಾನು 'ಸಾಧ್ಯವಿಲ್ಲ!' ಎನಲಿಲ್ಲ. 'ಆಗಬಹುದು' ಎನ್ನಲೂ ಇಲ್ಲ. ನಮ್ಮ ಆ ಹಳೇ ಸಾಲೆಯಲ್ಲಿ ಚಿಕ್ಕವನಿರುವಾಗ, ಮೇಷ್ಟ್ರು ನನಗೆ, 'ತಲೆಗೆ ತೂತು' ಮಾಡಿ ಸ್ವಲ್ಪ ಹತ್ತಿ ತುಂಬಿಸಿಕೊ' ಎಂದು ನೂರಾರು ಬಾರಿ ಹೇಳಿದ್ದರು; ನಾನು ಅವರಂದಂತೆ ನಡಕೊಂಡಿರಲಿಲ್ಲ. ಈಗ, ಆ ಸಾಲೆಯಿಂದ ಈ ಭಂಡಸಾಲೆಗೆ ಬಂದು, ಆ ಸಾಲೆಯ ಮೇಷ್ಟ್ರು ಸೂಚಿಸಿದುದಕ್ಕಿಂತ ಭಯಂಕರ ರೀತಿಯ ದುರಸ್ತಿಗೆ ನಾನೊಪ್ಪುವ ಹಾಗಿಲ್ಲ. ತುಟಿ ಮುಚ್ಚಿ ಬೇರೆಲ್ಲಿಗೋ ನೋಡಿ, ಮೈ ಓರೆ ಮಾಡಿ ದೂರವಾದೆ.

ಸಾಯಂಕಾಲ ಮನೆಗೆ ಬರುವಾಗ ನೆನಪಾಯಿತು,–ಬ್ಯಾಂಕಿನಿಂದ ಪಡಕೊಂಡ ಚಿಕ್ಕ ಸಾಲವ ವ್ಯಾದೆ ಈ ತಿಂಗಳಲ್ಲಿ ಎಲ್ಲಿಯೋ ಇರಬೇಕು? ಬೇಂಕ್ ಏಜಂಟರ ಮನೆಗೋಡಿ,"ಆ ವಾಯಿದೆ ಯಾವಾಗ ಸ್ವಾಮಿ?"ಎಂದು ಕೇಳಿದೆ.

"ಕಳೆದ ತಿಂಗಳಲ್ಲಿ ನಿನ್ನ ನಗ ಏಲಂ ಆದುದು ಗೊತ್ತಿಲ್ಲವೆ? ನಿನ್ನ ಖಾತೆಯಲ್ಲಿ ಏಳ್ನೂರೈವತ್ತು ಒಂಭತ್ತು ಪೈ ಜಮೆಯಿದೆ" ಎಂದರು.

ನಾನು ಹೊರಗೆ ಸಲ್ಲತಕ್ಕಂಥ ಐವೇಜುಗಳಿಗೆ ವಿನಾ ನನಗೆ ಯಾರಿಂದಲೂ ಬರುವಂಥದ್ದಿಲ್ಲ. ಇದ್ದರೆ, ಆ ತಾರೀಕುಗಳನ್ನೂ ಮರೆಯುತಿದ್ದೆನೇನೊ.

ಮನೆಗೆ ಬಂದು, ಶ್ರೀಮತಿಯೊಡನೆ, ಬಂಗಾರದ ದರವು ಈಗ ಒಂದು ತರದಲ್ಲಿ ಏರಿಕೆಯಲ್ಲಿದೆಯೆಂದೂ, ಬೇಗನೆ ಬೀಳುವ ಸಂಭವವಿರುವುದರಿಂದ ಅವಳ ಚಿನ್ನದ ನಗವನ್ನು ಬ್ಯಾಂಕಿನಿಂದ ಬಿಡಿಸಿ ನಾನು ಬಹಳ ಏರಿಕೆಯ ಧಾರಣೆಯಲ್ಲಿ ವಿಕ್ರಯಿಸಿದೆನೆಂದೂ, ಎಲ್ಲ ರೂಪಾಯಿಯನ್ನು ಅವಳ ಹೆಸರಲ್ಲೆ ಬ್ಯಾಂಕಿನಲ್ಲಿರಿಸಿದ್ದು, ನಾಳೆ ಧಾರಣೆ ಇಳಿಯುತ್ತಲೇ ಹೊಸ ಬಂಗಾರವನ್ನು ಒಂದು ತೊಲೆ ಹೆಚ್ಚಿಗೆ ಪಡಕೊಳ್ಳುವ ಲಾಭಕರ ಯೋಜನೆ ಮಾಡಿರುವೆನೆಂದೂ ಹೇಳಿ, ಗೋಡೆ ಕಡೆ ತಿರುಗಿ, ನನ್ನ ಮುಖದ ಮೇಲೆ ಎದ್ದ ಭಾವನೆಗಳನ್ನೆಲ್ಲ ಮರೆಸಿಬಿಟ್ಟೆ.

ನಮ್ಮ ಪುಟ್ಟು ಹುಟ್ಟಿದ ದಿನ, ಮಾಸ, ವರ್ಷ ಯಾವುದೆಂದು, ಪುಟ್ಟುವಿನ ತಾಯಿ, ಊಟಕ್ಕೆ ಕುಳಿತಿದ್ದಾಗ ಕೇಳಿದಳು. ರಾಮೇಶ್ವರಕ್ಕೆ ಹೋದರೂ ಶನೀಶ್ವರ ಬಿಡ! ಹೊರಗೆ ಎಲ್ಲರೂ ತಾರೀಕುಗಳಿಂದಲೇ ನನ್ನನ್ನು ಕಾಡುತಿದ್ದಾರೆ! ಒಳಗೆ, ನಮ್ಮದೆನ್ನುವ ಜನವೂ ಹಾಗೇ! "ಮಗು ಆರೋಗ್ಯವಾಗಿದ್ದರೆ ಅದೇ ಸುದೈವ-ಸಂತೋಷ-ನಾವು ಧನ್ಯರು; ತಾರೀಕುಗಳನ್ನು ಹಿಡಿದು ನಮಗೇನಾಗಬೇಕು"—ಎಂದು ಫಿಲಾಸಫಿ ಹೇಳಿದೆ.

"ಅಲ್ಲ, ನಾಡಿದು ದಶಮಿಗೆ ಮೂರು ವರ್ಷ ತುಂಬುತ್ತದೆಂದು ತೋರುತ್ತೆ; ಇಂಗ್ಲಿಷ್ ತಾರೀಕು ನನಗೆ ಗೊತ್ತಿಲ್ಲ!" ಎಂದಳು.

"ತುಂಬಲಿ, ತುಂಬಲಿ, ಎಲ್ಲ ಭಗವಂತನ ಇಚ್ಛೆ!" ಎಂದೆ. ಎದೆ ಚೆನ್ನಾಗಿ ಬಡಕೊಳ್ಳುತ್ತಿತ್ತು. ನಿಜಕ್ಕೂ ಮೂರು ವರುಷವೇ ಅಥವಾ ನಾಲ್ಕೆ? ಇಲ್ಲವೇ ಎರಡೇ? ನನಗೆ ದಿನವೂ ಮಾಸವೂ ವರುಷವೂ ಯಾವುದೂ ನೆನಪಿರಲಿಲ್ಲ.

"ಹುಟ್ಟು ಹಬ್ಬ; ಪಾಯಸ, ಮಿಠಾಯಿ........"ಶ್ರೀಮತಿ ಕೆಟಲಾಗು ಬರೆದಳು.

"ಆಗೋದೆಲ್ಲಾ ಆಗಲಿ. ಅದಕ್ಕೇನು ಐದಾರು ಸಾವಿರ ರೂಪಾಯಿ ಖರ್ಚಾಗುಂಟೇ!" ಎಂದು ಅಲಕ್ಷ್ಯದಿಂದ ಹೇಳಿದೆ.

ಮರುದಿನವೇ ಶ್ರೀಮತಿ "ನಿಮ್ಮ ವಯಸ್ಸೂ ನನ್ನ ವಯಸ್ಸೂ ಎಷ್ಟು?" ಅಂತ ಕೇಳಿದಳು. ಈ ದಿನ ಎರಡೆರಡು ತಾರೀಕುಗಳನ್ನು ನೆನಪು ಮಾಡಬೇಕಾಯಿತೇ!

"ಏಕೆ? ನಾನು ಗಂಡ—ನೀನು ಹೆಂಡತಿ—ಎಂದಿದ್ದರೆ ಸಾಲದೇ?" ಅಂತ ಪ್ರಶ್ನಿಸಿದೆ.

"ಅಲ್ಲ, ರೇಶನ್ ಆಫೀಸರರು ಕೇಳಿಕೊಂಡು ಬಂದಿದ್ದರು" ಅಂದಳು.

"ರೇಶನ್ ಆಫೀಸರನಿಗೆ, ಜನರ ತೂಕ ನೋಡಲು ಹೇಳು—ಪ್ರಾಯ ವೇಕೆ?" ಅಂತ ಹೇಳಿದೆ.

"ಹೊಸ ಕಾರ್ಡು ಕೊಡುವರಂತೆ; ಪ್ರಾಯ ಬರೆದು ಮತ್ತೆ ಅಕ್ಕಿ ಎಷ್ಟೆಂದು ಬರೆಯಬೇಕಂತೆ!" ಅಂದಳು.

ಈ ಮೊದಲು ಪ್ರಾಯ ಬರೆದುಕೊಟ್ಟು ಈ ರೇಶನ್ ಡಿಪಾರ್ಟಮೆಂಟು ನಮಗೆ ಕೊಟ್ಟ ಅಕ್ಕಿ ಸಾಕು. ಆ ಅಕ್ಕಿ ಊಟ ಮಾಡಿ, 'ಸಪ್ಲಿಮೆಂಟರಿ' ಯಾಗಿ ಮೇಕೆಯಂತೆ ಸಸ್ಯಾದಿಗಳನ್ನು ತಿಂದುಕೊಂಡು ಜೀವವುಳಿಸಿಕೊಂಡಿದ್ದರೆ, ಇದ್ದ ತ್ರಾಣವೆಲ್ಲ ಪುನಹ ಪುನಹ ಇವರಿಗೆ ತಾರೀಕು—ಹೆಸರು—ತಂದೆಯ ಹೆಸರು ಹೇಳಲಿಕ್ಕೇ ಆಯಿತು. ಬೇಡಪ್ಪ ಈ ನಾಡು!" ಎಂದು ಕೋಪಗೊಂಡು ಹೇಳಿದೆ. ಗುಟ್ಟು ಇಷ್ಟು: ನನಗೆ ತಾರೀಕು ಗೊತ್ತಿರಲಿಲ್ಲ.

ತಾರೀಕುಗಳ ವಿಷಯವಾಗಿ ನಾನು ಎದುರಿಸಬೇಕಾಗಿ ಬಂದ, ಬರುತ್ತಿರುವ ಗಂಡಾಂತರಗಳು ೨—೩ ಸಾವಿರಕ್ಕಿಂತಲೂ ಹೆಚ್ಚು ಇವೆ. ಆದರೆ, ಹೇಳಿ ಪ್ರಯೋಜನವೇನು? ನನಗಿನ್ನು ಈ ಪ್ರಾಯದಲ್ಲಿ (೪೨ ವರ್ಷ ಅಂತ ಅಂದಾಜು; ೨೪ ಇರಲೂ ಬಹುದು; ಅಥವಾ ಒಂದೆರಡು ಹೆಚ್ಚು ಕಡಿಮೆ ಯಿದ್ದರೂ ಇರಬಹುದು; ಇಸವಿ—ಖಂಡಿತ ಗೊತ್ತಿಲ್ಲ)—ತಾರೀಕುಗಳನ್ನು ಕಲಿಸುವ ಬ್ರಹಸ್ಪತಿ ಇನ್ನು ಹುಟ್ಟಿಬರಬೇಕು.

ಇನ್ನು ಒಂದು ಸಮಾಧಾನದ ವಿಷಯವಿದೆ: ಏನೆಂದರೆ, ಸಾಯುವ ತಾರೀಕು ನನಗೆ ಯಾರಾದರೂ ತಿಳಿಸಿದರೆ, ಮರೆಯೋದು ಖಂಡಿತ. ಮರಣದ ತಾರೀಕನ್ನು ನಾವು ಮರೆತರೂ ಯಮನು ಮರೆಯಲಾರ ಅಂತ ನೀವು ವಾದಿಸಬಹುದು. ಆದರೆ, ಯಮನೇ ಆ ಲೆಕ್ಕ ಮಾಡಿ ಕುಳಿತು, ತಲೆ ಕರಡು ಮಾಡಿಕೊಳ್ಳಲಿ. ನಾವು ನಿಶ್ಚಿಂತರಾಗಿರೋಣ.

೨೧. ಕೆಲವು ಸಂಬಂಧಗಳು ಮತ್ತು ಸಂಬಂಧಿಕರು

ಶೇಕ್ಸ್‌ಪಿಯರ್ ಮೂವತ್ತೇಳು ನಾಟಕಗಳನ್ನು ಬರೆದು, ಈ ಭೂಮಿ ಒಂದು ರಂಗಭೂಮಿ ಎಂದುಬಿಟ್ಟ; ಮತ್ತೆ, ನಾವೆಲ್ಲ ನಾನಾ ವೇಷಧರಿಸಿ ಬಂದು ಕುಣಿದು, ನಮ್ಮ ಪಾತ್ರ ಮುಗಿಯುತ್ತಲೇ ಹೊರಟು ಹೋಗುವವರು ಎಂದು ತನ್ನ ಮೊದಲಿನ ಹೇಳಿಕೆಗೆ ಸಮರ್ಥನೆ ಕೊಟ್ಟುಬಿಟ್ಟ. ನಾವೆಲ್ಲರೂ ಅಹುದೆನ್ನುತ್ತೇವೆ.

ಸರಿ, ನಮ್ಮ ನಮ್ಮ ಪಾತ್ರ ಮಾತ್ರ ಯಾವುದೆಂದು ತಿಳಿಯೋದಿಲ್ಲ.

ನಾವೆಲ್ಲರೂ ಪಾತ್ರಧಾರಿಗಳೆನ್ನಲು ಒಂದು ದೊಡ್ಡ ಆಧಾರವಿದೆ. ನನಗೊಬ್ಬ ಚಿಕ್ಕಪ್ಪ ಇದ್ದಾನೆ. ಪ್ರಾಯ ನನಗಿಂತಲೂ ಹನ್ನೊಂದು ಕಡಿಮೆ. ಅದು ಹೇಗೆ ಅಂತ ಕೇಳಬೇಡಿ. ನನ್ನ ಸೋದರಮಾವನ ಲೆಕ್ಕವಲ್ಲಿ, ನನ್ನ ಚಿಕ್ಕಪ್ಪನ ತಂದೆ ನಮಗೆ ಅಜ್ಜ ಬೀಳುತ್ತಾನೆ. ಸಂಬಂಧ ದೂರವಿಲ್ಲ. ಆ ಅಜ್ಜನ ಮಗ ಈ ಚಿಕ್ಕಪ್ಪ. ಭಾರಿ ಚುರುಕಿನ ವ್ಯಾಪಾರಸ್ಥರು. ಮುಖದ ಮೇಲೆ ಚೂರು ನಗೆಯಿಲ್ಲದೆ, ಬಹಳ ಕನಿಕರ ತಾಳಿದವನಂತೆ ಮಾಡಿ, ಅಂಗಡಿ ಮಂಡದಲ್ಲಿ ಕುಳಿತು ಮೇಕೆಯಿಂದ ಹಿಡಿದು ಶೇಕೆಯ ವರೆಗೂ, ಹುಡುಗಿಯಿಂದ ಬಡಗಿಯ ವರೆಗೂ, ಮೇಸ್ತ್ರಿಯಿಂದ ಶಾಸ್ತ್ರಿಯ ವರೆಗೂ, ಅವಧಾನಿಯಿಂದ ಹಿಡಿದು ಶವದಾನಿಯ ವರೆಗೂ, ಮೇಜವಾನಿಯಿಂದ ಪೀಕದಾನಿ ವರೆಗೂ, ಸಬಕಾರದಿಂದ ಸರಕಾರದ ವರೆಗೂ, ಸೋಡಾಕಾರದಿಂದ ಸಾಹುಕಾರರ ವರೆಗೂ, ಕಾಫಿದರದಿಂದ ಆಫೀಸರ ವರೆಗೂ,…………………ಎಲ್ಲರಿಗೂ, ಎಲ್ಲದಕ್ಕೂ, ಎಲ್ಲ ಕಾಲಗಳಲ್ಲಿಯೂ ಎಲ್ಲ ತರದ ಮಾತುಗಳಿಂದ, ಬಹಳ ನಾಜೂಕಾದ ತಮಾಷೆ ಮಾಡುತ್ತಾನೆ. ತಮಾಷೆ ಎಂದು ತಿಳಿಯೋದೇ ಇಲ್ಲ. ನಾನವನನ್ನು ಚಿಕ್ಕಪ್ಪ ಎಂದು ಮನಸ್ಸಿನಲ್ಲಿ ಮಾತ್ರ ಎಣಿಸಿದ್ದೇನೆ; ಬಾಯಿಯಿಂದ ಹೇಳಿಲ್ಲ; ಅವನು ನನ್ನನ್ನು ಮಾವಾ ಎಂದು ಮನಸ್ಸಿನಲ್ಲಿಯೂ ಎಣಿಸಿ ಬಾಯಿಯಿಂದಲೂ ಕರೆಯುತ್ತಾನೆ.

ನಮಗೆ ವ್ಯಾಪಾರ ಅವನ ಅಂಗಡಿಯಿಂದ. ಅವನು ನನಗೆ ಚಿಕ್ಕಪ್ಪ ಆಗಬೇಕು; ನಾನವನಿಗೆ ಮಾವ. ಹೇಗೆ ನಮ್ಮ ಸಂಬಂಧ?

ನಮ್ಮಕ್ಕನನ್ನು ಕೊಟ್ಟ ಮನೆ ದೊಡ್ಡದು; ನೂರಾರು ಗಂಡುಸರು, ಸಾವಿರಾರು ಹೆಂಗಸರು, ಲಕ್ಷೋಪಲಕ್ಷ ಮಕ್ಕಳು—ಅಂತ ನಿಮಗೆ ಭ್ರಮೆ ಯುಂಟಾಗುವಷ್ಟು ಜನ ಅವಳ ಗಂಡನ ಮನೆಯಲ್ಲಿ! ನನ್ನ ಕಿರಿಯ ತಮ್ಮ ನಿಗೆ ನಮ್ಮ ಭಾವನ ಹಿರೇ ಅಣ್ಣನ ಮೊಮ್ಮಗಳನ್ನು ಮೊನ್ನೆ ಲಗ್ನಮಾಡಿ ಕೊಟ್ಟರು. ಗಂಡಿಗೂ ಹೆಣ್ಣಿಗೂ ಹನ್ನೊಂದು ತಿಂಗಳು ಹೆಚ್ಚುಕಡಿಮೆ, 'ದೇವದಂಪತಿ'ಗಳು ಅಂದುಬಿಟ್ಟರು—ಬಂದವರೆಲ್ಲಾ! ಈಗ ನಮ್ಮ ಭಾವನ ಹಿರೇ ಅಣ್ಣ ನಮಗೇನಾಗಬೇಕು—ಮುಂತಾದ ಸಂಬಂಧ ಹೇಗೆ?

ಕುಪ್ಪಳ ರಾಯರಿಗೆ ನಾಲ್ಕನೇ ಸಂಬಂಧ. ಮೂರು ಹೆಣ್ಣುಗಳು. ಮನೆಗೆ ತರುವಾಗ, ಪಟ್ಟೆಸೀರೆ, ಕುಂಕುಮ, ಎರಡೂ ಕೈಗೆ ಪಂಭೇರು—ಪಂಭೇರು ಬಂಗಾರ ಮತ್ತು ಕೊರಳಿಗೆ ಏಳುವರೆ ರಾತ್ತಿನ ಪಟ್ಟಿಗಳಿದ್ದು, ಭಾಗ್ಯಲಕ್ಷ್ಮಿಗಳಂತೆ ಗೃಹಪ್ರವೇಶಮಾಡಿ, ಆರಾರೇ ತಿಂಗಳಲ್ಲಿ ದೈವಾಧೀನ ರಾಗಿ, ಎರಡೆರಡು ತೊಲೆ ಕುಂಕುಮ ಧರಿಸಿಯೇ—ಭಾಗ್ಯಲಕ್ಷ್ಮಿಗಳಾಗಿ ಯೇ ಹೊರಟು ಬಿಟ್ಟರು. ಕುಪ್ಪಳ ರಾಯರಿಗೆ ಕುಪ್ಪಳಿಸಿಬಿಟ್ಟ ಹಾಗಾ ಯಿತೇನೋ ಎಂದು ಎಲ್ಲರೂ ಕನಿಕರಗೊಂಡರು. ಹಲವರ ಕನಿಕರದ ಕಣ್ಣೀರು ಒಟ್ಟಾಗಿ ಒಂದು ನದಿಯಾಯಿತು; ಆ ನದಿಯಲ್ಲಿ ಚತುರ್ಥ ಭಾಗ್ಯಲಕ್ಷ್ಮಿ ತೇಲಿಬಂದಳು. ಈ ನಾಲ್ಕನೇ ಲಕ್ಷ್ಮಿ ಬರೇ ಭಾಗ್ಯ ಲಕ್ಷ್ಮಿಯಲ್ಲ—ಭಾರದ ಲಕ್ಷ್ಮಿಯೂ ಅಹುದು. ಇನ್ನೂರು ಇಂಗ್ಲಿಷ್ ರಾತ್ತುಗಳ ಜೀವ. ಸ್ಪೆಶಲ್ ಬಸ್ಸಿನಲ್ಲಿ ಸೀಟಿಗೊಬ್ಬಳಾಗಿ ಬಂದು, ಮನೆ ಯನ್ನು ನಡುಗಿಸಿ, ಒಳಗೆ ಕಾಲಿಟ್ಟು ಮತ್ತೆ ಗಂಡನನ್ನೂ ನಡುಗಿಸಿ ದಳು. ನಾವೆಲ್ಲಾ ಆರನೇ ತಿಂಗಳಲ್ಲಿ ಮೌನ ಮೆರವಣಿಗೆ ಕಾಯುತಿದ್ದೆವು. ಥೂ ಬಿಡಿ! ಒಂದು ಚಿಕ್ಕ ತಲೆ ಸಿಡಿತವೂ ಇಲ್ಲದೆ, ಯಾವ ಡಾಕ್ಟರರ ಕೈಗೂ ಕೈಕೊಡದೆ, ಒಂದೇ ಒಂದು ಚಮಚೆ ಮದ್ದು ಕುಡಿಯದೆ, ಈಗ ಮೂರು ವರ್ಷಗಳಲ್ಲಿ ಎರಡು ದೊಡ್ಡ ಮಕ್ಕಳನ್ನು ಹೆತ್ತು, ಆ ಊರಿಗೇ ರಾಣಿಯಂತಿ ದ್ದಾಳೆ. ಈ ಹೆಣ್ಣಿನ ಕುಟುಂಬವೆಲ್ಲ ಇನ್ನೂರು ಇನ್ನೂರೈವತ್ತು, ಇನ್ನೂ ರರುವತ್ತು—ಈ ರೀತಿ ಇಂಗ್ಲಿಷ್ ರಾತ್ತುಗಳಲ್ಲೆ ತೂಕ ಮಾಡಲ್ಪಡುವ

ಜೀವಗಳಾದ್ದರಿಂದ—ಗಟ್ಟಿ ಮುಟ್ಟಿ ಜೀವಗಳಿಗಾಗಿ ಆಸೆಪಟ್ಟು, ಕುಪ್ಪಳ ರಾಯರು, ತಮ್ಮ ಇಡೀ ಕುಟುಂಬದಲ್ಲಿ ಆ ಕುಟುಂಬದಿಂದಲೇ ಹೆಣ್ಣು ಗಳನ್ನು ತಂದಿದ್ದಾರೆ. ಆ ಊರು ಚಿಕ್ಕದು. ಈ ಗಿಡ್ಡಗಿನ ಉರುಟುರುಟು ಜೀವಗಳು ತುಂಬಿದ್ದನ್ನು ನೋಡಿದವನು ಕುಪ್ಪಳ ರಾಯರು ರಚಿಸಿದ "ಖೆಡ್ಡಾ" ಎಂದು ಭ್ರಮಿಸುತ್ತಿದ್ದಾನೆ. ಹತ್ತಿಪ್ಪತ್ತು ಆನೆಗಳನ್ನು ತಂದು ಹಾಕಿದಂತಾಗಿದೆ. ಆ ಊರಿನ ರೇಶನ್ ಆಫೀಸರ್ ಹೆದರಿ ಹೋಗಿದ್ದಾನೆ—ದಿನಕ್ಕೊಂದು ಕಳಸಿಗೆಯ ನೈವೇದ್ಯವೋ ಅಂತ! ಆದರೆ, ಇಲ್ಲ! ಎಂಟು ಔನ್ಸಿಗಿಂತ ಜಾಸ್ತಿಯಿಲ್ಲ. ದೇಹ ಮಾತ್ರ ದೊಡ್ಡದು; ದಾಹ ಕಡಿಮೆ; ಹಸಿವೂ ಕಡಿಮೆ.

ಆ ಕುಪ್ಪಳ ರಾಯರ ಚಿಕ್ಕ ತಮ್ಮನಿಗೆ ಕುಪ್ಪಳ ರಾಯರ ಹೆಂಡ್ತಿಯ ಸೋದರ ಮಾವನ ಚಿಕ್ಕ ಅತ್ತೆ; ಕುಪ್ಪಳ ರಾಯರ ಚಿಕ್ಕಪ್ಪನಿಗೆ, ಹೆಂಡ್ತಿಯ ಚಿಕ್ಕಪ್ಪನ ಮಗಳ ಮಗಳು; ಕುಪ್ಪಳ ರಾಯರ ಚಿಕ್ಕಪ್ಪನ ಮಗನಿಗೆ ಹೆಂಡ್ತಿಯ ಸೋದರ ಮಾವನ ಅತ್ತೆಯ ಕಿರಿಯ ತಂಗಿ—ಈ ರೀತಿ ಲಗ್ನ ಗಳು, ಕಳೆದೆರಡು ವರ್ಷಗಳಲ್ಲಿ ಧಾರಾಳ ನಡೆದು ಹೋಗಿವೆ. ಗಂಡನಿಗೆ ಹೆಂಡತಿ, ಹೆಂಡತಿಗೆ ಗಂಡ—ಈ ಸಂಬಂಧವೊಂದು ಗೊತ್ತು; ಅದರ ಮೇಲೆ ಯಾರಿಗೆ ಯಾರು ಏನಾಗಬೇಕು ಎಂಬುದು ಎಲ್ಲ ಲೆಕ್ಕ ತಪ್ಪಿಹೋಗಿದೆ. ಅದಕ್ಕಾಗಿಯೇ ಯಾರೂ ಯಾರನ್ನೂ ಏನೊಂದೂ ಕರೆಯದೆ, ಕರೆಯಲೇ ಬೇಕೆಂಬ ಉತ್ಸಾಹ ಹುಟ್ಟಿದಾಗ, ಎಲ್ಲರೂ 'ಭಾವಾ!' 'ಭಾವಾ!' ಎಂದು ಕರೆಯುತ್ತಾರೆ. ಗಲಿಬಿಲಿಯಲ್ಲಿ, ಅಜ್ಜನನ್ನೂ ಮೊಮ್ಮಗನು 'ಭಾವಾ!' ಎಂದುದುಂಟು. ಹಾಗೆ ಹೇಳಿದುದಕ್ಕೆ ಯಾರಿಗೂ ಯಾರ ಮೇಲೂ ಕೋಪ ವಿಲ್ಲ. ಕುಪ್ಪಳ ರಾಯನನ್ನು ಮೊನ್ನೆ ಈ ವಿಚಾರದಲ್ಲಿ ಪ್ರಶ್ನಿಸಿದೆ: "ಒಟ್ಟು ಸಂಬಂಧ ಗಲಬಿಲಿ ಬಿದ್ದಿದೆ ಅಂತೆ....!"

ಕುಪ್ಪಳ ಹೇಳಿದ: "ಚೂರೂ ಇಲ್ಲ."

ನಾನು: "ಯಾರಿಗೆ ಯಾರು ಏನಾಗಬೇಕು?"

ಕುಪ್ಪಳ: "ಗಂಡನಿಗೆ ಹೆಂಡತಿಯು ಹೆಂಡತಿಯಾಗಿಯೂ, ಹೆಂಡತಿಗೆ ಗಂಡನು ಗಂಡನಾಗಿಯೂ ಉಳಿದರೆ ಯಾರು–ಯಾರಿಗೆ–ಏನು–ಏಕೆ–ಹೇಗೆ–ಗಳಿಲ್ಲ."

ಸರಿ. ಇಲ್ಲಿಯೂ ಶೇಕ್ಸ್‌ಪಿಯರನ ಮತ್ತೊಂದು ಮಾತು ನೆನಪಿಗೆ ಬಂತು: ಗುಲಾಬಿಯನ್ನು ಹೇಗೆ ಕರೆದರೂ ಅದು ಗುಲಾಬಿಯೇ; ಹೆಸರಿನಲ್ಲೇನಿದೆ? ಸಂಬಂಧದಲ್ಲೂ ಹೀಗೇ!

ಒಂದು ಮಾತು. ನನ್ನ ಸ್ವಂತ ಮಾವ ಇದ್ದಾನೆ; (ಅಥವಾ ಅವನ ಸ್ವಂತ ಸೋದರಳಿಯ ನಾನಿದ್ದೇನೆ.) ನನ್ನ ತಾಯಿಯ ಖಾಸಾ ಅಣ್ಣ. ದೊಡ್ಡ ಕಣ್ಣು, ತಲೆಮೇಲೆ ದೊಡ್ಡ ಶಿಖೆ, ಹಳೇ ಮುಂಡಾಸು. ಆದರೆ ನನ್ನನ್ನು ನೋಡಿದರೆ ಕಂಸನ ಹಾಗೆ ಮಾಡುತ್ತಾನೆ. ನನ್ನ ಸ್ವಂತ ಚಿಕ್ಕಪ್ಪ ಇದ್ದಾನೆ, ತಂದೆಯ ಖಾಸಾ ಸಹೋದರ. ಅವನಿಗೆ ನಾನಾರೆಂದು ಗೊತ್ತೇ ಇಲ್ಲ. ಮೊನ್ನೆ ಮೊನ್ನೆ ಮೋಟಾರ್ ಆಫೀಸಿನ ಬಳಿ, ನಾನೇ ಏಜೆಂಟ್ ಎಂದು ಗ್ರಹಿಸಿ, ಅವಸರದಲ್ಲಿ ಎಲ್ಲಿಗೋ ಹೊರಟು ಟಿಕೇಟಿಗಾಗಿ ಚಡಪಡಿಸುತಿದ್ದ ನನಗೆ ನಾಲ್ಕು ಬೈಗಳನ್ನು ಬಯ್ದುಬಿಟ್ಟು, ನನ್ನ ಕಾಲು ಮುರಿದರೇನಾಗುತ್ತದೆಂದು, ಪ್ರಶ್ನಿಸಿದ. ಇಂತವರಿಗಿಂತ, 'ಭಾವಾ' ಎನ್ನುವ ಆ ಮೇಲಿನ ಹೊಸ ಸಂಬಂಧಿಕರೇ ಆಗಬಹುದೆಂದು ತೋರಿತು.

---

೨೨. ಕುಸ್ತಿ

ಸಣ್ಣ ಶಬ್ದ; ಆದರೆ ತುಂಬ ಅರ್ಥ. ನಾದದಿಂದಲೇ—ಅದೇನೆಂದು ಕಲ್ಪನೆಯಾಗುತ್ತದೆ.

ಕುಸ್ತಿ, ಮುಸ್ತಿ, ಅಸ್ಥಿ, ಜಾಸ್ತಿ, ದೋಸ್ತಿ, ಗಸ್ತಿ, ನಾಸ್ತಿ, ಸ್ವಸ್ತಿ, ಹಸ್ತಿ—ಈ ಶಬ್ದಗಳು ಒಂದಿನ್ನೊಂದನ್ನು ಬಿಟ್ಟಿಲ್ಲ.

ಇಬ್ಬರು ವಿಪರೀತ ಮನುಷ್ಯರು ಆಲಿಂಗಿಸಿಕೊಂಡು ಉರುಳುವರು. ಹೂಂಕಾರ ಮತ್ತು ಶ್ವಾಸೋಚ್ಛ್ವಾಸಗಳು ಮಾತ್ರ ಕೇಳಿಬರುವುವು. ಒಮ್ಮಿಂದೊಮ್ಮೆ 'ಫೀಟ್' ಎಂಬ ಶಬ್ದ ಕೇಳಿಬರುವುದು. ಇಬ್ಬರು ರಾಕ್ಷಸರು ಎದ್ದು ನಿಲ್ಲುವರು. ಇಬ್ಬರೂ ನಗುವರು—ಒಂದು ಹಸಿನಗೆ, ಮತ್ತೊಂದು ಹುಸಿನಗೆ. ಜನರು ಜೈ ಜೈಕಾರದಿಂದ, 'ಗೇಸ್‌ಲೈಟ್' ಹಿಡಿದು ಒಬ್ಬನನ್ನೆತ್ತಿ ಒಯ್ಯುವರು; ಉಳಿದೊಬ್ಬನು, ಮೊಸ್ಕೋದಿಂದ ನೆಪೋಲಿ

ಯುನ್ ಹೊರಟಂತೆ ಹೊರಟು, ನಡುದಾರಿಯಲ್ಲಿ ಒಬ್ಬೊಬ್ಬರೇ ಕೈಬಿಡಲು, ಏಕಾಕಿಯಾಗಿ ಮನೆಗೆ ತಲಪುವನು. ಅದು ಕುಸ್ತಿ.

* * * * *

ಮೊದಲು 'ಕುಸ್ತಿ'ಯೆಂದು ಬಾಯಿಂದ ಹೇಳುತ್ತ ಹೋಗಿ, ಮತ್ತೆ ಒಂದು ಸ್ಥಳದಲ್ಲಿ ಕೈಯಿಂದ ಮಾಡುತಿದ್ದರು. ಈಗ, ಮೊದಲು ದೊಡ್ಡ ಹಲಗೆಯ ಮೇಲೆ (ಜಾಹೀರಾತಿಗಾಗಿ) ಕೈಯಿಂದ ಎರಡು ದೊಡ್ಡ ಗುಳ್ಳೆಗಳನ್ನು ('ರೋಜ್ ಕಲರ್') ಬರೆದು 'ಪ್ರಚಂಡ'ವೆಂದು ಕೂಡಿಸಿ, ಟಿಕೇಟುದರ ಹಾಕುವರು. ಆ "ರೋಜ್ ಕಲರ್" ಗುಳ್ಳೆಗಳೇ ಪಹಿಲ್ವಾನರು. ಪಾಲಡ್ಕದ ಪುರ್ಷ ಸಹಿಲ್ವಾನರಿಗೂ ಪಂಜಾಬಿನ (ಇಲ್ಲಿ ಪಟ್ಟಣ, ಗ್ರಾಮ ಯಾವುದನ್ನೂ ತಿಳಿಸುವುದಿಲ್ಲ) ಕಿಸನ್ ಸಿಂಗನಿಗೂ 'ಖಾಡಾಖಾಡಿ'ಯೆನ್ನುವರು. ಪುರ್ಷನೂ ಕಿಸನನೂ, ಬೊಂಬೆ ಬರೆದ ಬೋರ್ಡಿನಲ್ಲಿ ಒಂದೇ ರೀತಿ ಕಾಣುತ್ತಾರೆ--ಜೀವವಿಲ್ಲದ ಗುಲಾಬಿ ಬಣ್ಣದ ಎರಡು ಗುಳ್ಳೆಗಳು.

* * * * *

ಕೆಲವೊಮ್ಮೆ ಇವರ ತೋಳುಗಳು ಕಾಲುಗಳಿಗಿಂತ ತೋರವಿರುತ್ತವೆ; ಕೆಲವೊಮ್ಮೆ ಹೊಟ್ಟೆಗೂ ಕಿವಿಗೂ ನಡುವೆ ತಾರತಮ್ಯವೇ ಕಾಣದೆ, ಎರಡು ಬದಿಗಳಿಂದ ಎರಡು ಗೀಟುಗಳಿರುತ್ತವೆ. ಕೆಲವು ಪಹಿಲ್ವಾನ್ ಚಿತ್ರಗಳಲ್ಲಿ ಎದೆಯ ಮೇಲೆ ದೊಡ್ಡ ಎರಡು ಕಾವಲಿಗಳಿರುತ್ತವೆ. ಈ ಮನುಷ್ಯರಿಗೆ ಗುಂಗುರು ಕೂದಲೂ, ಬಾಚಿದ ತಲೆಯೂ, ಹಡಗದ ಹಾಯಿಯ ವಸ್ತ್ರದ 'ಕಾಚ'ವೂ ಕಿವಿಯಿಂದಾರಂಭವಾಗಿ ಮುಂದರಿದು ಮೂಗಿನ ಮೇಲೆ ಸಂಧಿಕೂಡುವ ಕಣ್ಣುಗಳೂ ಇರುತ್ತವೆ. ಕಾಲುಗಳ ಹತ್ತು ಬೆರಳುಗಳೂ ಒಂದೇ ರೀತಿ ಇರುವುದು ಎಲ್ಲರಿಗೂ ತಿಳಿದ ಸಾಮಾನ್ಯ ವಿಷಯವಾಗಿದೆ. ಕೆಲ ಬಾರಿ ಇವರ ಕಣ್ಣುಗಳ ಕಪ್ಪು ದೃಷ್ಟಿಯು ನೇರಳೆ ಬಣ್ಣದಿಂದಲೂ, ಶಾಯಿ ದೊರೆಯದಿದ್ದರೆ ಕಡು ಕೆಂಪು ಬಣ್ಣದಿಂದಲೂ ಅದೂ ಕಡಿಮೆ ಬಿದ್ದರೆ ಮೈಗೆ ಬಳಸಿದ 'ರೋಜ್ ಕಲರ್' ಯಾನೆ 'ಗುಲಾಬಿ ಬಣ್ಣದಿಂದಲೂ ಬರೆಯಲ್ಪಡುವುದು. ಹಲಗೆಯ ಮೇಲೆ ಅವರು, ಯಾವ ಪೂರ್ವ ದ್ವೇಷ--ಪ್ರೇಮ--ಪರಿಚಯ-ಅಸೂಯೆ-ಭಯ-ಕೋಪ—ಯಾವ ಭಾವವೂ ಇಲ್ಲದೆ ಹೋರಾಡುವುದು ಕಂಡುಬಂದಿದೆ.

* * * * *

ನಾನೊಮ್ಮೆ ಒಬ್ಬ ಪಹಿಲ್ವಾನನ ಎದೆತಟ್ಟಿ ಪ್ರಶ್ನಿಸಿದೆ: "ಪಹಿಲ್ವಾನ್‌ಜಿ! ಸೌಖ್ಯವೆ?"

"ಸೌಖ್ಯ!"

"ಬೋರ್ಡಿನ ಮೇಲೆ ರಖಂ ಅಸ್ವಸ್ಥವೇನು?"

"ಬಣ್ಣ ಸ್ವಾಮಿ. ಆರ್ಟಿಸ್ಟ್ ಕೋಚನೊಡನೆ ಹೇಳಿದರೆ, ಹದಿನೈದು ನಿಮಿಷದಲ್ಲಿ ನೂರಾರು ಬೋರ್ಡುಗಳನ್ನು ಬರೆಯುತ್ತಾನೆ."

"ಮೆಶಿನಿನಿಂದಲೇ?"

"ಬ್ರಶ್ಶಿನಿಂದ—ಕೈಯಿಂದ."

"ಒಮ್ಮೆ ನಾನೆಣಿಸಿದ್ದೆ—ಇಬ್ಬರು ಪಹಿಲ್ವಾನರನ್ನು ಬಣ್ಣದ ಅಂಗಡಿಗೊಯ್ದು, ಅವರ ಬೆನ್ನಿಗೆ ಬಣ್ಣ ಸವರಿ, ಬೋರ್ಡಿಗೆ ಅವರ ಬೆನ್ನು ಒತ್ತುವರೋ ಎಂದು. ಈಗ ತಿಳಿಯಿತು—ಇದು ಕೈಯ ಕೆಲಸ—ಕಾಲು ತಾಸಿಗೆ ನೂರಾರರಂತೆ ಉತ್ಪಾದನೆ........ನಮಸ್ತೇ."

"ನಮಸ್ತೇ."

* * * * *

ಮರೆತೆ.—ನಾನು ಪಹಿಲ್ವಾನಜಿಯೊಡನೆ ಆಹಾರ ವಿಷಯವನ್ನೂ ಕೇಳಿದ್ದೆ. ಪ್ರತಿದಿನ ಊಟಕ್ಕೆ ಮೂವತ್ತೆರಡು ಚಪಾತಿಗಳನ್ನು ತಯಾರಿಸಿ, ತುಪ್ಪದ ಬಾವಿಯಲ್ಲಿ ಜಾರಗೊಡುವನು. ಮತ್ತೆ ಘೃತಸ್ನಾನವಾದ ಆ ಚಪ್ಪಟೆಯ ಗೋಲಗಳನ್ನು ನಾಲ್ಕರಂತೆ ಹಿಡಿದು, ಮೂರು ಬಾಯಿ ಕಚ್ಚುತ್ತ ಮುಗಿಸುವರು. ಹಾಗೆ ಮೂರೇ ಬಾಯಿಗಳಲ್ಲಿ ಮುಗಿಸದಿದ್ದರೆ ಅವರಿಗೆ ಅಪಮಾನವೆಂದೂ ಅವರನ್ನು "ಸೆಕೆಂಡ್ ಕ್ಲಾಸ್" ಪಹಿಲ್ವಾನರೆನ್ನುವರೆಂದೂ ಹೇಳಲಾಗಿದೆ. ಮತ್ತೆ ಕೆಲವು ಸೇರು ಹಾಲು, ಬಾದಾಮಿ,.... ಇವುಗಳನ್ನು ಅವರ ಪಥ್ಯದಲ್ಲಿ ಕೂಡಿಸಲಾಗಿದೆ. 'ಪಹಿಲ್ವಾನ್ ಹಿತೋಪದೇಶ'ವೊಂದೇ—"ಹೆಚ್ಚು ತಿನ್ನಿರಿ!"

* * * * *

ಆ ಕುಸ್ತಿಗಳೆಲ್ಲ ನಮ್ಮ ಮನೆ ಮುಂದೇ ನಡೆಯುತ್ತಿವೆ. ಮತ್ತೆ, ನಾವು, ಆ ಕುಸ್ತಿಯ 'ಪ್ರಚಂಡತೆ' 'ಖಾಡಾಖಾಡಿತ್ವ'ವನ್ನು ಪ್ರತ್ಯಕ್ಷ ಕಾಣುತ್ತೇವೆ. ನಮ್ಮ ಮನೆ ಹಿತ್ತಿಲ ಗೋಡೆಯು, ಪ್ರತಿ ಕುಸ್ತಿಗೆ ಕೆಲವು

ಅಡಿ ಬಿದ್ದು ಹೋಗುತ್ತದೆ; ಮರದ ಗೆಲ್ಲುಗಳು ಒಂದು ಕುಸ್ತಿಗೆ ಇಪ್ಪತ್ತೈದರಂತೆ ಮುರಿದುಬೀಳುತ್ತವೆ. ಇದಕ್ಕೆ 'ಖಾಡಾ ಖಾಡಿ'ಯೆನ್ನುವರು. ಈಗ ಮಾವಿನಹಣ್ಣಿನ ಕಾಲದಲ್ಲಿ ಮಾವಿನ ಮಿಡಿ ಮತ್ತು ಹಣ್ಣುಗಳು ಎಂಟೆಂಟು ಡಜನು, ಕುಸ್ತಿಯ 'ಪ್ರಚಂಡತೆ'ಯಲ್ಲಿ ಕೆಳಗುರುಳುತ್ತವೆ.

* * * * *

ಕುಸ್ತಿಯಾಡುವ ಪಹಿಲ್ವಾನರೇನೂ ನಮ್ಮ ವತಾರಕ್ಕೆ ಬರುವುದಿಲ್ಲ. ಅವರನ್ನು ನೋಡಬಂದ ಉತ್ಸಾಹೀ ಜನಸಮೂಹವೇ ಈ 'ಪ್ರಖರತೆ' ತೋರುತ್ತಿದೆಯೆಂದು ವಿವರಿಸಲಾಗಿದೆ.

* * * * *

ಮೊನ್ನೆ ನೋಡಿದೆ; ಸುಮಾರು ೪೫ ವರ್ಷ ಪ್ರಾಯದ ಗೃಹಸ್ಥನೊಬ್ಬನು ಮರವೇರಿದ್ದನು. ಅವನಿಗೆ ದೊಡ್ಡ ಕುಟುಂಬವಿರಬಹುದೆಂದು ಸಂದೇಹ ಕಂಡು, ಮೆಲ್ಲನೆ ಅವನನ್ನು ಕೆಳಗೆ ಕರೆದು, ಮಮತೆಯಿಂದ, "ಎಷ್ಟು ಜನ ಮಕ್ಕಳು?" ಎಂದು ಪ್ರಶ್ನಿಸಿದೆ. ಪುಣ್ಯಾತ್ಮ ಸತ್ಯವನ್ನೆ ಹೇಳಿದನು,—"ಹದಿಮೂರು!" "ಹೀಗೆ ಮರವೇರಿದರೆ, ಅಷ್ಟು ದೊಡ್ಡ ಸಂಸಾರವು ಯೋಚನೆಗೀಡಾಗದೆ?"—ಎಂದು ಪ್ರಶ್ನಿಸಿದೆ. ಅವನು ನನ್ನನ್ನೆ ಒಂದು ನಿಮಿಷ ನೋಡಿ, ನನ್ನ ಮನೋಸ್ವಾಸ್ಥ್ಯದ ವಿಷಯ ಸಂದೇಹ ಕಂಡೋ ಏನೋ, ಮಾತಾಡದೆ ಪುನಃ ಹೋಗಿ ಅದೇ ಮರವೇರಿ ಅತಿ ಪ್ರಯಾಸಕರ ಆಸನದಲ್ಲಿ ಕುಳಿತಿರಲು—ನಿರಿನಿಟಿಲ್ ಎಂದು ಗೆಲ್ಲು ಸಹಿತ ಕೆಳಗೆ ಬಿದ್ದು, ಜನರ ಜೈಜೈಕಾರದಿಂದ ಸ್ವಾಗತೀಕರಿಸಲ್ಪಟ್ಟು, ಮತ್ತೆ ಅಶ್ವವಾಹನದಲ್ಲಿ ಪವಡಿಸಿ, ಸರಕಾರೀ ಆಸ್ಪತ್ರೆಯ ಬಿರುದಾಂಕಿತ ಡಾಕ್ಟರರಿಂದ ಶುಭಾಗಮನ ಕೋರಲ್ಪಟ್ಟವನಾಗಿ, ಅಲ್ಲೆ ಮಂಚಸ್ಥನಾದನು.

ಬೇರೆ ಕೆಲವು ಮಕ್ಕಳೂ, ಮುದುಕರೂ....ಅದೇ ರೀತಿ ಮರವೇರಿ, ಗೇಟುಕಂಭದ ತುಟ್ಟ ತುದಿಯನ್ನೇರಿ ನೋಡುವುದುಂಟು. ಈ ರೀತಿ ಭೂತಲದಿಂದ ಉದ್ಧಾರವಾದವರ (ಅರ್ಥ:=ಭೂತಲಕ್ಕೆ ಬಿದ್ದು ಮೂರ್ಛೆ ಹೋಗಿ, ಜನರಿಂದ ಎತ್ತಲ್ಪಟ್ಟವರು) ಪ್ರಾಯಗಳನ್ನು ಹೇಳುವುದಾದರೆ ಕನಿಷ್ಠ ಪ್ರಾಯ ಮೂರು ವರ್ಷ, ಅತಿ ಹೆಚ್ಚೆಂದರೆ ಎಪ್ಪತ್ತಮೂರು; ಹಾಗಾದರೆ ಎಪ್ಪತ್ತಮೂರು ವರ್ಷ ಪ್ರಾಯವಾಗುವ ವರೆಗೆ ಮರವೇರ

ಬಹುದು! ನಮ್ಮ ಅತಿ ಪೂರ್ವಜರು ಹಾಗೆ ಮರವೇರುತಿದ್ದರೆಂಬುದಕ್ಕೆ ಬಲವಾದ ದಾಖಲೆ.

ಏಳು ಮಂದಿ ಸೈಕಲ್ ಅಡಿಗೆ ಬಿದ್ದು, ನಾಲ್ವರಿಗೆ ಜಟ್ಕಾ ಬಂಡಿಗಳು ಸವರಿಹೋಗಿ, ಮೇಲೆ ವರ್ಣಿಸಿದ ರೀತಿಯಲ್ಲಿ ಭೂಶಾಯಿ ಯಾಗುವುದರೊಳಗೆ ಪಹಿಲ್ವಾನರು ತಮ್ಮ ವ್ಯವಹಾರವನ್ನು ತೀರಿಸಿ ಹೊರಟರು. ಒಬ್ಬನಿಗೆ ಮುನ್ನೂರು—ಮತ್ತೊಬ್ಬನಿಗೆ ಏಳುನೂರು ಎಂದು ಕೇಳಿದೆ.

* * * *

ಹಾಗಾದರೆ, ಇನ್ನೊಮ್ಮೆ ಇನ್ನೋರ್ವ ಪಂಜಾಬಿ ಸಿಂಘನು ಬರುವ ತನಕ, ಪುರ್ಷ ಅಥವಾ ಇನ್ನೊಬ್ಬ ಪಹಿಲ್ವಾನನು, ಗುಲಾಬಿ ಪೇಟಾ ಕಟ್ಟಿ, ತೆಳ್ಳಗಿನ ಶರ್ಟಿನಲ್ಲಿ ಕಾವಲಿಗಳ ಹೃದಯದ, ಮತ್ತು ತುಪ್ಪದ ಮೂವತ್ತೆರಡು ಚಪಾತಿಗಳನ್ನು ನಿತ್ಯವೂ ಮರೆಯಿಸುವ ಆ ಅಕ್ಷಯ ಭಾಂಡಾರವನ್ನು ಮರೆಯಿಸಿ, ಪರಿಚಿತರೆಲ್ಲರಿಗೆ ಮುಗುಳ್ನಗೆಯಿಂದ 'ನಮಸ್ತೇ' ಹೇಳಿ, ಹತ್ತಿಪ್ಪತ್ತು ಮೆಚ್ಚುಗೆಯುವರಿಂದ ಆವರಿಸಲ್ಪಟ್ಟವ ನಾಗಿ, ಅಲ್ಲಲ್ಲಿ ನಗರದ ಸಣ್ಣಪುಟ್ಟ ಅಂಗಡಿಗಳ ಮುಂದೆ ತನ್ನ ದೇಹವನ್ನು ಪ್ರದರ್ಶಿಸುವನು.

ನಮ್ಮ ದೇಶದಲ್ಲಿ ಈ ಜನಾಂಗವಿಲ್ಲದಿದ್ದರೆ, ಪ್ರತಿಯೊಂದು ನಗರದ ಸಾವಿರಾರು ಜನರು ಆತ್ಮಹತ್ಯ ಮಾಡಿಕೊಳ್ಳುತ್ತಿದ್ದರೆಂದು ನಿಶ್ಚಯವಾಗಿ ಹೇಳಬಹುದು.

ಇವರನ್ನು ಸರಕಾರ ಪೋಷಿಸದಿದ್ದರೆ ಜನರಾದರೂ ಸಾಕಬೇಕು.

ಕುಸ್ತಿಯ ವಿಷಯ ನಾನು ನಿಮಗೊಂದು ವಿಷಯ ಹೇಳಬಲ್ಲೆ. ಅದು ಪೂರ್ಣ ಗಂಡುಸರ ಆಟ. ಒಂದೇ ಒಂದು ಕುಸ್ತಿಗೆ, ಒಬ್ಬಳಾದರೂ ಸ್ತ್ರೀ ಹಾಜರಾಗುವುದಿಲ್ಲ. ಆದಕಾರಣ, ಈ ಗಂಡು ಆಟವು ಅಮರವಾಗಲಿ ಎನ್ನುತ್ತೇನೆ.

೨೩. ಎರಡು ಪ್ರಸಿದ್ಧ ಭಾಷಣಗಳು
ಅಥವಾ ಒಂದು ಪ್ರಾಮಾಣಿಕ ವರದಿ

"ಶುಕವಾಣಿ" ಸಂಪಾದಕರು ಕೈಯಲ್ಲಿ ಕೆಂಪು ಪೆನ್ಸಿಲನ್ನು ತಿರುಗಿಸಿ, ಹೊಸ ವಾರ್ತಾ ವರದಿಗಾರರನ್ನು ಕುರಿತು "ತಿಳಿಯಿತೆ? ಸುದ್ದಿಗಳನ್ನು ಸಂಗ್ರಹಿಸಿ ಇದ್ದಕ್ಕಿದ್ದಂತೆ ಏನೊಂದೂ ಬಣ್ಣವಿಲ್ಲದೆ, ಪ್ರಾಮಾಣಿಕವಾಗಿ, ಸತ್ಯವಾಗಿ, ನೂರಕ್ಕೆ ನೂರು ಶುದ್ಧವಾಗಿ ಬರೆದು ತರಬೇಕು. ಹೋಗು ....ದಲ್ಲಿ........ಗಂಟೆಗೆ ರಾಸರ ಸಭೆ. ಹೋಗಿ ಅಲ್ಲಿ ಕುಳಿತು, ಭಾಷಣಗಳ ಪ್ರತಿಯೊಂದು ಶಬ್ದವನ್ನೂ ಒಂದಕ್ಷರವೂ ಬದಲಾಯಿಸದೆ ಬರೆದು ತಾ!" ಎಂದರು.

ವರದಿಗಾರನು ಕಾಗದದ ಹಾಳೆಗಳನ್ನೂ ಪೆನ್ಸಿಲನ್ನೂ ಹಿಡಕೊಂಡು ಹೊರಟುಹೋದನು. ಸಾಯಂಕಾಲ ತಿರಿಗಿ ಬಂದು, 'ನೂರಕ್ಕೆ ನೂರು ಶುದ್ಧ' ವರದಿಯನ್ನೊಪ್ಪಿಸಿದನು. ಆ ಪ್ರಾಮಾಣಿಕ ವರದಿ ಯಾನೆ "ಎರಡು ಪ್ರಸಿದ್ಧ ಭಾಷಣಗಳು" ಈ ಕೆಳಗಿನಂತೆ ಇದ್ದುವು:

ಭಾಷಣ ೧ (ಬಿಕ್ಕಲು-ನುಡಿ)

ಭಾಷಣಕಾರರು—ಬೂಸ್ರಾಪುಯ್ಯ

ಬಬಬಬ ಅಂದು ಭಭಭಭಭ—ಹಗಿನಿಯರೇ ಮುಮುಮು ಅತ್ತು ಅಧ್‌ಧ್‌ಧ್‌ಧ್‌ಯಕ್ಷರೇ,

ನನನನನನನನನ್ನು ಈ ಸಸ್ಸಭೆಗೆ ಭಾಭಾ-ಆಷಣಾ ಮಾಡಬೇ-ಏಕೆಂದು ಕೇಳಿಕೊಂಡದ್ದಕ್ಕೆ ನಿಮಗೆಲ್ಲಲ್ಲರೀಗೆ ನಾನು ಆಆಆಭಾರಿಯಾಗಿದ್ದೇನೆ.

ರಾರ್‌್ರರಾರಾರಾರಾರಾಜಕ್ಕಿಯ ಸ್‌ಂತಸ್ಥರು ನಾಲ್ನೂರು ಇದ್ದಾರೆ. ಅವರೆಲ್ಲರೂ ದೆದ್ದೆದ್ದೆದ್ದೆ(ಹಣೆಯ ಬೆವರುಜ್ಜುವರು)ದ್ದೇಶಕ್ಕಾಗಿ, ಬಹಳ ದದ್ದದ್ದದ್ದ(ಇಲ್ಲಿ ಪುನಃ ಬೆವರುಜ್ಜುವರು)ನಾನ್ನಾನ್ನಾನ್ನಾನ್ನಾನ್ನಾ(ಬೆವರು ಧಾರಾಕಾರವಾಗಿ ಇಳಿಯುವುದು.) ಹೆಹೆಹೆಹೆಹೆಹೆಹೆ (ನಡುಗುವರು) ಗಲ್ಲಗಲ್ಲಗಲ್ಲಗಲ್ಲಗಲ್ಲ (ಕಂಪನ ವಿಶೇಷ) ಪಸ್ಪಸ್ಪಸ್ಪಸ್ಪಸ್ (ಕರವಸ್ತ್ರ

ದಿಂದಲೂ ಎಡಕೈಯ ಅಂಗಿ ತುದಿಯಿಂದಲೂ ಹಣೆ ಮತ್ತು ಮುಖವನ್ನುಜ್ಜುವರು) ಪಾಪ್ಪಾಪ್ಪಪ್ಪ ಪ್ರಾಮಾಣಿಕವಾಗಿ ಸ್ವಸ್ವಸ್ವಸ್ವಸ್ವಸ್ವೇೀವೆ ಸಸಲ್ಲಿಸಿದವರು ಸಲ್ಲಿಸಿದವರು ಸಲ್ಲಿಸಿದವರು.

ಬಿಬಿಬಿಬಿಬಿಬಿಬಿಬಿ (ರೋಮಾಂಚನವಾಗಿ ವೈತೆಗೆವರು) ಬಿರೀಟಿಶರು ನಮ್‌ನಮ್‌ನಮ್‌ನಮ್‌ನಮ್‌ನಮ್ಮನ್ನು ಪಿಪಿಪಿಪಿಪಿಪಿಪಿಪಿಪಿಪಿ (ಸ್ವಲ್ಪ ನಡುಗಿ, ಸ್ವಲ್ಪ ಬೆವರುಜ್ಜಿ)ಡಿಸಿ, ನನಮ್ಮ ದೆದೆದೇಶದ ನೆನೆನೆನೆನೆನೆನ್ನೆನ್ನೆ (ಸೋಡಾ ಕೇಳುವರು).

(ಸೋಡಾ ಕುಡಿದಾದನಂತರ, ಹಣೆಯ ಮೇಲೆ ಹೊರಟ ಬೆವರನ್ನು ಪುನಃ ಕರವಸ್ತ್ರದಿಂದ ಉಜ್ಜಿ)ಮುಮುಮು—ಹಾಜನರೇ, ನೀೀಮ್ಮ ನಿಮ್ಮ ಸ್ವಾಸ್ವಾಹಾ ಅರ್ತ ಇದರಲ್ಲಿ ಯಾಯಾಯಾಯಾಯಾಯಾಯಾಯಾ(ಬಳಿಯಲ್ಲಿ ಕುಳಿತವರ ಕಡೆಗೆ ನೋಡಿ ಮುಗುಳ್ನಗೆ ನಕ್ಕು, ಬೆವರುಜ್ಜಿ, ಪುನಃ ಮುಖವನ್ನು ಗಂಭೀರ ಮಾಡುವರು).

ತತತತತತ—ಅಂತಿ ಕಕಕಕಕಕಕಕಕ (ಕೆಮ್ಮುವರು; ಅನಂತರ ಕಂಠ ಸಡಲಿಸಿ ಎಡಭುಜವನ್ನೂ ಮತ್ತೆ ಬಲಭುಜವನ್ನೂ ನೋಡಿ, ವಿಚಾರಮಗ್ನರಾಗಿ, ಗಂಭೀರವದನ ಹಿಡಿದು) ಗುಗುಗುಗುಗುಗುಗು—ಉಂಡು ಮಮಮ್ಮತ್ತು ಲಾಲಾಲಾಲಾಲಾಲಾಲಾಲಾಲಾ(ಕಿಸೆಗೆ ಕೈಹಾಕಿ, ಏನೋ ಹುಡುಕಿ, ಒಂದು ಕಾಗದ ತೆಗೆದು, ಬಿಡಿಸದೆನೇ ಪುನಃ ಕಿಸೆಗೆ ತುರುಕಿ, ‘ಅಹಂ’ ಎಂದು ಗಂಟಲು ಸರಿಪಡಿಸಿಕೊಳ್ಳುವರು).

(ಎದೆಯುಬ್ಬಿಸಿ)ಗೊಗೊಗೊಗೊಗೊಗೊ (ಇಲ್ಲಿ ಕರತಾಡನವಾಗುವುದು; ಬೂಸ್ವಾಮಯ್ಯನವರು ಪುನಃ ಒಂದಂಗುಲ ಎದೆಯುಬ್ಬಿಸುವರು)ಕಳ್ಕಳ್ಕಳ್ಕಳ್ಕಳ್(‘ಡಬ್ಬಲ್ ಸೋಡಾ ಬೇಕೆಂದು, ಎರಡು ಬೆರಳು ತೋರಿಸಿ, ತರಿಸಿ, ಸುರಿಸಿ, ಸೇವಿಸುವರು).

ಮಿಮಿಮಿಮಿಮಿಮಿಮಿತ್ರರೆ, (ಭಯಂಕರ ರೀತಿಯಲ್ಲಿ ಕೈಚಪ್ಪಾಳೆ) ಈಈಈಈಈಈಸನ್‌ಸನ್‌ಸನ್‌ಸನ್‌ಸನ್‌ಸನ್ ಈ ವೇಶದಲ್ಲಿ (ಎರಡು ಪೂರ್ಣ ಕ್ಷಣಗಳು ಕರತಾಡನ; ‘ವಾವ್ಹಾ’; ಮತ್ತು ‘ಹಿಯರ್ ಹಿಯರ್!) ನಾನಾನಾನಾನಾ ಆವೆಲ್ಲ ಹೆಹೆಹೆಹೆಹೆಹೆಹೆ (ಮುಖ ಉಜ್ಜುವರು; ಕರತಾಡನವಾಗುವುದು.)

ಒಂದು ನಿಮಿಷ ತಡೆದು, ಎಲ್ಲ ಕಡೆಗೂ ನೋಡಿ, ಉತ್ತೇಜನಕರ ವದನಗಳು ಕಂಡುಬರಲು, ಹರುಷಿತರಾಗಿ, ಧೈರ್ಯತಾಳಿ ಮುಗುಳ್ನಗೆ ನಕ್ಕು)ಬಬಬಬಬಬಬ ಅಂದುಗಳೇ!(ಕರತಾಡನ)ಭಿಭಿಭಿಭಿಭಿಭಿಭಿ(ಹಿಯರ್ ಹಿಯರ್!)ನನನನನನನ ('ವನ್ಸ್‌ಮೋರ್!') ಕ್ಕಿಸ್ಕಿಸ್ಕಿಸ್ಕಿಸ್ಕಿಸ್ (ಸೋಡಾ!)

ಗರ್ಗರ್ಗರ್ಗರ್ಗರ್ಗರ್ಗರ್ಗರ್ಗರ್........(ವ್ಹಾವ್ಹಾ) ಥಥಥಥಥಥಥಥ(ಎಡ ಕಿಸೆಗೆ ಕೈಹಾಕಿ ಪೆನ್ಸಿಲು ತೆಗೆದು ಬಲ ಕಿಸೆಗೆ ಹಾಕುವರು) ಡಿಗ್‌ಡಿಗ್‌ಡಿಗ್‌ಡಿಗ್‌ಡಿಗ್ (ಜೆವರುಜ್ಝೋಣ) ಗಸ್‌ಗಸ್‌ಗಸ್‌ಗಸ್‌ಗಸ್ (ಮೂರು ನಿಮಿಷ ಎಡೆಬಿಡದೆ ಕರತಾಡನ.)

ಬಬಬಬಬ ಅಂದುಗಳೇ! ಜೈಜೈಜೈಜೈಜೈ ಹಿಂದ್!

(ಬೂಸ್ರಾಮಯ್ಯನವರು 'ಜೈಹಿಂದ್' ಎನ್ನುತ್ತಲೇ, ಸಭಿಕರು ಎದ್ದು ಹೋಗುವುದಿತ್ತು. ಅಷ್ಟರೊಳಗೆ, ಕೂಂಕ್ರಪ್ಪನವರು ನೇರಾಗಿ, ಭಾಷಣ ವೇದಿಕೆಗೆ ಹೋಗಿ, 'ತ್ಯಾಲೆಂತ್ ತ್ಯಾಲೆಂತ್' ಎಂದರು. ಸಭೆಯು ಕುಳಿತುಬಿಟ್ಟಿತು. ಕೂಂಕ್ರಪ್ಪನವರು ಈ ಸಭೆಗೆ ವಿರೋಧಿ ಎಂದು, ಸಭಿಕರೊಳಗೆ ಯಾರೋ ಪಿಸುಮಾತಾಡಿದರು. ನಿಮಿಷಾರ್ಧದಲ್ಲಿ, ಈ ಹಗೆಗಾರನ ವಿಷಯವು ಇಡೀ ಸಭೆಗೆ ಮುಟ್ಟಿತು. "ನನಗೆ ಈ ದಿನ ಬೆಳಿಗ್ಗೇ ತಿಳಿದಿತ್ತು—ಈ ಆಸಾಮಿ, ನಮ್ಮನ್ನೆಲ್ಲ ಬಯ್ಯೋಕೆ ಬರುವನೆಂತ!" ಎಂದರೊಬ್ಬರು. ಅಷ್ಟರೊಳಗೆ ಕೂಂಕ್ರಪ್ಪನವರು ಭಾಷಣವನ್ನಾರಂಭಿಸಿ ಬಿಟ್ಟರು. ಅವರ ಮಾತುಗಳು ತೊದಲು ತೊದಲಾಗಿ ಹೊರಬೀಳಲಾರಂಭಿಸಿದುವು.)

ಭಾಷಣ ೨ (ತೊದಲ್ನುಡಿ)

ಭಾಷಣಕಾರರು—ಕೂಂಕ್ರಪ್ಪನವರು.

ಬಂದುಬಗಿನಿಯರೇ ಮತ್ತು ಮಾನ್ಯ ಅದ್ಯಕ್ತರೆ,

ನಾವಿಂದು ಇಲ್ಲಿ ತೇರಿದುದು ಏತಕ್ಕೆಂದು ನಿಮಗೆ ಗೊತ್ತು. ದೇತದ ತ್ವಾತಂತ್ರದ ಮಹಾ ತಂಗ್ರಾಮದಲ್ಲಿ ತಾವಿರಾರು ಲಕ್ತೋಪಲಕ್ತ, ದೇತ ಬಾಂದವರು ಕಾದಾಡಿದ್ದಾರೆ. ಅವರ ತೇವೆಯು ಅಗಾಧವಾದುದು. ತತ್ತವರು ಹಲವರು; ಇದ್ದೂ ತತ್ತವರು ತಾವಿರಾರು. ಬಲಿದಾನ ಕೊಟ್ಟ

ವರಲ್ಲಿ ಸಾವುಕಾರರು, ಕೃಷಿಕರು, ಜಮೀನ್ದಾರರು, ವಕೀಲರು, ಡಾಕ್ಟರರು-ಎಲ್ಲರೂ ಇರುವರು.

ಇಂದು ನಾವು ಸ್ವತಂತ್ರರಾಗಿದ್ದೇವೆ. ನಮ್ಮ ದಯಾಳು ಸರಕಾರವು, ಅಂದಿನ ಆ ಭೀಷಣ ಸಂಗ್ರಾಮದಲ್ಲಿ ಸ್ವಾರ್ಥತ್ಯಾಗ ಮಾಡಿ ಹೋರಾಡಿ ಕಷ್ಟಾನುಭವ ಮಾಡಿದವರಿಗೆಲ್ಲ ಭೂದಾನ ಮಾಡುವೆವೆಂದು ಹೇಳಿರುತ್ತಾರೆ. ಕಾರಾಗ್ರಹಕ್ಕೆ ಹೋದವರೆಲ್ಲ ರಾಜಕೀಯ ಸಂತ್ರಸ್ತರೆಂದು................"

(ಇಲ್ಲಿ, ಸಭಿಕರು ಧಕ್ಕನೆ ಉದ್ರೇಕಗೊಂಡು, ಮೇಜು ಕುರ್ಚಿಗಳಿಗೆ ಕೈಕಾಲುಗಳನ್ನು ಬಡಿದರು. 'ಡೌನ್ ವಿತ್ ಕೊಂಕ್ರಪ್ಪಾ'-'ಕೊಂಕ್ರಪ್ಪಾ ಮುರ್ದಾಬಾದ್' ಎಂಬ ಕೂಗು ಎದ್ದಿತು. ಹತ್ತೆಂಟು ಮಂದಿ ಬಾಯಿಗೆ ಎರಡು ಬೆರಳುಗಳನ್ನಿಟ್ಟು 'ಶುವೀ ಶುವೀ' ಎಂದು 'ಶೀಟಿ' ಹೊಡೆದರು. ಸುಯ್ಯೆಂದು ಶಬ್ದ ಮಾಡುತ್ತ, ಒಂದು ಕೊಳೆತ ನೀರುಳ್ಳಿ ಬಂದು ಕೊಂಕ್ರಪ್ಪನವರ ಮುಖಕ್ಕೆ ಬಿತ್ತು. ಕೊಂಕ್ರಪ್ಪನವರು ಕೊಡೆ ಬಿಟ್ಟು ಓಡಿದರು. ಸಭೆಗೆ ನೀರುಳ್ಳಿ ತಂದವರಾರೆಂದೂ, ತಂದರೂ ಅದರೊಳಗೆ ಒಂದು ನೀರುಳ್ಳಿ ಅಷ್ಟುಬೇಗ ಹೇಗೆ ಕೊಳೆಯಿತೆಂದೂ ಯಾರೂ ಅರಿಯದಾದರು. ಸಭೆಗೆ ಸಭೆಯೇ ಎದ್ದು ಹೋಗಿ, ಕೊಂಕ್ರಪ್ಪನೆಂದು ಗ್ರಹಿಸಿ ಅಧ್ಯಕ್ಷರನ್ನು ಹಿಡಿದು, ಮತ್ತೆ ಬಿಟ್ಟುಬಿಟ್ಟರು. ಆ ಮೇಲೆ ಜನಗಣ ಮನವಿಲ್ಲದೆ ಬರಖಾಸ್ತಾಯಿತು.)

* * * *

ಆದರೆ, ಏನಾಶ್ಚರ್ಯ! 'ಶುಕವಾಣಿ'ಯಲ್ಲಿ ಆ ಎರಡೂ ಭಾಷಣಗಳ ಸತ್ಯ ವರದಿಯು ಪೂರ್ಣ ರೂಪ ಬದಲಾಯಿಸಿ ಹೀಗೆ ಪ್ರಕಟವಾಗಿತ್ತು: "ರಾಸರ ಸಭೆಯು ಬನರ ಅಧ್ಯಕ್ಷತೆಯಲ್ಲಿ ಅತ್ಯಂತ ಯಶಸ್ವಿಯಾಗಿ ಜರಗಿತು. ಸಾಹುಕಾರ ಭೂಸ್ವಾಮಯ್ಯನವರೂ-ತಲೆಬೇಡು ಕೊಂಕ್ರಪ್ಪನವರೇ ಮೊದಲಾದವರು ಇಂದಿನ ರಾಜಕೀಯ ಪರಿಸ್ಥಿತಿ, ದೊರೆಯಬೇಕಾದ ಸೌಲಭ್ಯ-ಸೌಕರ್ಯಗಳು, ಜನತೆಯ ತ್ಯಾಗ ಸೇವೆಗಳು, ಸರಕಾರದ ಕರ್ತವ್ಯ, ಪ್ರಜೆಗಳ ಹೊಣೆಗಾರಿಕೆ, ಮುಂತಾದುವನ್ನು ಅತಿ ಸರಲವಾದ ಶೈಲಿಯಲ್ಲಿ ಎಲ್ಲರಿಗೂ ಮನಃಖಚಿತವಾಗುವಂತೆ ವಿವರಿಸಿ

ಭಾಷಣಮಾಡಿದರು. ಅಧ್ಯಕ್ಷರ ಉಪಸಂಹಾರ ಭಾಷಣವಾದ ಅನಂತರ ಉಪಾಹಾರ-ಗ್ರೂಪ್ ಫೋಟೋಗಳೊಂದಿಗೆ, 'ಜನಗಣಮನ' ಗೀತವಾಗಿ, ಅಂದಿನ ಸಮಾರಂಭವು ಕೊನೆಗೊಂಡಿತು."

ವರದಿ ಕೊಟ್ಟವ ಆಫೀಸು ಕುರ್ಚಿಯಲ್ಲೆ ಮೂರ್ಛೆಹೋದ!

---

೨೪. ಪ್ರಾಣಿದಯೆ

ಪ್ರಸ್ತಾವನೆ

'ಪ್ರಾಣಿದಯೆ' ಎಂಬುದು ಎರಡೂ ಕಡೆಯೂ ಚೂಪಾಗಿರುವ ಕತ್ತಿಯಂತೆ—ಎರಡು ಅರ್ಥವುಳ್ಳದು. 'ನಾಲ್ಕು ಕಾಲಿನ ಇತರ ಪ್ರಾಣಿಗಳ ಮೇಲೆ ದಯೆ' ಎಂದು ಒಂದು ಅರ್ಥ; 'ಎರಡು ಕಾಲಿನ ಪ್ರಾಣಿಯಾದ ತನ್ನ ಮೇಲೂ ದಯೆ' ಎಂದು ಇನ್ನೊಂದು ಅರ್ಥ. ಇದಕ್ಕಿಂತ ಹೆಚ್ಚು ಅರ್ಥವಿದೆಯೆಂದು ತರ್ಕಿಸಿ ತಲೆ ಕರಡು ಮಾಡಿಕೊಳ್ಳುವುದು ಮೂರ್ಖತನವಾಗಿದೆ.

ವಿವರಣೆ

(ಅ) 'ಪ್ರಾಣಿ' ಎಂದರೆ ನಾಲ್ಕು ಕಾಲಿನ ಒಂದು ಮೃಗ; (ಒಮ್ಮೊಮ್ಮೆ, ಸಂದರ್ಭಾನುಸಾರ ಸ್ವತಃ ಮನುಷ್ಯ).

(ಆ) 'ದಯೆ' ಎಂದರೆ 'ಆ ಪ್ರಾಣಿಯನ್ನು ನೋಡಿ, ಹೃದಯದಲ್ಲಿ ಉಂಟಾಗುವ ಒಂದು ಮಧುರ ಭಾವನೆ.

(ಇ) 'ಪ್ರಾಣಿದಯೆ' ಎಂಬ ಶಬ್ದಗಳು ಒಟ್ಟಾಗಿ ಉಚ್ಚರಿಸಲ್ಪಡುವಲ್ಲೆಲ್ಲ ಮಾತ್ರ, 'ಪ್ರಾಣಿ' ಎಂದರೆ "ಮಾರಿಗುಡಿಯಲ್ಲಿ ಕಡಿಯಲ್ಪಡಲು ಕೊಂಡುಹೋಗುವ ಕುರಿ, ಕೋಳಿ ಮತ್ತು ಕೋಣ" ಎಂಬುದಾಗಿ ತಿಳಿಯತಕ್ಕುದು.

(ಈ) ಇತರ ಚತುಷ್ಪಾದ, ದ್ವಿಪಾದ, ಏಕಪಾದ, ತ್ರಿಪಾದ ಪಂಚಪಾದ (ಅವು ಇದ್ದರೆ) ಪ್ರಾಣಿಗಳು ಈ ವರ್ಗದಲ್ಲಿ ಸೇರುವುದಿಲ್ಲ. ಅವುಗಳ ದಯೆಯನ್ನು ಅವುಗಳೇ ಮಾಡಿಕೊಳ್ಳತಕ್ಕುದು. ಕುರಿ, ಕೋಳಿ ಮತ್ತು

ಕೋಣ—ಈ ಮೂರು ಪ್ರಾಣಿಗಳ ವಿಷಯ ಮಾತ್ರ 'ಪ್ರಾಣಿದಯೆ' ಎಂಬುದು ಅನ್ವಯಿಸುವುದು.

ಗೋವುಗಳು

೨. ದನಗಳು ಮಾರಿಗುಡಿಯಲ್ಲಿ ಕಡಿಯಲ್ಪಡುವುದಿಲ್ಲ. ಏಕೆಂದರೆ; ದೇವಿಗೆ ದನಗಳ ಬಲಿ ಪ್ರೀಯವಲ್ಲ. ಆದಕಾರಣ, ಗೋವುಗಳ ವಧೆಯ ವಿಷಯವಾಗಿ ಇಲ್ಲಿ ಪ್ರಶ್ನೆ ಏಳುವುದಿಲ್ಲ.

ಎಲ್ಲಿ ಕಡಿಯಬಹುದು

೩. ಮೇಲೆ ಹೇಳಿರುವಂತೆ, 'ಮಾರಿಗುಡಿ'ಯಲ್ಲಿ ಮಾತ್ರ ಕುರಿ ಕೋಳಿ ಮತ್ತು ಕೋಣ ಇವುಗಳನ್ನು ಕಡಿಯಬಾರದು. ಇತರ ಕಡೆಗಳಲ್ಲಿ, ಅಂದರೆ, ಮನೆ, ಹೊಟೇಲುಗಳಲ್ಲಿ ಕಡಿದರೆ, 'ಪ್ರಾಣಿದಯೆ'ಯನ್ನು ಮೀರಿ ದಂತಾಗುವುದಿಲ್ಲ. (ಆದರೆ, ಕುರಿ ಮತ್ತು ಕೋಣ ಇವೆರಡು ಮಾತ್ರ ವಧಾಖಾನೆಯಲ್ಲೇ ಕಡಿಯಲ್ಪಡಬೇಕು. ಇಲ್ಲದಿದ್ದರೆ ದಯೆಯಲ್ಲಿ ಸ್ವಲ್ಪ ಚ್ಯುತಿ ಬರುವ ಸಂಭವವುಂಟು). ಕೋಳಿಯ ಮಟ್ಟಿಗೆ ಎಲ್ಲಿಯೂ ಯಾರೂ ಎಷ್ಟೂ ಕಡಿಯಬಹುದು.

ಕೋಳಿ ತತ್ತಿ

೪. ಇದು, ಕೋಳಿಯ ಭ್ರೂಣವೆನಿಸಲ್ಪಡುವುದಾದರೂ, ಕೋಳಿಗಿಂತ ಎಷ್ಟೋ ಶ್ರೇಷ್ಠನಾಗಿರುವ ಮನುಷ್ಯನ ಸೌಕರ್ಯಕ್ಕಾಗಿ ಇವುಗಳನ್ನು ತಿನ್ನ ಬಹುದು. ಬುದ್ಧನ, ಹರ್ಷನ, ಅಶೋಕನ ಕಾಲದಲ್ಲಿ ಕೂಡ ಕೋಳಿತತ್ತಿ ತಿನ್ನುವುದು ನಿಷೇಧಿಸಲ್ಪಟ್ಟ ದಾಖಲೆಗಳಿಲ್ಲ. ಕ್ಷೀಣಿಸುವ ಕೆಲವು ಅಸ್ವಸ್ಥ ಗಳಲ್ಲಿ ಇದನ್ನು ಔಷಧರೂಪವಾಗಿ ಸೇವಿಸುವುದರಿಂದಲೂ, ಕ್ಷೀಣಿಸದ ಸ್ವಸ್ಥಗಳಲ್ಲಿ ಇನ್ನು ಮುಂದೆ ಯಾವಾಗಲೂ ಕ್ಷೀಣಿಸದಂತೆ ಸೇವಿಸುವುದ ರಿಂದಲೂ, ಪ್ರಾಣಿಶ್ರೇಷ್ಠನಾದ ಮನುಷ್ಯನು ಇವುಗಳನ್ನು ಎಷ್ಟೂ ತಿನ್ನ ಬಹುದು. ಇಲ್ಲಿ "ಕುಕ್ಕುಟ ಭ್ರೂಣಹತ್ಯಾಪರಾಧ"ವ ತಟ್ಟುವುದಿಲ್ಲ.

ಪ್ರಾಣಿದಯಾ ಪ್ರಚಾರಕರು ಕೋಳಿ ತಿನ್ನಬಹುದೇ?

೫. ಪ್ರಾಣಿದಯಾ ಪ್ರಚಾರಕರು ಕೋಳಿ ತಿನ್ನಬಹುದೇ ಎಂಬ ಪ್ರಶ್ನೆ ಯನ್ನು ಕೆಲವು ಕುತರ್ಕವಾದಿಗಳು ಕೇಳುವುದುಂಟು. ನಾವು ಧೈರ್ಯ

ವಾಗಿ, "ತಿನ್ನಬಹುದು," ಎನ್ನುತ್ತೇವೆ, ಮತ್ತು ಅದಕ್ಕೆ ಈ ಕೆಳಗಿನ ಕಾರಣ ಗಳನ್ನೂ ಕೊಡುತ್ತೇವೆ:

(ಅ) ತಿನ್ನಲ್ಪಡುವ ಕೋಳಿಯು ಬಹಿರಂಗವಾಗಿ ಕಡಿಯಲ್ಪಡುವುದಿಲ್ಲ; ಮನೆ ಅಥವಾ ಹೊಟೇಲಿನ ಹಿಂಬದಿಯ ಜಗಲಿಯಲ್ಲಿ ಅದರ 'ಫನಾ' ನಡೆಯುತ್ತದೆ.

(ಆ) ಅದನ್ನು ಕೊಲ್ಲುವಾಗ, ಅದರ ಹಣೆಗಾಗಲಿ ಕಡಿಯುವವನ ಹಣೆಗಾಗಲಿ ಕುಂಕುಮ ಹಚ್ಚುವುದಿಲ್ಲ; ಹೂಮಾಲೆ ಹಾಕುವುದೂ ಇಲ್ಲ; ಮತ್ತು ವಾದ್ಯಮಾಡುವುದಿಲ್ಲ; ಕೋಲಾಹಲವಿಲ್ಲದೆ ಕಡಿದು, ಸದ್ದಿಲ್ಲದೆ ಅಡುಗೆಯಾಗುತ್ತದೆ.

(ಇ) ಕೆಲವೊಮ್ಮೆ ಕಷಾಯದ ಬಗ್ಗೆ ಅದು ಅವಶ್ಯ ಇರುತ್ತದೆ. ಎರಡು ಕಾಲಿನ ಪ್ರಾಣಿಯ ಜೀವವುಳಿಯಬೇಕಾದರೆ, ಎರಡು ಕಾಲು ಮತ್ತು ಎರಡು ರೆಕ್ಕೆಗಳ ಒಂದು ಚಿಕ್ಕ ಪ್ರಾಣಿಯನ್ನು ಉಪಯೋಗಿಸುವುದು ತಪ್ಪಾಗುವುದಿಲ್ಲ. ಏಕೆಂದರೆ, ಒಬ್ಬ ಮನುಷ್ಯನ ಜೀವವು ಅನೇಕ ಬಾರಿ, ನಾಲ್ಕು ಕೋಳಿಗಳ ಜೀವಕ್ಕೆ ಸಮಾನವಾಗಿರುವುದುಂಟು.

ಕುರಿಯ ವಿಚಾರ

೬. ಸರಿಯಾಗಿ ನೋಡಿದರೆ ಕುರಿಯಂತಹ ಪ್ರಾಣಿಯು ಹುಟ್ಟಲೇ ಬಾರದು. ಏಕೆಂದರೆ ಅದಕ್ಕೆ ಮಿದುಳು ಕಡಿಮೆ. ಆದಕಾರಣವೇ 'ಕುರಿಯಂತಹ ಜನ' ಎಂದು ಭೋಳೇಜನರನ್ನು ಉಪಮಾನರೂಪವಾಗಿ ಹೇಳುತ್ತಾರೆ. 'ಓ ಕುರಿ ಜನಗಳೇ' ಎಂದು ಮಿಶ್ಯನರಿಗಳು ಹೇಳುವುದರಲ್ಲಿ ಒಂದು ಅರ್ಥವಿದೆ. ಇಂಗ್ಲಿಷರಲ್ಲಂತೂ 'ಶೀಪಿಶ್ ಲುಕ್' ಮುಂತಾದ ಪ್ರಯೋಗಗಳಿವೆ. ಆದರೆ, ಅಷ್ಟು ಮಾತ್ರದಿಂದ ಅದನ್ನು ಕೊಲ್ಲಬೇಕೆಂಬ ನ್ಯಾಯವು ಸ್ಥಾಪನೆಯಾಗುವುದಿಲ್ಲ. ಹುಟ್ಟದಿದ್ದರೆ ಚೆನ್ನಾಗಿತ್ತು; ಈಗ, ಹುಟ್ಟಿದ ಮೇಲೆ ನಾಲ್ಕು ಕಂಬಳಿಗಳನ್ನು ತಯಾರಿಸಿ, ಉಳಿದ ಜೀವವನ್ನು ದ್ವಿಪಾದ ಪ್ರಾಣಿಯ (ಮನುಷ್ಯನ) ಸೌಕರ್ಯಕ್ಕೆ ಉಪಯೋಗಿಸಬಹುದು. ಮಾತ್ರ, ದೇವಿ ಗುಡಿಯ ಮುಂದೆ ಕೊಲ್ಲುವುದು ಪಾಪ.

ಮನೆ ಲೆಕ್ಕ—ಗುಡಿ ಲೆಕ್ಕ

೭. "ಗುಡಿಯಲ್ಲಾದರೆ, ವರುಷಕ್ಕೊಮ್ಮೆ ಜಾತ್ರೆಯ ಸಮಯದಲ್ಲಿ ಮಾತ್ರ ಕೆಲವೇ ಕುರಿ—ಕೋಳಿ—ಕೋಣಗಳನ್ನು ಕಡಿಯುವರು. ಆದರೆ, ಮನೆಗಳವರ ಬಗ್ಗೆ, ಪ್ರತಿ ಊರಿನ ಪ್ರತಿಯೊಂದು ವಧಾಖಾನೆಗಳಲ್ಲಿ ಕಡಿಯಲ್ಪಡುವ ಪ್ರಾಣಿಗಳೆಷ್ಟು? ರವಿವಾರದ ರಜಾದಿನ (ಇದು ಮಾಂಸದ ಮಾರ್ಕೆಟುಗಳಿಗೂ ವಧಾಖಾನೆಗಳಿಗೂ ಇದ್ದರೆ) ಬಿಟ್ಟು ಉಳಿದ ದಿನಗಳ ಮೊತ್ತವೆಷ್ಟಾಗುವುದು? ಅದಲ್ಲದೆ, ಬೇರೆ ಬೇರೆ ಕಡೆಗಳಲ್ಲಿ ಒಳ್ಳೇ ಪುಷ್ಟಿಕರವಾದ ಚತುಷ್ಪಾದ ಹಾಗೂ ದ್ವಿಪಾದ ಪ್ರಾಣಿಗಳ ಘನಾ ಎಷ್ಟು ನಡೆಯುತ್ತಿದೆ?" ಎಂದು ಪ್ರಶ್ನಿಸುವವರಿಗೂ ಕಡಿಮೆಯಿಲ್ಲ. ಆದರೆ, ಇದೆಲ್ಲವೂ ಪುನಃ ಕುತರ್ಕ. ಗುಡಿ ಮುಂದೆ ಕಡಿಯಬಾರದು ಎಂದು ಹೇಳಿದುದಕ್ಕೆ ತಾವೂ ವಾದಿಸಬೇಕು ಎಂಬ ಹಟದಿಂದ ಹೇಳುವ ಮಾತು. ಅಂಥ ಪ್ರಶ್ನಾರ್ಥಿಗಳಿಗೆ ನಾವು ಹೀಗೆ ಹೇಳುತ್ತೇವೆ: "ಗುಡಿ ಮುಂದೆ ಸಾರ್ವಜನಿಕರ ಎದುರಿಗೆ ಕಡಿದರೆ, ಅಹಿಂಸೆಯು ನಾಸ್ತಿ. ಹೆಚ್ಚು ಮಂದಿ ಒಂದೇ ಸಲ ಅದನ್ನು ನೋಡಿ, ಹಿಂಸಾತುರರಾಗುತ್ತಾರೆ. ಗುಡಿಯ ಪಾವಿತ್ರ್ಯ ಕೆಡುತ್ತದೆ. ದೇವಿಗೆ ತನ್ನ ಮಕ್ಕಳ ಬಲಿ ಬೇಕಾಗಿಲ್ಲ. ಹಾಗೆ ವಿಶೇಷ ಆಸೆಯಾದರೆ, ಮನೆಯಲ್ಲೋ ಹೊಟೇಲಿನಲ್ಲೋ ಒಂದೆರಡು ಕಡಿದು ತಿಂದರೆ, ಹೊರಗಿಂದ ಹೊರಗೆ ಆದಂತಾಯಿತು. ಮನೆಯಲ್ಲಿಯೂ ಕಡಿಯುವುದು, ಹೊಟೇಲಿನಲ್ಲೂ ಕಡಿಯುವುದು, ವಧಾಖಾನೆಯಲ್ಲೂ ಕಡಿಯುವುದು—ಮತ್ತೆ ಗುಡಿಯಲ್ಲಿಯೂ ಕಡಿಯುವುದು—ಅಂತು, ನಾಲ್ಕೂ ಕಡೆಗಳಲ್ಲಿ ಹತ್ಯವೆ? ಗುಡಿಯನ್ನಾದರೂ ಬಿಡೋಣ; ದೇವಸಾನಿಧ್ಯವೊಂದನ್ನು ಪವಿತ್ರವಾಗಿರಿಸಿ, ಅಹಿಂಸೆಯನ್ನಾರಂಭಿಸೋಣ."

ಮೀನಿನ ವಿಚಾರ

೮. "ಮೀನು ತಿನ್ನುವ ಮಂದಿ ಬಹಳ—ಇದೂ ಹತ್ಯವಲ್ಲವೆ?" ಎಂಬ ಕಠಿಣ ಪ್ರಶ್ನೆಯೊಂದೂ ಬರುತ್ತಿದೆ. ಆದರೆ, ನಿಜವಾಗಿಯೂ ಇದು ಕಠಿನವಲ್ಲ.

ಏಕೆಂದರೆ, (ಅ) ಮೀನನ್ನು ಯಾರೂ ಕೊಲ್ಲುವುದಿಲ್ಲ; ಅದು, ತಾನಾಗಿ ಬಲೆಗೆ ಬಂದು ಬಿದ್ದು ಆತ್ಮಹತ್ಯ ಮಾಡಿಕೊಳ್ಳುತ್ತದೆ.

(ಆ) ನೆಲ ಸಣ್ಣದು, ಜಲ ದೊಡ್ಡದು. ನೆಲದ ಮೇಲಿರುವ ಪ್ರಾಣಿಗಳಿಗಿಂತ ಹೆಚ್ಚು ಜಲದಲ್ಲಿವೆ. ಜಲದಲ್ಲಿ ಮೀನನ್ನು ದಿನಂಪ್ರತಿ ತೆಗೆಸದಿದ್ದರೆ, ಅವುಗಳು ಸಾಗರಗಳಲ್ಲಿ ತುಂಬಿ ತುಂಬಿ, ಸಾಗರಗಳ ನೀರು ಮತ್ತಿಷ್ಟು ಉಕ್ಕಿ ('ಕಾಗೆಯೂ ಹೂಜಿಯೂ' ಎಂಬ ಪಾಠವನ್ನು ದಯಮಾಡಿ ಓದಿರಿ!) ಮತ್ತಿಷ್ಟು ನೆಲವು ಜಲದಡಿಗೆ ಹೋದೀತು. ಮತ್ತೆ ಜೀವಂತ ಮೀನು ತಂದು ಯಾರೂ ನಿಷ್ಠೂರ ಮನಸ್ಸಿನಿಂದ ಕಡಿಯುವುದಿಲ್ಲ. ನೀರಿನಿಂದ ಬಲೆ ಎತ್ತುವಾಗಲೇ ಅದು ತಾನಾಗಿ ಪ್ರಾಣಬಿಡುತ್ತದೆ.

ಆ ಮೇಲೆ, ಗೋಂಕರ ಕಪ್ಪೆ, ಕಾಡು ಪಾರಿವಾಳ ಮುಂತಾದುವುಗಳ ಪ್ರಶ್ನೆಯೂ ಬರುತ್ತದೆ. ಅವುಗಳೆಲ್ಲವೂ ಅಲಕ್ಷಿಸಲ್ಪಡುವಷ್ಟು ಅಲ್ಪ ಪ್ರಮಾಣದಲ್ಲಿ ಅಡುಗೆ ಮನೆ ಸೇರುವುವಾದ ಕಾರಣ, ಉಲ್ಲೇಖನೀಯವೆಂದು ನಾವೆಣಿಸುವುದಿಲ್ಲ.

ಉಪಸಂಹಾರ

೯. ಸಾರಾಂಶವೇನೆಂದರೆ, ನಾವು ಸಾರ್ವಜನಿಕ ಜೀವನದಲ್ಲಿ ಅಹಿಂಸೆಯನ್ನು ತೋರಿಸಲೇ ಬೇಕು. ಪ್ರಾಣಿದಯೆಯು ಬಹಿರಂಗವಾಗಿ ಮಾತ್ರ ಪ್ರದರ್ಶಿಸಲ್ಪಡಬೇಕು.